ಮಂಟೇಸ್ವಾಮಿ ಕಥಾ ಪ್ರಸಂಗ

ಎಚ್. ಎಸ್. ಶಿವಪ್ರಕಾಶ

ಬೆಳ್ಳಿ ಚುಕ್ಕಿ
ಬುಕ್ ಟ್ರಸ್ಟ್

ಬಿ.ಬಿ.ಟಿಯ ಪರಿಚಯ

ಆತ್ಮೀಯ ಮಿತ್ರರೆ,

ಬೆಳ್ಳಿಚುಕ್ಕಿ ಬುಕ್‌ಟ್ರಸ್ಟಿನ ಉದ್ದೇಶ ಲಾಭ ಮಾಡುವುದಲ್ಲ. ಬದಲಿಗೆ, ಜನಪರ, ವೈಚಾರಿಕ, ಬಂಡಾಯ ಹಾಗೂ ಕ್ರಾಂತಿಕಾರಿ ಸಾಹಿತ್ಯವನ್ನು ಸರಳವಾಗಿ ಹಾಗೂ ಆದಷ್ಟು ಕಡಿಮೆ ದರದಲ್ಲಿ ಪ್ರಕಟಿಸುವುದು ಹಾಗೂ ವಿತರಿಸುವುದು ನಮ್ಮ ಗುರಿ. ಕನ್ನಡದಲ್ಲಿ, ಕನ್ನಡ ನಾಡಿನಲ್ಲಿ ಮತ್ತೂ ಬೆಳೆಯಬೇಕಾಗಿರುವ ವೈಚಾರಿಕ ಚಿಂತನೆಗೆ, ಪ್ರಗತಿಪರ ಚಳುವಳಿಗೆ ಬೆಂಬಲವಾಗಿ ನಿಲ್ಲುವುದು ನಮ್ಮ ಆಶಯ.

ಹಾಗಾಗಿ ಕೆಲವು ಪೂರ್ಣಾವಧಿ ಕಾರ್ಯಕರ್ತರನ್ನು ಹಾಗೂ ಹಲವು ಸ್ವಯಂಸೇವಾ ಕಾರ್ಯಕರ್ತರನ್ನು ಹೊಂದಿರುವ ಟ್ರಸ್ಟ್ ಜನರ ಸಾಹಿತ್ಯವನ್ನು ಜನರ ಬಳಿ ಒಯ್ಯಲು ಈ ಕೆಳಕಂಡ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಸೃಜನಶೀಲ ಬರಹಗಳನ್ನು ಹಾಗೂ ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸಿರುವ ಜನಪರ ಸಾಹಿತ್ಯವನ್ನು ಪ್ರಕಟಿಸಿ, ಅಚ್ಚಿನ ಬೆಲೆಗೇ ಮಾರಾಟ ಮಾಡುವುದು.
2. ಬೇರೆ ಬೇರೆ ಪ್ರಕಾಶಕರು ಹೊರತಂದಿರುವ 'ಜನಪರ ಸಾಹಿತ್ಯ'ವನ್ನು ಶೇಷಾದ್ರಿಪುರಂನಲ್ಲಿ ಪ್ರಾರಂಭವಾಗಿರುವ ನಮ್ಮ ಪುಸ್ತಕ ಮಳಿಗೆಯಲ್ಲಿ ಆದಷ್ಟು ಹೆಚ್ಚಿನ ರಿಯಾಯಿತಿ ನೀಡಿ ಮಾರಾಟ ಮಾಡುವುದು.
3. ಹಳ್ಳಿಗಳಲ್ಲಿ, ಸಣ್ಣ ಪಟ್ಟಣಗಳಲ್ಲಿ, ಕಾಲೇಜುಗಳಲ್ಲಿ, ಫ್ಯಾಕ್ಟರಿ ಗೇಟುಗಳ ಎದುರು ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸುವುದು.
4. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಶಿಬಿರಗಳನ್ನು, ಉಪನ್ಯಾಸಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುವುದು, ಇತ್ಯಾದಿ.

ನಿಮ್ಮ ಸಹಾಯವನ್ನು ನಾವು ಅಪೇಕ್ಷಿಸುತ್ತಿದ್ದೇವೆ.

ಸ್ನೇಹಿತರೇ, ಇದು ಕೇವಲ ಕೆಲವರ ಟ್ರಸ್ಟಲ್ಲ. ಇದು ನಮ್ಮೆಲ್ಲರ ಟ್ರಸ್ಟ್, ನಾವೆಲ್ಲಾ ಸೇರಿ ಬೆಳೆಸಬೇಕಾದ ಟ್ರಸ್ಟ್. ನೀವು ಸಹ ಈ ಕೆಲಸದಲ್ಲಿ ಕೈಗೂಡಿಸಿದಾಗ ಮಾತ್ರ ನಮ್ಮೆಲ್ಲರ ಆಶಯ ವಾಸ್ತವವಾಗಲು ಸಾಧ್ಯ. ನೀವು ಈ ಮೂಲಕವೂ ಈ ಪ್ರಯತ್ನದಲ್ಲಿ ಒಂದಾಗಬಹುದು.

1. ನೀವು ಬರಹಗಾರರಾಗಿದ್ದರೆ ಅಥವಾ ಅನುವಾದಕರಾಗಿದ್ದರೆ ಅಥವಾ ಕಲಾವಿದರಾಗಿದ್ದರೆ ಪುಸ್ತಕ ಪ್ರಕಾಶನದಲ್ಲಿ ದೊಡ್ಡ ಕೊಡುಗೆಯನ್ನೇ ನೀಡಬಹುದು.
2. ನೀವು ಪ್ರಕಾಶಕರಾಗಿದ್ದರೆ ನಿಮ್ಮ ಪುಸ್ತಕಗಳನ್ನು ಸಾಧ್ಯವಾದಷ್ಟು ಹೆಚ್ಚಿನ ರಿಯಾಯಿತಿಯಲ್ಲಿ ಕೂಡಲೇ ತಲುಪಿಸಿ ಜನರ ಬಳಿ ಪುಸ್ತಕ ಒಯ್ಯುವ ನಮ್ಮ ಪ್ರಯತ್ನದಲ್ಲಿ ಸಹಕರಿಸಬಹುದು.
3. ಈಗಾಗಲೇ ಹಲವಾರು ವಾಲಂಟರಿ ಮಾರಾಟಗಾರರು ಮಾಡುತ್ತಿರುವಂತೆ ಬಿ.ಬಿ.ಟಿ ಪ್ರಕಟಿಸುವ 10 ಅಥವಾ 20 ಪ್ರತಿಗಳನ್ನು ಕೊಂಡು ಜನರ ಬಳಿಗೆ ಒಯ್ದು ಮಾರಾಟ ಮಾಡಬಹುದು.
4. ಅಥವಾ ಬಿ.ಬಿ.ಟಿ.ಗೆ 1,000 ವಂತಿಗೆ ನೀಡಿ ನೀವು ಸದಸ್ಯರಾದರೆ 10 ವರ್ಷಗಳ ತನಕ ಟ್ರಸ್ಟ್ ಪ್ರಕಟಿಸುವ ಪುಸ್ತಕಗಳನ್ನು ಉಚಿತವಾಗಿ ತಲುಪಿಸಲಾಗುವುದು.
5. 10,000 ವಂತಿಗೆ ಕೊಟ್ಟು ಅಜೀವ ಸದಸ್ಯತ್ವ ಪಡೆದವರಿಗೆ ಅಜೀವ ಪರ್ಯಂತ ಟ್ರಸ್ಟ್ ಪ್ರಕಟಿಸುವ ಹಾಗೂ ವಿತರಿಸುವ ಪುಸ್ತಕಗಳ ಒಂದೊಂದು ಪ್ರತಿಯನ್ನು ತಲುಪಿಸಲಾಗುವುದು.

ಗೆಳೆಯರೆ, ಇವು ಕೆಲವು ಸಲಹೆಗಳು ಮಾತ್ರ. ನೀವು ಈ ಕೆಲಸದಲ್ಲಿ ಸಹಕರಿಸಲು ಬಯಸಿ ಸಂಪರ್ಕಿಸಿದಲ್ಲಿ ನಾವು ನೀವು ಒಂದಾಗಿ ದುಡಿಯಬಹುದು, ಕನ್ನಡ ಸಾಹಿತ್ಯಕ್ಕೆ ಜನಪರ ಸಾಹಿತ್ಯದ ನವ ಮೆರುಗನ್ನೇ ನೀಡಬಹುದು.

ಮಂಟೇಸ್ವಾಮಿ ಕಥಾ ಪ್ರಸಂಗ

ಎಚ್. ಎಸ್. ಶಿವಪ್ರಕಾಶ

ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್

MANTESWAMY KATHA PRASANGA, A play in Kannada by **H.S. Shivaprakash**, Lecturer in English, Home Science College, Bangalore-560 001; Published by Bellichukki Book Trust, 1202, Kantharaj Urs Road, Mysore-570 004.

ಮೊದಲ ಮುದ್ರಣ : 1991
ಎರಡನೇ ಮುದ್ರಣ : 1995
ಪ್ರತಿಗಳು : 2000

ಬೆಲೆ : ರೂ. 12.00

ಪ್ರತಿಗಳಿಗಾಗಿ ಸಂಪರ್ಕಿಸಿ
ಬೆಳ್ಳಿಚುಕ್ಕಿ ಪುಸ್ತಕಾಲಯ
ಶೇಷಾದ್ರಿಪುರಂ ಅಂಚೆಕಛೇರಿ ಎದುರು
ಬೆಂಗಳೂರು – 560 020

ಪ್ರತಿಗಳು ಇಲ್ಲೂ ದೊರೆಯುತ್ತವೆ:

1. ಬಿ.ಎ. ಬೆಳ್ಳಿಯಪ್ಪ
1202, ಕಾಂತರಾಜ ಅರಸ್ ರಸ್ತೆ
ಮೈಸೂರು – 570 004

2. ಡಾ. ಎ. ರಾಮಲಿಂಗಂ
ಎಫ್-28
ಉಪನ್ಯಾಸಕರ ನಿವಾಸಗಳು
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ – 3

ಹಕ್ಕುಗಳು : ಎಚ್. ಎಸ್. ಶಿವಪ್ರಕಾಶ

ಮುಖಪುಟ ವಿನ್ಯಾಸ : ಕೆ. ಮಕಾಳಿ

ಮುದ್ರಣ : ಮಂಜುಶ್ರೀ ಆಫ್‌ಸೆಟ್ ಪ್ರಿಂಟರ್ಸ್
ಫೋನ್: 2223359

ಎರಡನೆ ಮುದ್ರಣಕ್ಕಾಗಿ ಒಂದೆರಡು ಮಾತು

'ಮಂಟೇಸ್ವಾಮಿ' ನಾಟಕವನ್ನು ಎರಡನೇ ಸಾರ್ತಿ ಅಚ್ಚುಹಾಕಿಸುತ್ತಿದ್ದಾರೆ "ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್"ನವರು.

ಈ ನಾಟಕದ ಪ್ರದರ್ಶನಗಳು ಸುಮಾರು 150ನ್ನು ಮುಟ್ಟಿವೆ. ಪ್ರದರ್ಶನಕ್ಕಾಗಿ ಬೇಡಿಕೆ ಇನ್ನೂ ಇದೆ. ನಾಟಕದ ಮೊದಲಚ್ಚಿನ ಪ್ರತಿಗಳು ಖಾಲಿಯಾಗಿವೆ. ನಾಟಕದ ಪ್ರತಿಗಳಿಗಾಗಿ ಇರುವ ಓದುಗರ ಬೇಡಿಕೆಯನ್ನು ಪೂರೈಸಲು ಎರಡನೆ ಮುದ್ರಣವನ್ನು ಎತ್ತಿಕೊಳ್ಳಲಾಗಿದೆ.

'ಮಂಟೇಸ್ವಾಮಿ' ಪ್ರಯೋಗದ ಮೇಲೆ ಮೆಚ್ಚುಗೆಯನ್ನು ಮಳೆಗರೆದಿರುವ ಕರ್ನಾಟಕದ ಎಲ್ಲ ಸಹೃದಯರು ಈ ಎರಡನೆ ಮುದ್ರಣವನ್ನೂ ಸ್ವಾಗತಿಸುತ್ತಾರೆಂದು ಹಾರೈಸುತ್ತೇನೆ.

ಈ ಕೃತಿಯ ಮೊದಲ ಪ್ರಯೋಗ ಮತ್ತು ಮುದ್ರಣ ಕಂಡಾಗ ಮೆಚ್ಚಿಕೊಂಡ ಮಹನೀಯರನ್ನು ಮತ್ತೆ ವಂದಿಸುತ್ತೇನೆ. ಅದೇ ಥರ ಕೊಂಕುಮಾತಾಡಿದವರನ್ನೂ ವಂದಿಸುತ್ತೇನೆ. ಕರ್ನಾಟಕದಾದ್ಯಂತ ಮತ್ತು ಹೊರರಾಜ್ಯಗಳಲ್ಲಿ ಇದರ ರಂಗಪ್ರಯೋಗಕ್ಕೆ ಸಿಕ್ಕಿದ ಅಭೂತಪೂರ್ವ ಯಶಸ್ಸು ಕೊಂಕುನುಡಿದ ರಂಗ ಪಂಡಿತರಿಗೆ ತಕ್ಕ ಉತ್ತರವೆಂದು ಭಾವಿಸುತ್ತೇನೆ.

'ಮಂಟೇಸ್ವಾಮಿ ಕಾವ್ಯ'ದ ಮುದ್ರಿತ ಮತ್ತು ತೋಂಡಿ ಪಾಠಗಳು ಈ ಕೃತಿಯ ಆಕರಗಳು. ಮಂಟೇಸ್ವಾಮಿ ಕುರಿತ ವಿವಿಧ ಪಾಠಗಳ ವಿವರಗಳು ಬೇರೆ ಬೇರೆ ಥರದವಾಗಿದ್ದರೂ ಅವೆಲ್ಲಕ್ಕೂ ಕೆಲವು ತುಡಿತಗಳು. ಆಶಯಗಳು ಸಾಮಾನ್ಯವಾಗಿವೆ. ಆತ್ಯಂತಿಕ ತುಡಿತಕ್ಕೊಳಗಾದ ಜನರ ಎದೆಯಾಳದಿಂದ ಚಿಮ್ಮಿದ ಈ ಕಾವ್ಯ ಕೇವಲ ಜಾನಪದವಾಗಿರದೆ ಚಾರಿತ್ರಿಕ ಸ್ಥಿತ್ಯಂತರಗಳನ್ನೂ. ಅವು ಉಂಟುಮಾಡುವ ಸವಾಲುಗಳನ್ನು ತನ್ನ ರೂಪಕನಿಷ್ಠ ನುಡಿಗಟ್ಟಿನಲ್ಲಿ ಚಿತ್ರಿಸುತ್ತದೆ. ಧಾರ್ಮಿಕ ಮುಖಂಡರ ಡಂಭಾಚಾರಕ್ಕೆ ನಗರ ಗ್ರಾಮಗಳ ಯಜಮಾನ ಸಂಸ್ಕೃತಿಯ ದೈವೀಕ ಟೀಕೆಯಾಗಿ ಮಂಟೇಸ್ವಾಮಿ ರೂಪುತಾಳುತ್ತಾನೆ. ಜೊತೆಗೆ ಆತ. ಕಬ್ಬಿಣದ ಯುಗದ ಬರವನ್ನೂ ನಮ್ಮ ಜನನಾಯಕರು ಯೂರೋಪಿನ 'ಈರರಾಜ'ನಿಗೆ ಸರಬರಾಜುದಾರರಾಗುವ ದುರ್ಗತಿಯನ್ನೂ ಮುನ್ನುಡಿಯುವ ಮಹಾಂತನಾಗಿದ್ದಾನೆ. ಹೊರಗಿನ ಶಕ್ತಿಗಳ ಬಾಲಂಗೋಚಿಯಾದ ನಮ್ಮ ನಡುವಿನ ಆಳುವ ಗುಲಾಮರು ಪ್ರಕೃತಿಯನ್ನು ಹಿಂಡಿ ಹಿಪ್ಪೆ ಮಾಡಿ ಪಂಚಭೂತಗಳನ್ನು ಮುನಿದ ಮಾರಿಯರನ್ನಾಗಿ ತಿರುಚುತ್ತಿರುವ ವಿಪರ್ಯಾಸವನ್ನು ಗುರುತಿಸುತ್ತಾನೆ. ಇದೂ ಒಂದು ರೀತಿಯಲ್ಲಿ ಇಂದಿನ ಪರಿಸರ ಪ್ರಶ್ನೆಯ ಪೂರ್ವಸೂಚನೆ. ಈ ನಾಟಕದ ವಸ್ತುವಿನಲ್ಲಿ ಸೂಚಿತವಾದ ಎಳೆಗಳನ್ನು ವಿಸ್ತರಿಸಲು ನಾನು ಐದು ವರ್ಷಗಳ ಹಿಂದೆ ಪ್ರಯತ್ನಿಸಿದ್ದೆ. ಆ ಮೂಲಕ ವ್ಯಕ್ತವಾದ ಸಮಸ್ಯೆಗಳು ಅಂದಿಗಿಂತ ಇಂದು – ಪುಸ್ತಕದ ಎರಡನೆ ಮುದ್ರಣದ ಹೊತ್ತಿಗೆ – ಹೆಚ್ಚು ಗಾಢವಾಗಿವೆ. ಮನುಷ್ಯ ಮತ್ತು ಪ್ರಕೃತಿಯ ಉಳಿವಿನಲ್ಲಿ ಆಸ್ಥೆಯುಳ್ಳ ಎಲ್ಲರಿಗೂ ಈ ಕೃತಿ ಒಂದು ಸಣ್ಣದಾರಿಯನ್ನಾದರೂ ತೋರಿಸೀತೆಂದು ಹಾರೈಸುತ್ತೇನೆ.

ಯಾವುದೇ ವಿಕಾಸಶೀಲ ಮೌಲ್ಯವು ಗತಿತಾರ್ಕಿಕವಾದ ವಿಕಾಸ ಶೀಲತೆಯನ್ನು ಒಂದು ವಿಶಿಷ್ಟ ಚಾರಿತ್ರಿಕ ಘಟ್ಟದಲ್ಲಿ ಕಂಡುಕೊಂಡಾಗ ತಾನೂ ಸ್ಥಾವರವಾಗುತ್ತದೆ. ಇಂದಿನ ಮುಕ್ತ ಮಾರುಕಟ್ಟೆಯ ಸಾರುವಯ್ಯಗಳು ಮೊದಲನೆ ಜಗತ್ತಿನ ಏಳಿಗೆಯ ಇಂದಿನ ತಾತ್ಕಾಲಿಕ ಘಟ್ಟದಲ್ಲಿ ತಮ್ಮ ಕಲ್ಪನೆಯ ಶಾಶ್ವತ ಸತ್ಯಗಳನ್ನು ಕಾಣುತ್ತಿದ್ದಾರೆ. ತುಳಿತಕ್ಕೊಳಗಾದ ಜನವರ್ಗಗಳ ಮತ್ತು ಪ್ರದೇಶಗಳ ಸಮಸ್ಯೆಗಳನ್ನು ಭೌತಿಕವಾಗಿ ಅರ್ಥಮಾಡಿಕೊಂಡು ಚಾರಿತ್ರಿಕವಾದ ಪರಿಹಾರಗಳನ್ನು ಕಂಡುಕೊಳ್ಳುವಷ್ಟು ಮುಖ್ಯವಾದದ್ದು ಆಯಾ ಜನ ಸಮುದಾಯಗಳ ವಿಕಾಸಶೀಲ ಹೋರಾಟಗಳ ವಿಶಿಷ್ಟ ಸಾಂಸ್ಕೃತಿಕ ರೂಪವನ್ನು ಅರ್ಥಮಾಡಿಕೊಂಡು ಆ ರೂಪಗಳ ಸಾಧ್ಯತೆಗಳನ್ನು ಸಂಸ್ಕೃತಿ ಮತ್ತು ಸಮಾಜ ನಿರ್ಮಾಣಗಳಲ್ಲಿ ಇಂದು ತೊಡಗಿಸಿಕೊಳ್ಳಬೇಕಾದುದು.

ಮಂಟೇಸ್ವಾಮಿ ಇಂಥ ಸಂಸ್ಕೃತಿಯೊಂದರ ಪ್ರತೀಕ. ಅವನ ಚೈತನ್ಯ ಚಿರಂತನವಾದದು. ಮಂಟೇಸ್ವಾಮಿ ಪಾತಾಳ ಬಾವಿಯನ್ನು ಹೋಗುವುದೆಂದರೆ ಆತ ಜನರ ಎದೆಯಾಳದ ಜಲಕಣ್ಣುಗಳಲ್ಲಿ ಇನ್ನೂ ಜಿನುಗುತ್ತಿದ್ದಾನೆ ಎಂದರ್ಥ. ಆತನ ದೇಹವೂ ಜಗತ್ತಿನೊಳಗೇ ಇದ್ದು. ಜಗತ್ತಿಗೆ ಒಳಿತನ್ನು ಮಾಡಲೋಸುಗ ರೂಪಾಂತರ ಹೊಂದುತ್ತದೆ.

ಮಂಟೇಸ್ವಾಮಿ ಚೈತನ್ಯ ಶರೀರದ ಮತ್ತೊಂದು ರೂಪವಾದ್ದರಿಂದಲೇ ಈ ನಾಟಕ ರಂಗಭೂಮಿಯ ಮೂಲಕ ಬಹುದೊಡ್ಡ ಸಂಖ್ಯೆಯ ಜನಗಳ ಎದೆ ಬಾವಿಗಳನ್ನು ಹೊಕ್ಕಿರುವುದು.

ಇಂತಹ ಅರ್ಥಸಾಧ್ಯತೆಗಳನ್ನು ಹೊಮ್ಮಿಸುವ ಮಂಟೇಸ್ವಾಮಿ ಕಥನವನ್ನಾಧರಿಸಿರುವ ಈ ನಾಟಕವನ್ನು 'ಪವಾಡಗಳ ಕತೆ' ಎಂಬ ಒಂದೇ ಮಾತಿನಲ್ಲಿ ದಫನು ಮಾಡಲು ಪ್ರಯತ್ನಿಸಿದವರು ತಮ್ಮ ಅರೆಬರೆ ತಿಳುವಳಿಕೆಯಲ್ಲಿ ತಮ್ಮನ್ನು ತಾವೇ ದಫನು ಮಾಡಿಕೊಂಡಿದ್ದಾರೆ. ಅವರು ಮುಕ್ತಮಾರುಕಟ್ಟೆ ಸಂಸ್ಕೃತಿಯ ದೊಡ್ಡ ಪವಾಡವಾದ ಶಿಕ್ಷಿತ ಅನಕ್ಷರಸ್ಥತೆಯ ಬಾತ್ಮೀದಾರರಾಗಿರುವುದರಿಂದ ವಿದ್ವತ್ತು ಮತ್ತು ಪದವಿಗಳ ಮುಖವಾಡ ಹೊತ್ತ ಆ ಮಖೇಡಿಗಳ ಬಗ್ಗೆ ಅಯ್ಯೋ ಅನಿಸುತ್ತಿದೆ.

ಕೆಳಸ್ತರದ ಜನತೆಯ ದಿನದಿನಧ ಆಗುಹೋಗುಗಳಲ್ಲಿ ಹಾಸುಹೊಕ್ಕಾಗಿರುವ ಪರಂಪರೆಗಳ ಬಗೆಗಿನ ಆಸಕ್ತಿ ಮೊದಲಿಗಿಂತಾ ಈಗ ಹೆಚ್ಚಾಗಿರುವುದು ಈ ಕೃತಿಯ ಎರಡನೆ ಮುದ್ರಣಕ್ಕೆ ಒಪ್ಪಿಗೆಯಾಗುವಂತಹ ಚೌಕಟ್ಟನ್ನು ನಿರ್ಮಿಸಿದೆ. ಜನಪರ ಹೋರಾಟ ಲೋಕವನ್ನು ಗುರಿಯನ್ನಾಗಿ ಹೊಂದಿದ ಪ್ರಕಾಶನ ಸಂಸ್ಥೆಯೊಂದು ಈ ಮುದ್ರಣವನ್ನು ಹೊರತರುವ ಹೊಣೆ ಹೊತ್ತಿರುವುದು ಸಂತಸದ ಸಂಗತಿ.

ಇದನ್ನು ಮೊದಲಿಗೆ ರಂಗಕ್ಕೆ ತಂದು ಅಚ್ಚು ಹಾಕಿಸಿದ 'ಪ್ರಯೋಗ ರಂಗ'ದವರನ್ನು ಕೃತಜ್ಞತಾ ಪೂರ್ವಕವಾಗಿ ನೆನೆಯುತ್ತಿದ್ದೇನೆ. ಈ ಮುದ್ರಣವನ್ನು ತರುತ್ತಿರುವ 'ಬೆಳ್ಳಿಚುಕ್ಕಿ' ಅವರನ್ನೂ. ಅಚ್ಚು ಮಾಡಿರುವ ಮಂಜುಶ್ರೀ ಆಫ್‌ಸೆಟ್ ಪ್ರಿಂಟರ್ಸ್‌ನವರನ್ನೂ ವಂದಿಸುತ್ತೇನೆ.

– ಎಚ್. ಎಸ್. ಶಿವಪ್ರಕಾಶ

ಬೆಂಗಳೂರು

ಅರ್ಪಣೆ

ಮಂಟೇಸ್ವಾಮಿಯ ಪಾತ್ರ ಕಲ್ಪಿಸಿಕೊಳ್ಳುವುದಕ್ಕೆ
ನಿಜ ಬದುಕಿನಲ್ಲಿ ಮಾದರಿ ನೀಡಿದ
ಕಣ್ಮರೆಯಾದ ಹೆಬ್ಬಾಳದ ಸಂತ

ಶಿವಯೋಗಿ ಅಶದುಲ್ಲಾ ಖಾದ್ರಿ ವಲಿ
ಅವರಿಗೆ

ಪರಿಚಯ

150ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡುತ್ತಾ ಮಂಟೇಸ್ವಾಮಿಯನ್ನು ಕರ್ನಾಟಕದ ಉದ್ದಗಲಕ್ಕೂ ಪರಿಚಯಿಸಿದ 'ಪ್ರಯೋಗ ರಂಗ' ತಂಡದ ಈ ಪ್ರಯತ್ನ ಅಭಿನಂದನಾರ್ಹ. ಈ ಮಿತ್ರರಿಗೆ ಶುಭಾಶಯಗಳನ್ನು ಹೇಳುತ್ತಾ ಅವರು ನಿರ್ವಹಿಸಿದ ಪಾತ್ರ ಹಾಗೂ ಕೆಲಸಗಳ ಕುರಿತ ಕಿರು ಪರಿಚಯ ನೀಡುತ್ತಿದ್ದೇವೆ.

ಮಂಟೇಸ್ವಾಮಿ	–	ಧನಂಜಯ
ಸಿದ್ದಪ್ಪಾಜಿ	–	ವಿಜಯಕುಮಾರ್ ಮಾಲೂರು
ರಾಚಪ್ಪಾಜಿ	–	ರವಿ ಮತ್ತು ಮೂರ್ತಿ
ನೀಲಗಾರರು	–	ವಿಜಯಕುಮಾರ್ ಜಿತೂರಿ, ಶ್ರೀನಾಥ್, ಸರ್ವೇಶ್, ಶ್ರೀಧರ್, ರಾಜಕುಮಾರ್, ಬಂಗಾರಪ್ಪ ಕುಂದನ್‌ಪುರ್, ಪ್ರಕಾಶ್ ಶೆಟ್ಟಿ
ಜಗದ್ಗುರು	–	ನಾಗರಾಜ ಮೂರ್ತಿ
ಜಂಗಮರು	–	ಲಕ್ಷ್ಮೀಪತಿ, ಚಂದ್ರಕಾಂತ್, ಕುಂದನ್‌ಪುರ್, ವಿಜಯಕುಮಾರ್, ಪ್ರಕಾಶ್. ಹೆಚ್
ಪಾಂಚಾಳ ರಾಜರು	–	ರಘು ಟಿ, ಕುಂದನ್‌ಪುರ್, ನಾಗರಾಜ
ಬಸವಣ್ಣ	–	ಉದಯಶಂಕರ್, ಸು. ಷಡಕ್ಷರಿ
ನೀಲಾಂಬಿಕೆ	–	ಅಂಜಲಿ ಶೆಟ್ಟಿ
ಪಾರದವರು	–	ಮಯೂ ಬ್ರಹ್ಮಾಚಾರ್, ವಿಜಯಕುಮಾರ್, ವೇಣುಗೋಪಾಲ್‌ಸೊಪ್ಪು, ಕುಂಜಪ್ಪ
ಗಂಡು ಮತ್ತು ಶಿಷ್ಯ	–	ಎಂ.ಎನ್. ಸುರೇಶ್
ಶಿಷ್ಯರು	–	ವೇಣುಗೋಪಾಲ್, ದೇವರಾಜ್
ದೊಡ್ಡಮ್ಮ	–	ರೂಪದಿ ಬಿಜೂರ್
ಕಲ್ಯಾಣಮ್ಮ	–	ಲಲಿತಮ್ಮ
ಗೆಳತಿ	–	ಚಂಪಕ ಮಾಲಿನಿ
ಕೊತ್ವಾಲ	–	ಕೃಷ್ಣಮೂರ್ತಿ ಕೆ.ಆರ್.

ತಾಂತ್ರಿಕ ವರ್ಗ

ಸಂಗೀತ	–	ಯೋಗ ನರಸಿಂಹ
ಬೆಳಕು	–	ಸಿ.ಜಿ. ಕೃಷ್ಣಸ್ವಾಮಿ
ವಸ್ತ್ರವಿನ್ಯಾಸ ಹಾಗೂ ನಿರ್ವಹಣೆ	–	ನಾಗರಾಜ್ ಮೂರ್ತಿ
ನಿರ್ದೇಶನ	–	ಸುರೇಶ್ ಆನಗಳ್ಳಿ

ಭಾಗ - ೧

ನಾಲ್ಕೈದು ಜನ ನೀಲಗಾರರು ಪ್ರವೇಶ

ನೀಲಗಾರರು: ಸರಣು ಸರಣು ಮತಿ ಗಣೆನಾಯ್ಕ । ಅಯ್ಯ
ಗೌರಿಕುಮಾರನೆ ಗಣೆನಾಯ್ಕ । ಅಯ್ಯ
ಇದ್ಯೆಗೆ ನಾಯಕ
ಬುದ್ಧಿಪ್ರದಾಯಕ
ಸಿದ್ದರ ಸೇವಿಪ ಸುಂದರ ಗಣೆನಾಯ್ಕ ॥ ಸರಣು ಸರಣು ಮತಿ ॥

ನೀಲಗಾರರು ರಂಗದ ಮುಂಭಾಗಕ್ಕೆ ಬರುತ್ತಾರೆ

ನೀಲಗಾರರು: ಮಂಟೇದಸ್ವಾಮಿ ಬನ್ನಿ ।
ಕಂಟಕ ನಿರ್ವಾಣ್ಯ ಬನ್ನಿ ॥

ದುಡ್ಡು ನನ್ನದೆನ್ನುವೋರ
ಒದ್ದು ನೆಲಕೆ ಕೆಡುಗಬಲ್ಲೆ ।
ಹೊನ್ನು ನನ್ನದೆನ್ನುವೋರ
ಮಣ್ಣುಪಾಲು ಮಾಡಬಲ್ಲೆ ।
ಮಣ್ಣು ನನ್ನದೆನ್ನುವೋರ
ಕಣ್ಣು ಕುಲ್ಡು ಮಾಡಬಲ್ಲೆ ।
ಇದೇ ಎಲ್ಲ ಅನ್ನುವೋರ
ಎದೆಗೆ ಸೂಲವಾಗುಬಲ್ಲೆ ॥ ಮಂಟೇದ ॥

ನೀಲಗಾರರು ತಮ್ಮ ಕೈಯಲ್ಲಿದ್ದ ತಿರುಪೆ ಪಾತ್ರೆಯನ್ನು ರಂಗದ ಮುಂಭಾಗದಲ್ಲಿ ಇಡುತ್ತಾರೆ. ಅದಕ್ಕೆ ವಂದಿಸುತ್ತ –

ನೀಲಗಾರರು: ಆದಿಕಲ್ಯಾಣಕ್ಕೆ ಶರಣು ।
ರಾಜಬೊಪ್ಪಣಪುರದ ದೊರೆ
ಮಂಟೇದಲಿಂಗಯ್ಯ ನಿಮ್ಮ ಪಾದಕೆ ಶರಣು ॥
ಗಾಡಿಕಾರರ ಗಂಡ । ಬೂದಿಕಾರರ ಗಂಡ ।
ಭೂಲೋಕದಾ ಗಂಡ । ಬೂದಿ ಮುಚ್ಚಿದ ಕೆಂಡ ।
ಮಂಟೇದಸ್ವಾಮಿ ಬನ್ನಿ
ಜಗನ್‌ಜ್ಯೋತ್ಯಾ ಗುರುಲಿಂಗಯ್ಯ ನೀವೆ ಬನ್ನಿ ॥

ನೀಲಗಾರ ೧: ಎಲ್ಲಕ್ಕಿಂತಾ ಮೊದ್ಲು ನಮ್ಮಪ್ಪಾಜಿ ಮಂಟೇಸ್ವಾಮಿಯೋರು ಏಕಾಂಗಿ ವಸ್ತುವಾಗಿ ತಬಸುಮಾಡ್ತಾ ಕುಂತವ್ರೆ....ಕಾಯಾಗಿದ್ದ ಮೊಟ್ಟೆ ಅಣ್ಣಾಯ್ತು....ತನ್ನಷ್ಟಕ್ಕೆ ತಾನೆ ತೊಟ್ ಕಳಚ್ಕಂಡು ಕೆಳೀಕೆ ಬಿದ್ದು ಪಟ್ಟಂತಾ ಒಡೆದೋಯ್ತು....

ನೀಲಗಾರ ೨: ಒಡ್‌ದೋಗಿ....ಮ್ಯಾಲಾಕಾಸ, ಕೆಳಗೆ ಭೂಮೀಂತ ಎಲ್ಡು ಹೋಳಾಗಿವೋಯ್ತು....ಹೋಳಾದ ಮ್ಯಾಲೆ ಆಕಾಸ, ಭೂಮಿ ಎಲ್ಡೂ ತರತರ ತರತರ ನಡುಗ್ತಾ ಇದ್ದ ಹೊತ್ನಲ್ಲಿ –

ಒಬ್ಬ ಹೆಂಗಸರನ್ನು ಅಟ್ಟಿಸಿಕೊಂಡು ರಾಕ್ಷಸ ಮುಖವಾಡ ಧರಿಸಿದ ಜಂಗಮರು ಮತ್ತು ಮಠಾಧಿಪತಿಗಳು ಪ್ರವೇಶ. ಹತಾಶಳಾಗಿ ಬಿದ್ದ ಅವಳನ್ನು ಎಳೆದುಕೊಂಡು ಎಲ್ಲರೂ ನಿಷ್ಕ್ರಮಣ.

ನೀಲಗಾರ ೧: (ಅವರು ಹೋದ ದಿಕ್ಕನ್ನು ನೋಡುತ್ತ) ಏಣ್ಣಾ ಇದೇನಣ್ಣ? ಕರುಣಾಳುಗಳಾದಂತ ಕರ್ತೃ ಬಸವಣ್ಣೋರ್ ಕಲ್ಯಾಣಾಂತ ಬಂದ್ರೊ. ಇಲ್ನೋಡುದ್ರೆ ಬರೀ ಕೊಲೆ, ಸುಲ್ಗೆ, ಮಾನಭಂಗ ಇವೇ ಕಾಣುಸ್ತವಲ್ಲಣ್ಣ.

ನೀಲಗಾರ ೨: ಅದಿಕೇಯ ನಾನು ಬಡಕೊಂಡಿದ್ದು, ಈ ಕಲ್ಯಾಣಪಟ್ನನೂ ಎಲ್ಲಾ ಪಟ್ನಗಳಿದ್ದಂಗೇಯ, ಇಲ್ಲೂ ಆಗ್‌ಬಾರುದ್ದೆಲ್ಲ ಆಯ್ತುವೇಂತ.

ನೀಲಗಾರ ೩: ಇದುನ್ ನಂಬ್ಕಂಡು ಇಷ್ಟ್‌ದೂರ ಕಾಲ್‌ಸವುಸ್‌ಕಂಡ್ ಬಂದ್ವಲ್ಲಣ್ಣ. ಅದ್ಸರೀ, ಇವಾಗೇನ್ ಮಾಡದೂಂತೀನಿ?

ನೀಲಗಾರ ೧: ಒಂದುಪಾಯ. ಇಲ್ಲೇ ಎಲ್ಲೋ ಬಸವಣ್ಣೋರಿರ್ಬೇಕು. ಅವುರ್ನೇ ಕರೀತೀನಿ.

ಎಲ್ಲರೂ: ಅಂಗೇ ಮಾಡಮು...

ನೀಲಗಾರ ೧: (ರಂಗದ ಬಲಭಾಗಕ್ಕೆ ಕುಣಿಯುತ್ತ ಹೋಗಿ) ಸ್ವಾಮಿ ಬಸವಣ್ಣೋರೆ, ವಸಿ ಸ್ಟೇಜ್‌ಮ್ಯಾಕೆ ಬರ್‍ತೀರಾ?

ಬಸವಣ್ಣ ಕುಣಿಯುತ್ತಾ ಪ್ರವೇಶ

ನೀಲಗಾರ ೨: ಅಲ್ರೀ ಸ್ವಾಮಿ, ನಿಮ್ಮಂಥಾ ಮಾತ್ಮರೂ ಮಾನ್‌ಬಾವ್ರು ಇರಾ ಇಂತೀ ಪಟ್ಟಣಕ್ಕ ಈ ಬರ್ಬಾರದ್ ಗತಿ ಯಾಕ್ ಬಂತುಯೇಳಿ.

ಬಸವಣ್ಣ: ನನ್ನನ್ನೂ ಅದೇ ಯೋಚ್ನೆ ಕಾಡ್ತಾ ಇದೆ.... ಇದಕ್ಕೆ ಪರಿಹಾರಾನ ಹಗಲೂ ರಾತ್ರಿ ಹುಡುಕ್ತಾ ಇದ್ದೀನಿ.

ನೀಲಾಗಾರ ೧: ಸ್ವಾಮಿ, ನೀವು ದೊಡ್ಡೋರು, ನೀವೇ ಏನಾರಾ ಗತಿ ಕಾಣುಸ್ಬೇಕು. ನಾವು ಇಲ್ಲೇ ನಿತ್ಕಂಡು ನಿಗಾ ಮಾಡ್ತಾ ಇರ್ತೀವಿ.

ಬಸವಣ್ಣ ಅಲ್ಲೇ ಕೂತಾಗ ನೀಲಾಂಬಿಕೆ ಪ್ರವೇಶ

ನೀಲಾಂಬಿಕೆ: ಸ್ವಾಮಿ, ಯಾಕಿಷ್ಟು ದಿವ್ಸಗಳಿಂದ ಇಷ್ಟೊಂದು ಆಲೋಚನೆ ಮಾಡ್ತಾ ಇದೀರ? ಮಡ್ದಿಯಾದ ನನ್‌ಗಾದ್ರೂ ತಿಳ್ಸಿ.... ಇಲ್ಲಿ ನೆರೆದಿರತಕ್ಕಂಥಾ ಮಹಾನ್‌ಭಾವರಿಗಾದ್ರೂ ತಿಳ್ಸಿ....

ಬಸವಣ್ಣ: ಇನ್ನೇನೂ ಇಲ್ಲ ನೀಲಾಂಬಿಕೆ, ದಿನೇ ದಿನೇ ಇಲ್ಲಿ ಮೋಸ ವಂಚನೆಗಳು ಹೆಚ್ತಾ ಇವೆ.

ನೀಲಾಂಬಿಕೆ: ನಾವಿಷ್ಟೆಲ್ಲಾ ದಾಸೋಹ ಮಾಡಿದ್ರೂ ಜನರ ಹಸಿವು ಹಿಂಗ್ಸೋಕೆ ಆಗ್ತಿಲ್ಲ.

ಬಸವಣ್ಣ: ಇನ್ಯಾರಾದರೂ ಬರುತ್ತಾರೆಂದರೆ ನಮಗಿಂತ ದೊಡ್ಡ ಗುರು ಯಾರು ಇಲ್ಲ.

ನೀಲಾಂಬಿಕೆ: ಶಿವಾಶಿವಾ, ನೀವು ಹೆಚ್ಚಿನ ಗುರುವೇನೋ ಹೌದು. ಆದರೆ ನಿಮಗಿಂತ ಹೆಚ್ಚಿನ ಗುರು ಇಲ್ಲವಲ್ಲಾ ಅಂತ ಹೆಮ್ಮೆ ಪಡಬೇಡಿ.

ಬಸವಣ್ಣ: ಇದು ಹೆಮ್ಮೆಯ ವಿಚಾರವಲ್ಲ ನೀಲಾಂಬಿಕೆ. ಆ ಮಹಾಶರಣರು ಎಲ್ಲಿದ್ದಾರೆ ಹೇಳು, ಏನಾದರೂ ಮಾಡಿ ಅವರನ್ನು ಈ ಕಲ್ಯಾಣದವರೆಗೂ ಕರಕೊಂಡು ಬರೋಣ. ಹೇಳು, ಅವರನ್ನು ಕಾಣುವ ಕುರುಹು ಯಾವುದು?

ನೀಲಾಂಬಿಕೆ: ಸ್ವಾಮಿ, ಹೀಗೆ ಮಾಡೋಣ. ಒಂದು ನಾಲಿಗಿಲ್ಲದ ಗಂಟೆ, ಒಂದು ಕಲ್ಲು ಕೋಳಿ, ಒಂದು ಕಲ್ಲು ಬಸವನನ್ನು ಕಲ್ಯಾಣದ ಮೂಡಲ ಹೆಬ್ಬಾಗಿಲಲ್ಲಿ ನಿಲ್ಲಿಸೋಣ.

ಬಸವಣ್ಣ: ಇದರಿಂದ ಮಹಾತ್ಮರು ಬಂದಾರೆನ್ನುತ್ತೀಯಾ?

ನೀಲಾಂಬಿಕೆ: ಆ ಮಹಾತ್ಮರು ಬಂದ ಕೂಡಲೇ ಆ ನಾಲಿಗಿಲ್ಲದ ಗಂಟೆ ನಾದ ಶಬ್ದ ಮಾಡುತ್ತದೆ. ಕಲ್ಲುಕೋಳಿ ಕೂಗುತ್ತದೆ. ಕಲ್ಲು ಬಸವ ಗುಟುರು ಹಾಕುತ್ತದೆ.

ಬಸವಣ್ಣ: ನಡಿ, ಹಾಗೇ ಮಾಡೋಣ. ಅಪ್ಪಾ ಪಾರದವರೇ....

ಇಬ್ಬರು ಪಾರದವರು ಪ್ರವೇಶ

ಪಾರದವರು: ಅಪ್ಪಣೆ ಸ್ವಾಮಿ.

ಬಸವಣ್ಣ: ನಮ್ಮ ಮಾತು ಕೇಳಿಸ್ತೇನ್ರಪ್ಪ?

ಪಾರದವರು: ಕೇಳಿಸ್ತು ಮಹಾಸ್ವಾಮಿ.

ಬಸವಣ್ಣ: ಆ ಪ್ರಕಾರವಾಗಿ ನೀವೀಗಲೇ ಹೋಗಿ ವಿಶ್ವಕರ್ಮರ ಕೈಯಲ್ಲಿ ಒಂದು ನಾಲಿಗಿಲ್ಲದ ಗಂಟೆಯನ್ನು ಮಾಡಿಸಿ, ಶಿಲ್ಪಿಗಳ ಕೈಯಲ್ಲಿ ಕಲ್ಲುಕೋಳಿ, ಕಲ್ಲು ಬಸವಗಳ ಮಾಡಿಸಿ ಇವೆಲ್ಲವನ್ನೂ ಈ ಪಟ್ಟಣದ ಮೂಡಲ ಹೆಬ್ಬಾಗಿಲಿನಲ್ಲಿ ನಿಲ್ಲಿಸಿಬಿಡಿ.

ಪಾರದವರು: ಅಪ್ಪಣೆ ಸ್ವಾಮಿ.

ಬಸವಣ್ಣ: ಆ ಗಂಟೆ ನುಡಿಯುವವರೆಗೂ, ಆ ಕೋಳಿ ಕೂಗುವವರೆಗೂ, ಆ ಬಸವ ಗುಟುರು ಹಾಕುವವರೆಗೂ ನೀವು ಆ ದ್ವಾರದಲ್ಲಿ ನಿಂತು, ಯಾವ ಯಾವ ಶರಣ ಮಹಾತ್ಮರು ಅಲ್ಲಿಗೆ ಬರುತ್ತಾರೆ ನಿಗಾ ಮಾಡಿ.

ಪಾರದವರು: ಅಪ್ಪಣೆ ಸ್ವಾಮಿ.

ನಮಸ್ಕರಿಸಿ ನಿಷ್ಕ್ರಮಣ

ನೀಲಾಂಬಿಕೆ: ಸ್ವಾಮಿ, ಆ ಗಂಟೆ ನುಡಿಯುವವರೆಗೂ, ಆ ಕೋಳಿ ಕೂಗುವವರೆಗೂ, ಆ ಬಸವ ಗುಟುರು ಹಾಕುವವರೆಗೂ ಲೋಕ ಹಿತಾರ್ಥವಾಗಿ ಹೆಚ್ಚಿನ ಗುರುವು ಬರಲಿ ಎಂದು ನಾವಾದರೂ ಧ್ಯಾನ ಮಾಡೋಣ.

ಬಸವಣ್ಣ, ನೀಲಾಂಬಿಕೆ ಹೊರಡಲು ಸಿದ್ಧವಾದಾಗ ಪಾರದವರು ಮತ್ತೆ ಪ್ರವೇಶ

ಪಾರದವರು: ಗಂಟೆ ಸಿದ್ಧವಾಗಿದೆ ಸ್ವಾಮಿ.

ಬಸವಣ್ಣ: ನೀವಿನ್ನು ಇಲ್ಲೇ ನಿಂತು ಕಾಯುತ್ತಿರಿ.

ಪಾರದವರು ಒಂದು ಪಕ್ಕಕ್ಕೆ ನಿಲ್ಲುತ್ತಾರೆ. ನೀಲಾಂಬಿಕೆ, ಬಸವಣ್ಣ ಇಬ್ಬರೂ ರಂಗದ ಹಿಂಭಾಗದಲ್ಲಿ ತಪಸ್ಸಿಗೆ ನಿಲ್ಲುತ್ತಾರೆ.

ನೀಲಗಾರರು: ಆದಿಸಿದ್ಧರಿಗೆಲ್ಲ ಅತಿಮುದ್ದು ಘನನೀಲಿ
ಪರಂಜೋತಿ ನೀವೆ ಬನ್ನಿ ।
ಬಾರದ ಪವಾಡಕ್ಕೆ ಬಂದೊದಗೊ ಘನನೀಲಿ
ಮಂಟೇದಸ್ವಾಮಿ ಬನ್ನಿ ।

ಹೆಚ್ಚೋವೆ ನಿಮ್ಮದಯ್ಯ ಹೀನಾಯ ನಿಮ್ಮದಯ್ಯ
ಜಗಂಜೋತಿ ನೀವೆ ಬನ್ನಿ ॥

ನೀಲಗಾರ ೧: ಈ ಪ್ರಕಾರವಾಗಿ ದಂಪತಿಗಳಿಬ್ರೂವೆ ದ್ಯಾನ ತಬಸಿಗೆ ಕುಂತ್ಕಂಡಾಗಿಂದ ಬೂಮಂಡ್ಲ ನಡನಡ ನಡುಗಕ್ಕೆ ಸುರು ಆಗದೆ. ಇನ್ನು ನಾವಾದ್ರೂ ಕಲ್ಯಾಣ ಪಟ್ಣದ ಮೂಡಲ ಎಬ್ಬಾಗಿಲಲ್ಲಿ ಕೂತ್ಕಂಡು ನಮ್ ಸ್ವಾಮಿಯೋರ ನಿರೀಕ್ಸನೆ ಮಾಡಣ.

ನೀಲಗಾರರು: ಸಿದ್ದಯ್ಯ ಸ್ವಾಮಿ ಬನ್ನಿ
ಮಂಟೇದ ಗುರುಲಿಂಗಯ್ಯ ನೀವೆ ಬನ್ನಿ ॥

ಪಾರದವರು ಶತಪಥ ತಿರುಗುತ್ತ ಹುಬ್ಬಿನ ಮೇಲೆ ಕೈಯಿಟ್ಟು ಮತ್ತೆ ಮತ್ತೆ ನೋಡುತ್ತಿರುತ್ತಾರೆ. ಐದಾರು ಜನ ಜಂಗಮರ ಪ್ರವೇಶ

ಜಂಗಮ ೧: ನಾವು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು.

ಜಂಗಮ ೨: ಅಲ್ರೀ, ಸೇವಕನಿಗಿಂತ ದೊಡ್ಡವರು ಯಾರ್ರೀ?

ಜಂಗಮ ೩: ಅಷ್ಟೂ ಗೊತ್ತಾಗಲ್ವೇನ್ರೀ?

ಜಂಗಮ ೧: ಗೊತ್ತಿದ್ರೆ ಹೇಳ್ರಿ, ಜಾಸ್ತಿ ಮಾತ್ ಬೇಡ.

ಜಂಗಮ ೨: ಸೇವಕನಿಗಿಂತ ದೊಡ್ಡೋನು ಯಜಮಾನ.

ಜಂಗಮ ೧: ಭಕ್ತನಿಗಿಂತ ದೊಡ್ಡೋನು ಯಾರ್ರೀ?

ಜಂಗಮ ೨: ಇನ್ಯಾರು? ದೇವ್ರು.

ಜಂಗಮ ೧: ಆ ಬಸವಣ್ಣ ಸೇವಕ; ನಾವು ಯಜಮಾನ್ರು. ಆ ಬಸವಣ್ಣ ಭಕ್ತ; ನಾವು ದೇವ್ರು.

ಜಂಗಮ ೨: ಹಾಗಿದ್ರೆ ಅವನ್ಗಿಂತ ಹೆಚ್ಚಿನ ಗುರು ಯಾರ್ರೀ?

ಜಂಗಮ ೧: ಅದೇ ನಾನ್ ಬಡ್ಕೋತಾ ಇರೋದು. ಅವನ್ಗಿಂತಾ ಹೆಚ್ಚಿನ ಗುರು ನಾವಲ್ದೆ ಬೇರೆ ಯಾರೂ ಇಲ್ವಲ್ರೀ.

ಜಂಗಮ ೩: ಅಷ್ಟೂ ಗೊತ್ತಾಗಲ್ವೆ ಆ ಮುಠ್ಠಾಳ ಬುದ್ಧಿಗೆ?

ಜಂಗಮ ೧: ಅಷ್ಟ್ ಗೊತ್ತಾಗಿದ್ರೆ ಇಷ್ಟೆಲ್ಲಾ ಯಾಕ್ರೀ?

ಜಂಗಮ ೨: ಕಲ್ಲಿನ್ ಕೋಳೀಂತೆ.

ಜಂಗಮ ೧: ಕಲ್ಲು ಬಸವನಂತೆ.

ಜಂಗಮ ೩: ನಡು ಮಧ್ಯೆ ಏನೂ ಇಲ್ದೆ ಇರೋ ಗಂಟೆ ಅಂತೆ.

ಜಂಗಮ ೧: ಬನ್ನಿ, ನಾವೂ ನೋಡೋಣ ತಮಾಷೆ. ಅವನ್ಯಾವೋನ್ ಬರ್ತಾನೆ ನಮ್ಗಿಂತ ಹೆಚ್ಚೋನು.

ಒಂದು ಪಕ್ಕಕ್ಕೆ ಹೋಗಿ ನಿಲ್ಲುತ್ತಾರೆ. ಮತ್ತೆ "ಹೆಚ್ಚುವೆ ನಿಮ್ಮದಯ್ಯ" ಹಾಡು. ನಾಲ್ಕು ಜನ ಹೊತ್ತ ಪಲ್ಲಕ್ಕಿ ಮೇಲೆ ಒಬ್ಬ ಜಗದ್ಗುರು ಪ್ರವೇಶ. ಜಗದ್ಗುರು ತೂಕಡಿಸುತ್ತಿರುತ್ತಾನೆ.

ಪಲ್ಲಕ್ಕಿಯವ ೧: ಅಣ್ಣಾ. ತಂಬೂರಿ ಬಾರ್‍ಸೋರ, ಕಲ್ಯಾಣ ಪಟ್ಟಣ ಅಂದ್ರೆ ಇದೇ ಏನ್ರಪ್ಪ?

ನೀಲಗಾರ ೧: ಹೌದಪ್ಪ ಇದೇ ಕಲ್ಯಾಣ ಪಟ್ಣ. ಅದ್ಸರಿ ಊರಿಂದಾಚ್ಗೆ ಒತ್ಕೊಂಡೋಗೋ ಎಣಾನ ಊರೊಳೀಕ್ಯಾಕಪ್ಪ ತಗಬತ್ತಿದ್ದೀರ?

ಪಲ್ಲಕ್ಕಿಯುವ ೨: ಬುಡ್ತು ಅನ್ನೂ. ಅವ್ರು ಜಗತ್ಗಿಂತ ದೊಡ್ಡ ಜಗದ್ಗುರುಗೋಳು. ನಿದ್ದೆ ಓಗವ್ರೆ ಅಷ್ಟೆ.

ನೀಲಗಾರ ೩: ಅಲ್ವಾ ಮತ್ತೆ. ಪಲ್ಲಕ್ಕಿ ಮ್ಯಾಲ್ ಕೂತ್ಕಂಡು ಬಾಳ ದಣ್ವಾಗ್ಯೆತೆ ನೋಡು.

ಪಲ್ಲಕ್ಕಿಯವ ೧: ಜಗದ್ಗುರುಗಳ್ನ ಎಬ್ಸಪ್ಪ.

ಪಲ್ಲಕ್ಕಿಯವ ೨: ನೀನೇ ಎಬ್ಸು.

ಪಲ್ಲಕ್ಕಿಯವ ೩: ನೀನೇ ಎಬ್ಸು.

ಪಲ್ಲಕ್ಕಿಯವ ೪: ನೀನೇ ಎಬ್ಸು.

ಜಗಳ ಆಡ ತೊಡಗುತ್ತಾರೆ

ಜಗದ್ಗುರು: (ನಿದ್ದೆಯಿಂದೇಳುತ್ತ) ಯಾರಪ್ಪ ಅದು ಹುಲುಮಾನವರು ನಮ್ಮ ಯೋಗಸಮಾಧಿಗೆ ಭಂಗ ತರ್‍ತಾ ಇರೋರು? (ಜೋರಾಗಿ ಆಕಳಿಸುತ್ತಾ) ಅಪ್ಪಾ ಶಿಷ್ಯರೇ, ಯಾವ ಪಟ್ಟಣವಪ್ಪ ನಮಗೆ ಮುಂದೆ ಕಾಣ್ತಾ ಇರೋದು?

ಪಲ್ಲಕ್ಕಿಯವ ೧: ಇದೇ ನಾವ್ ಸೇರ್‍ಬೇಕಾಗಿದ್ದ ಕಲ್ಯಾಣ ಪಟ್ಟಣ ಸ್ವಾಮಿ.

ಜಗದ್ಗುರು: ಹಾಗಿದ್ರೆ ಆ ಬಸವಣ್ಣ ಅನ್ನತಕ್ಕಂತ ಪ್ರಾಣಿ ಇನ್ನೂ ಯಾಕೆ ಇಲ್ಲಿಗೆ ಬಂದಿಲ್ಲ? ಹಾರ ತುರಾಯಿ ಎಲ್ಲಿ? ಬ್ಯಾಂಡ್ ಸೆಟ್ ಎಲ್ಲಿ?

ನೀಲಗಾರ ೧: ಸ್ವಾಮಿ ಜಗದ್ಗುರುಗಳೇ, ನಾಲಿಗಿಲ್ಲದ ಗಂಟೆ ನಾದಸಪ್ತ ಮಾಡಗಂಟ ಬಸವಣ್ನೋರು, ನೀಲಮ್ನೋರು ತಬುಸು ಬಿಟ್ಟು ಎದ್‌ಬರಾಕಿಲ್ಲಂತೆ.

ಜಗದ್ಗುರು: ಎಲಾ ಇವ್ರ, ಆ ಗಂಟೆಗೆ ಅಷ್ಟೂ ಗೊತ್ತಾಗ್ಬೇಡ್ವೆ? ಆ ಕಲ್‌ಕೋಳಿ ಎಲ್ಲೋ ಹುಳಹುಪ್ಪೆ ಮುಕ್ಕೋಕ್ ಹೋಗಿರ್‍ಬೇಕು. ಆ ಕಲ್‌ಬಸವ ಯಾರ್‍ದೋ ಹೊಲ್ದಲ್ಲಿ ಹಸು ಹತ್ಕಂಡಿರ್‍ಬೇಕು. ಏ ಪಲ್ಲಕ್ಕಿಯುವ್ರಾ, ಲೋಫರ್‌ಗಳಾ, ನಿದ್ದೆ ಓದ್ರೇನೋ, ನನ್ ಪ್ರತಿ ಮಾತಿಗೂ

'ಹೌದು' ಅನ್ಬೇಕು ಅಂತ ಗೊತ್ತಿಲ್ವೇನ್ರೋ. ಹಾಕ್ ತುಳಿದ್ಬಿಡ್ತೀನಿ ನೋಡು.

ಜಗದ್ಗುರು ಪಲ್ಲಕ್ಕಿ ಮೇಲೆ ಕುಣಿದಾಡುತ್ತಾನೆ

ಪಲ್ಲಕ್ಕಿಯವರು: ಹೌದು ಸ್ವಾಮಿ. ಹೌದು ಸ್ವಾಮಿ. ಹೌದು ಸ್ವಾಮಿ.

ಜಗದ್ಗುರು: ಅಯೋಗ್ಯರಾ, ನಾವು ಏನಾದ್ರೂ ಒಂದ್ ಮಾತ್ ಅಂದಾಗ ಒಂದ್ಸಲ 'ಹೌದು' ಅನ್ಬೇಕು. ಮರ್ತ್ಹೋಯ್ತಾ?

ಪಲ್ಲಕ್ಕಿಯವರು: ಹೌದು ಸ್ವಾಮಿ.

ಜಗದ್ಗುರು: ಅಪ್ಪಾ ಪಲ್ಲಕಿಯೋರಾ, ನಮ್ಮನ್ನ ನೀವು ವೇಗದಲ್ಲಿ ಈ ರಂಗದ ಸುತ್ತ ಹೊತ್ಕೊಂಡು ಸುತ್ತಾಡ್ರಪ್ಪ. ಕೇಳಿಸ್ಕೊಳ್ರಪ್ಪಾ ಕೆಳಗಿರ್‌ತಕ್ಕಂತ ಹುಲುಮಾನವರಾ, ನೀವೂ ಕೇಳಿಸ್ಕಳ್ರಪ್ಪಾ ನಾಯಿಗಳ ಹಾಗೆ ಕಾಯ್ಕೊಂಡಿರೋ ಪಾರದವರಾ, ಜಂಗಮರಾ, ಪಲ್ಲಕ್ಕಿಯವರ್ರಾ, ನಮ್ಮ ಬಿರುದು ಹೇಳ್ರಪ್ಪಾ. ಒನ್, ಟೂ, ತ್ರೀ....

ಪಾರದವರು: ನೀವು ಯಾರಾದರೂ ಸರಿಯೇ. ಆ ಗಂಟೆ, ಆ ಕೋಳಿ, ಆ ಬಸವ ಗುಟುರೋಗಂಟ ಬಸವಣ್ಣೋರು ಮಿಸುಕಾಡಲ್ಲ.

ಜಗದ್ಗುರು: ಲೋ ಉದ್ಧಟ, ಕೇಳು, ನಾವು ಯಾರು, ಸರಿಯಾಗಿ ಕೇಳಿಸಿಕೊಂಡು ಚಾಚೂ ತಪ್ಪದೆ ಆ ನಿನ್ನ ಯಜಮಾನರಿಗೆ ಒಪ್ಪಿಸು. ಅಪ್ಪಾ ಶಿಷ್ಯರಾ, ನಮ್ಮ ಬಿರುದು ಹೇಳ್ರಪ್ಪ.

ಪಲ್ಲಕಿಯವ ೧: ಸಮಾಜ ಸೇವಾ ದುರಂಧರ....

ಜಗದ್ಗುರು: ಈ ಕ್ಷೇತ್ರದಲ್ಲಿ ನಮ್ಮ ಸೇವೆ?

ಪಲ್ಲಕ್ಕಿಯವ ೨: ಆರು ಮೆಡಿಕಲ್ ಕಾಲೇಜು, ಹನ್ನೆರಡು ಇಂಜಿನಿಯರಿಂಗ್ ಕಾಲೇಜು...

ಪಲ್ಲಕ್ಕಿಯವ ೩: ಇಪ್ಪತ್ತಾರು ಫಸ್ಟ್‌ಗ್ರೇಡ್ ಕಾಲೇಜು, ಐವತ್ತೆರಡು ಜ್ಯೂನಿಯರ್ ಕಾಲೇಜು....

ಪಲ್ಲಕ್ಕಿಯವ ೪: ನೂರಾರು ಇಂಗ್ಲೀಷ್ ಮೀಡಿಯಂ ಸ್ಕೂಲುಗಳು...

ಪಲ್ಲಕ್ಕಿಯವ ೧: ಅನಾಥ ರಕ್ಷಕ ಕೃಪಾಕರ....

ಜಗದ್ಗುರು: ಈ ಕ್ಷೇತ್ರದಲ್ಲಿ ನಮ್ಮ ಸೇವೆ?

ಪಲ್ಲಕ್ಕಿಯವ ೨: ಹತ್ತು ಹೆರಿಗೆ ಆಸ್ಪತ್ರೆ, ಇಪ್ಪತ್ತು ಅನಾಥಾಶ್ರಮ...

ಪಲ್ಲಕ್ಕಿಯವ ೩: ನಲ್ವತ್ತು ಅಂಧಾಶ್ರಮ, ಎಂಬತ್ತು ಮೂಕಾಶ್ರಮ...

ಪಲ್ಲಕ್ಕಿಯವ ೪: ನೂರರವತ್ತು ವಿಧವಾಶ್ರಮ, ಸರ್ವರಿಗೆ ಯೋಗಾಶ್ರಮ.

ಪಲ್ಲಕ್ಕಿಯವ ೧: ಶ್ರೀಮಂತ ವೃದ್ಧ – ವೃದ್ಧೆಯರ ವಿಹಾರಾಶ್ರಮ...

ಪಲ್ಲಕ್ಕಿಯವ ೨: ಸಕಲ ಧರ್ಮಶಾಸ್ತ್ರ ರತ್ನಾಕರ...
ಜಗದ್ಗುರು: ಈ ಕ್ಷೇತ್ರದಲ್ಲಿ ನಮ್ಮ ಸೇವೆ?
ಪಲ್ಲಕ್ಕಿಯವ ೧: ನ್ಯೂಯಾರ್ಕ್‌ನ ವಿಶ್ವಧರ್ಮ ಸಮ್ಮೇಳನದ ಅಧ್ಯಕ್ಷ...
ಪಲ್ಲಕ್ಕಿಯವ ೨: ಸಕಲ ಮಠಾಧ್ಯಕ್ಷ ಹಿತರಕ್ಷಣಾ ಸಮಿತಿ ಉಪಾಧ್ಯಕ್ಷ...
ಪಲ್ಲಕ್ಕಿಯವ ೩: ಧರ್ಮ-ವಿಜ್ಞಾನ ಸಮನ್ವಯ ಮಹಾಸಭಾ ಕೋಶಾಧ್ಯಕ್ಷ.
ಪಲ್ಲಕ್ಕಿಯವ ೪: ದೇವರಿಲ್ಲವೆಂದವರಿಗೆ ಯಮಪಾಶ...
ಜಂಗಮ ೧: ರೀ, ಸಾಕು ನಿಲ್ಲಿಸ್ರೀ. ನೀವೇನು ಬೊಂಬ್ಡಿ ಬಜಾಯಿಸಿದ್ರೂ ಆ ಗಂಟೆ ನುಡ್ಯೋವರ್ಗ್ಗೂ ಬಸವಣ್ಣ ಬರೋಲ್ಲ.
ಜಗದ್ಗುರು: ಅವನೆಂಥಾ ಮೂರ್ಖರ್ರೀ. ಅವನ ಮೆದುಳಿಗೆ ಗೊತ್ತಾಗದ್ದು ಆ ದರಿದ್ರ ಗಂಟೇಗೇನ್ರೀ ಗೊತ್ತಾಗುತ್ತೆ?
ಜಂಗಮ ೧: ಅದೇ ತಮಾಷೆ ನೋಡೋಕೆ ನಾವೂ ಕಾದಿದೀವಿ. ನೀವೂ ಬೇಕಾದ್ರೆ ನಮ್ಮ ಜೊತೆ ಇಲ್ಲೆ ಇದ್ದು ನೋಡಿ–
ಜಗದ್ಗುರು: ನಿಲ್ಸಿ. ನಮ್ಮ ಘ್ರಾಣೇಂದ್ರಿಯಕ್ಕೆ ಯಾವುದೋ ದುರ್ವಾಸನೆ ಬಡೀತಿದ್ಯಲ್ಲ.
ಜಂಗಮ ೨: ಹೌದು. ಅಸಹನೀಯ. ಅವರ್ಣನೀಯ.
ಜಂಗಮ ೩: ಕೊಳಕು ವಾಸನೆ.
ಪಾರದವ ೧: ಗಬ್ಬುನಾತ. ಅಪ್ಪ ತಂಬೂರಿಯೋರೆ. ನಿಮ್ಗೇನೂ ಅನ್ನಿಸ್ತಿಲ್ವ?
ನೀಲಗಾರ ೧: ನಮ್ ಹಟ್ಟೀ ತುಂಬಾ ಇದೇ ವಾಸ್ನೆ. ನಮ್ ಉಸುರು ತುಂಬಾ ಅದೇ ಆಗದೆ. ನಮ್ಗೇನೂ ಹೊಸಾ ನಾತ ಅನ್ನುಸ್ತಾ ಇಲ್ಲ.
ಜಂಗಮ ೧: ಅದಕ್ಕೇ ಶಾಸ್ತ್ರಗಳಲ್ಲಿ ಹೀನ ಯೋನಿಜರಿಗೆ ಮೋಕ್ಷ ಇಲ್ಲ ಅಂತ ಹೇಳಿರೋದು.
ಪಾರದವ ೨: ಅಲ್ಲಿ! ಆ ಹರಳಯ್ಯನ ತಿಪ್ಪೇತಾವ ಏನೋ ಮಿಸುಕಾಡ್ತಾ ಐತೆ.

ಎಲ್ಲರ ದೃಷ್ಟಿ ರಂಗದ ಎಡಭಾಗದ ಕೊನೆಯಲ್ಲಿರುವ ತಿಪ್ಪೆಯ ಮೇಲೆ ಬೀಳುತ್ತದೆ.

ನೀಲಗಾರರು:
ಮಂಟೇದ ಸ್ವಾಮಿ ಬನ್ನಿ
ಏಕಾಂಗ್ಯದ ನಿರ್ವಾಣ್ಯ ನೀವೆ ಬನ್ನಿ ॥
ಕೊಳ್ಳ ರುದ್ರಾಕ್ಷಿಯವರೆ
ಕೈಯ್ಯ ನಾಗಬೆತ್ತದವರೆ
ಅಣೆಯ ಈಬತ್ತಿಯವರೆ
ತಲೆಗೆ ಕಾವಿ ಪೇಟದವರೆ
ಮಂಟೇದಸ್ವಾಮಿ ಬನ್ನಿ
ಪರಂಜ್ಯೋತಿಲಿಂಗಯ್ಯ ನೀವೆ ಬನ್ನಿ ॥

ತಿಪ್ಪೆಯೊಳಗಿಂದ ನಗು ಕೇಳಿಬರುತ್ತದೆ. ವಿಕಾರ ವೇಷಧಾರಿ ಮಂಟೇಸ್ವಾಮಿ ಅದರಿಂದ ಆಚೆ ಎದ್ದು ಬರುತ್ತಾನ

ನೀಲಗಾರ ೧: ಎಣ್ಣಾ. ಇದ್ಯಾವುದಣ್ಣ ಈ ಕಾಡುಪಾಪ?

ನೀಲಾಗಾರ ೨: ನೋಡ್‌ದೇಟ್ಗೇ ವಾಕ್ ಅಂತ ವಾಕರ್ಕೆ ಬತ್ತದಲ್ಲಣ್ಣಾ.

ನೀಲಗಾರ ೩: ಅವುನ್ ಸುತ್ತಾ ನೊಣ್ಣಗಳ್ ಜೊಯ್ಯಂತಾವೆ.

ಜಗದ್ಗುರು: ಅಪ್ಪ ಪಲ್ಲಕ್ಕಿಯೋರ. ನಮ್ಮನ್ನ ಆ ಬಸವಣ್ಣ ಸ್ವಾಗತಿಸ್ಲಿಲ್ಲ. ಈ ಕಾರಣವಾಗಿ ದಯಾಮಯವಾದ ಭಗವಂತ ಈ ಹೊಲಸು ಪ್ರಾಣಿಯನ್ನು ಇಲ್ಲಿ ಕಳಿಸಿದ್ದಾನೆ. ಈ ಹೊಲಸು ವಾಸನೆ ನಾವು ಸಹಿಸೋಕಾಗೋದಿಲ್ಲ, ನಮ್ಮನ್ನ ಹೊತ್ತುಕೊಂಡು ಇಲ್ಲಿಂದ ನಡೀರಪ್ಪ.

ಪಲ್ಲಕ್ಕಿಯವರು ಜಗದ್ಗುರುವನ್ನು ಹೊತ್ತುಕೊಂಡು ನಿಷ್ಕ್ರಮಣ

ಜಂಗಮರು: ಏ ಹೊಲಸು ಮುಂಡೆಗಂಡ. ಏ ತಿಪ್ಪೇಹುಳ. ದೂರ ಹೋಗು. ಹತ್ರ ಬಂದು ನಮ್ಮನ್ ಮೈಲ್ಗೆ ಮಾಡ್ಬೇಡ.

ಮಂಟೇಸ್ವಾಮಿ ಇವೆಲ್ಲವನ್ನು ಗಮನಿಸುತ್ತ ನಗುತ್ತ ಅತ್ತಕಡೆ ಧಾವಿಸುತ್ತಾನೆ.

ಜಂಗಮ ೧: ಏ ಪಾರದವರೆ. ಅವನೇನಾದ್ರೂ ನಗರ ಪ್ರವೇಶ ಮಾಡಿದ್ರೆ ಇಡೀ ಕಲ್ಯಾಣ ಒಂದು ತಿಪ್ಪೆ ಆಗುತ್ತೆ. ಹೋಗಿ ಅವನ್ನ ಒದ್ದು ಓಡಿಸಿ.

ಜಂಗಮ ೩: ಹೋಗ್ರೋ. ಬೇಗ ಹೋಗ್ರಿ. ಇಲ್ದೆ ಇದ್ರೆ ನಿಮ್ಮ ಬಸವಣ್ಣನ ಪೂಜೆ ಎಲ್ಲ ಅಪವಿತ್ರ ಆಗುತ್ತೆ.

ಪಾರದವ ೧: ಏ ಗಬ್ ನನ್‌ಮಗ್ನೆ. ಅಂಗೇ ಇಂದುಕ್ ಓಗು.

ಪಾರದವ ೩: ಇನ್ನೊಂದು ಎಜ್ಜೆ ಮುಂದಕಿಕ್ಕೀಯ.

ಮಂಟೇಸ್ವಾಮಿ ಸ್ವಲ್ಪ ನಿಲ್ಲುತ್ತಾನೆ. ನಕ್ಕು ಗಡಿಗೆಯಿಂದ ಗುಟುಕು ಹೆಂಡ ಕುಡಿದು ಮತ್ತೆ ದ್ವಾರದ ಕಡೆ ಹೆಜ್ಜೆ ಹಾಕುತ್ತಾನೆ.

ಪಾರದವರು ಅವನು ಮುಂದುವರೆಯದಂತೆ ಶೂಲ ಅಡ್ಡ ಇಕ್ಕುತ್ತಾರೆ. ಮಂಟೇಸ್ವಾಮಿ ಶೂಲವನ್ನು ತಳ್ಳಲು ಹೋಗುತ್ತಾನೆ.

ಪಾರದವ ೧: ನಿಂತ್ಕೊಳ್ಳೋ ತಿರುಬೋಕಿ.

ಪಾರದವ ೨: ಏನೊಳ್ಳೆ ರತ್ನಶೆಟ್ಟಿಯಂಗೆ ಬತ್ತಾ ಇದೀಯ? ಮರ್ಯಾದೆಯಿಂದ ಹಿಂದಕ್ಕೋಗು. ಇಲ್ದೆ ಇದ್ರೆ ನೆಟ್ಟಗಾಗಲ್ಲ.

ಮಂಟೇಸ್ವಾಮಿ: ಅಪ್ಪ ಪಾರದವರ. ದಾರಿ ಬುಡ್ರಪ್ಪ.

ಪಾರದವ ೧: ಎಲ್ಲಿಗ್ ದಾರಿ?

ಪಾರದವ ೨: ತಿಪ್ಪೆಗೋ. ಸುಡುಗಾಡ್ಗೋ?

ಪಾರದವ ೧: ಅವೆಲ್ಲು ಇರೋದು ಅತ್ಕಡೀಕೆ: ಇತ್ಕಡೀಕಲ್ಲ.
ಮಂಟೇಸ್ವಾಮಿ: ಅಪ್ಪ. ನನ್ನ ಮಗ-ಸೊಸೆ ಕಾಯ್ತಾ ಇದ್ದಾರು ಕನಪ್ಪ. ಅವರಟ್ಟೀಗೆ ಓಗಕೆ ಜಾಗ ಬುಡ್ರಪ್ಪ.
ಪಾರದವ ೧: ಅದ್ಯಾವನಪ್ಪ ನಿನ್ ಮಗ?
ಪಾರದವ ೨: ಅದ್ಯಾವಳಪ್ಪ ನಿನ್ ಸೊಸೆ?
ಮಂಟೇಸ್ವಾಮಿ: ಅದೇನಪ್ಪ. ಆ ಬಸವಣ್ಣೂವೆ. ನೀಲಮ್ಮನೂವೆ.
ಜಂಗಮ ೧: ಏ ಪಾರದೋರ. ಏನ್ ನೋಡ್ತಾ ನಿಂತಿದ್ದೀರ್ರೋ? ಆ ಕ್ಷುಲ್ಲಕ ವ್ಯಕ್ತಿ ಬಸವಣ್ಣೋರ್ನ ತನ್ ಮಗ ಅಂತಿದಾನೆ.
ಜಂಗಮ ೨: ಕೊಡ್ರೊ ಒಂದೆರಡು ಬಿಸಿ ಕಜ್ಜಾಯ.
ಪಾರದವ ೧: ಏನಂದೆ? ಬಸವಣ್ಣೋರ್ ನಿನ್ ಮಗ ಅಂತೀಯ?
ಮಂಟೇಸ್ವಾಮಿ: ಊ ಕನ್ರಪ್ಪ. ನಿಮ್ಗೆ ನಂಬ್ಕೆ ಬರ್ದಿದ್ರೆ ಓಗಿ ಅವ್ರುನ್ನೇ ಕೇಳ್ಕಬನ್ನಿ. ಅವ್ರೆ ನಮ್ಗೆ ಏಳ್ ಕಳ್ಸವ್ರೆ.
ಪಾರದವ ೨: ಅದ್ಯಾವ ಮಾಯದಲ್ಲಿ ಏಳ್‌ಕಳ್ಸುದ್ರಪ್ಪ ನಿಂಗೆ?
ಮಂಟೇಸ್ವಾಮಿ: ಅವ್ರು ತಬುಸ್‌ನೊಳ್ಗಿನ ಬಯ್‌ಕೆ ನಮ್ ಗುರುಪಾದುಕ್ಕೆ ಅರುವಾಯ್ತಪ್ಪ.
ಪಾರದವ ೨: ಅಂಗಿದ್ರೆ ನೀನೂ ಗುರು?
ಜಂಗಮ ೧: ಏ ಪಾರದೋರ. ಏನ್ರೋ ಅವನ ಜೊತೆ ನಿಮ್ ಚಕ್ಕಂದ?
ಪಾರದವ ೨: ತಾನೇ ಗುರು ಅಂತಾವ್ನೆ. ರವಟ್ ಇಚಾರುಸ್ಕಂತಾ ಇದೀವಿ.
ಜಂಗಮ ೨: ಅವನ್ಯಾವ ಸೀಮೆ ಗುರೂನೋ. ಗುರು ಲಕ್ಷಣ ಎಲ್ಲಿದ್ಯೋ ಅವ್ನಲ್ಲಿ?
ಪಾರದವ ೨: ಏ ಬೊಡ್ಡೆತ್ತುದೆ. ನಾವೇನ್ ಬುದ್‌ಕೆಟ್ಟವು ಅನ್‌ಕಂಡೆನಾಲೇ?
ಜಂಗಮ ೧: ನೀನ್ ಗುರು ಆಗಿದ್ರೆ ಕೊಳ್ಳಾಗಿನ್ ರುದ್ರಾಕ್ಷಿ ಎಲ್ಲಿ?
ಜಂಗಮ ೨: ಅಣೆ ಮೇಲ್ ಈಬತ್ತಿ ಎಲ್ಲಿ?
ಜಂಗಮ ೧: ಎದೆ ಮೇಲ್ ಲಿಂಗ ಎಲ್ಲಿ
ಜಂಗಮ ೨: ಕೈಯಲ್ಲಿ ಕಮಂಡ್ಲ ಎಲ್ಲಿ?
ಜಂಗಮ ೧: ಇವೆಲ್ಲ ಇಲ್ದಿದ್ ಮೇಲೆ ನೀನ್ಯಾವ ಸೀಮೆ ಗುರೂನೋ?
ಮಂಟೇಸ್ವಾಮಿ: ಅಪ್ಪಾ ಪಾರ್‌ದೋರಾ. ಒಂದೇ ಒಂದ್‌ಕಿತ ಆ ನನ್ ಸಿಸು ಮಕ್ಳು ಬಸವಣ್ಣ, ನೀಲಾಂಬ್ಕೆನ ನೋಡ್ಕಂಬನ್‌ಬುಡ್ತೀನಪ್ಪ.
ಪಾರದವ ೧: ಲೇ. ಕೈಲಾಗದ್ ಬೀದಿ ಭಿಕಾರಿ ಅಂತ ಸುಮ್ಕೆ ಇದ್ರೆ ಇವ್ನ ಬಡಪೆಟ್ಗೆ ಓಗೋನಲ್ಲ ಕಣೋ. ಇಂಕ್ರ ಚುರುಕ್ ಮುಟ್ಸಾಣ ಬಾ.

ಇಬ್ಬರೂ ಎಳೆಯುತ್ತಾರೆ. ಮಂಟೇಸ್ವಾಮಿ ಕೊರಗುತ್ತ ಕೆಳಗೆ ಬೀಳುತ್ತಾನೆ.

ಜಂಗಮ ೧: ಹಾಕ್ರೋ. ಚೆನ್ನಾಗಿ ಹಾಕ್ರೋ.
ಜಂಗಮ ೨: ಗುರು ಅಂತೆ ಗುರು.

ಪಾರದವರು ತಮ್ಮ ಜಾಗಕ್ಕೆ ಹೋಗಿ ನಿಂತುಕೊಳ್ಳುತ್ತಾರೆ. ಮಂಟೇಸ್ವಾಮಿ ಮೆಲ್ಲಗೆ ತಾನು ಬಂದ ತಿಪ್ಪೆಯ ಕಡೆ ತೆವಳುತ್ತಾ ಇದ್ದಕ್ಕಿದ್ದಂತೆ ಸೆಟೆದು –

ಮಂಟೇಸ್ವಾಮಿ: ನಾಲಿಗಿಲ್ಲದ ಹೇ ಗಂಟೆ
ನಾದ ಸಪ್ತ ಮಾಡು ನೀನು
ನುಡೀಲಾರದ ಕಲ್ಲುಕೋಳಿ
ಕೊಕ್ಕೊಕ್ಕೋ ಕೂಗು ನೀನು
ಕೂಗಲಾರದ ಕಲ್ಲುಬಸವ
ಕೊಳ್ಳನೆತ್ತಿ ಗುಟುರುಹಾಕು

ಮಂಟೇಸ್ವಾಮಿ ಮತ್ತೆ ತಿಪ್ಪೆ ಕಡೆ ಹೋಗುತ್ತಾನೆ. ಗಂಟೆ-ಕೋಳಿ-ಬಸವ ನುಡಿಯುತ್ತವೆ.

ಬಸವಣ್ಣ. ನೀಲಾಂಬಿಕೆ ಪ್ರವೇಶ

ಬಸವಣ್ಣ: ಅಪ್ಪಾ ಪಾರದೋರೆ, ಅಪ್ಪಾ ಜಂಗಮರೆ, ಯಾರಾದ್ರೂ ಮಹಾತ್ಮರು ಬಂದ್ರೇನಪ್ಪಾ?
ಪಾರದವ ೧: ಮಾತ್ಮರು ಗೀತ್ಮರು ಒಬ್ರೂ ಬರಲಿಲ್ಲ ಬುದ್ಧಿ.
ಬಸವಣ್ಣ: ಹೇಳಿ, ಬೇರೆ ಯಾರು ಬಂದಿದ್ರೂಂತ.
ಪಾರದವ ೨: ಒಬ್ಬ ದಡಿಯ, ಒಬ್ಬ ಕೊಳಕು ಮಂಡ್ಲ.
ಜಂಗಮರು: ನೀವು ಒಳಗ್ ಕುಂತು ತಪಸ್ ಮಾಡ್ತಾ ಇರೋವಾಗ ನಾವಿಲ್ಲಿ ನಿಂತ್ ತಪಸ್ ಮಾಡ್ತಾ ಇದೀವಿ. ನಮ್ಮಂಥಾ ಶರಣ್ರೂ ಮಹಾತ್ಮರೂ ಒಬ್ರೂ ಸುಳೀಲಿಲ್ಲ.

ಮತ್ತೆ ಗಂಟೆ-ಕೋಳಿ-ಬಸವ ಇನ್ನೂ ಜೋರಾಗಿ ನುಡಿಯತೊಡಗುತ್ತವೆ.

ಬಸವಣ್ಣ: ಹಾಗಿದ್ರೆ ನಮ್ಮ ಗುರುದೇವರು ಬಂದಿದ್ದಾರೆ.
ನೀಲಾಂಬಿಕೆ: ಖಂಡಿತಾ ಬಂದಿದ್ದಾರೆ.
ಬಸವಣ್ಣ: ಮಗೂ ರಾಚಪ್ಪ, ದೀಪ ತೆಗೆದುಕೊಂಡು ಬೇಗ ಬಾ ಗುರುಗಳು ಎಲ್ಲಾದ್ರೂ ಹೋಗಿಬಿಟ್ಟಾರು.

ಹುಡುಗ ರಾಚಪ್ಪ ದೀಪ ತರುತ್ತಾನೆ. ಬಸವಣ್ಣ. ನೀಲಾಂಬಿಕೆ. ರಾಚಪ್ಪ ರಂಗದ ಮೇಲೆ ಹುಡುಕುತ್ತಾರೆ.

ನೀಲಗಾರ ೧: ಎಣ್ಣಾ, ಅಂಗಿದ್ರೆ ನಮ್ ಗುರುಗಳು ಬಂದ್ಬಿಟ್ಟಾರೆ
ನೀಲಗಾರ ೨: ಬಾ, ಬಸವಣ್ಣೋರ ದೀಪದ್ ಬೆಳಕ್ನಲ್ಲೇ ನಾವೂ ಹುಡುಕೋಣ.

ನೀಲಗಾರರು ಬಸವಣ್ಣನನ್ನು ಹಿಂಬಾಲಿಸುತ್ತಾರೆ.

ನೀಲಗಾರರು: ಎಲ್ಲಿ ಅಡಗಿದರೋ ಗುರುದೇವ ।
ಎಲ್ಲಿ ನಡೆದಿಹರೋ ಗುರುದೇವ ॥
ಹಾದಿಮೇಲಿನ ಕಲ್ಲು ಕಲ್ಲೆ
ಕಲ್ಲ ಮೇಲಿನ ಮಣ್ಣು ಮಣ್ಣೆ
ಹಾದಿನಾಚೆಯ ದಿಕ್ಕು ದಿಕ್ಕೆ
ದಿಕ್ಕಿನಾಚೆಯ ಚಿಕ್ಕೆ ಚಿಕ್ಕೆ
ಎಲ್ಲಿ ಅಡಗಿದರೋ ಗುರುದೇವ ।
ಎಲ್ಲಿ ನಡೆದಿಹರೋ ಗುರುದೇವ ॥

ರಾಚಪ್ಪ: ಅಮ್ಮ, ಅಮ್ಮ, ಅಗೋ ನೋಡಿ ಆ ತಿಪ್ಪೆಯೊಳಗೆ ಏನೋ ಸರಸರಾಂತಿದೆ.

ಜಂಗಮ ೧: ರೀ, ಬಸವಣ್ಣೋರೆ ಹುಷಾರು. ಆ ತಿಪ್ಪೆ ತುಂಬಾ ಹಾವು ಚೇಳಂತೆ.

ಜಂಗಮ ೨: ಹುಷಾರು, ಹುಷಾರು. ಹೆಂಗುಸ್ರು ಜೊತೆಗೆ ಆ ಜಾಗಕ್ಕೆ ಹೋಗಬೇಡಿ.

ಬಸವಣ್ಣ: ರಾಚಪ್ಪ, ಇತ್ಕಡೆ. ಆ ಮಂಟಪದ್ಕಡೆ ದೀಪ ತೋರ್ಸು.

ನೀಲಾಂಬಿಕೆ: ಆ ಹಳ್ಳದ ಕಡೆ ದೀಪ ತಾರಪ್ಪ.

ರಾಚಪ್ಪ: ಇಲ್ಲ, ಇಲ್ಲೇ ಈ ತಿಪ್ಪೇಲೆ ಒಂದ್ ಜೀವ ಇದೆ.

ರಾಚಪ್ಪ ತಿಪ್ಪೆಕಡೆ ಹೋಗುತ್ತಾನೆ

ನೀಲಾಂಬಿಕೆ: ಇದೇ ಮುಖವನ್ನೆ, ಇದೇ ಮುಖವನ್ನೆ ನಾನು ಕನಸಿನಲ್ಲಿ ಕಂಡದ್ದು.

ಬಸವಣ್ಣ: ಹೌದು. ಯಾವುದೋ ಜನ್ಮದಲ್ಲಿ ಕಂಡ ಮುಖ. ಸ್ವಾಮಿ, ನಿಮ್ಮ ಗುರುತು ಹತ್ತುತ್ತಿದೆ, ಸಿಕ್ಕುತ್ತಿಲ್ಲ. ನಿಮ್ಮ ಬರವಿನಿಂದಲೇ ಆ ಗಂಟೆ ನುಡಿದದ್ದು ಎಂದು ನನ್ನ ಎದೆಬಡಿತ ಹೇಳುತ್ತಿದೆ. ಗುರುಗಳೇ, ಪ್ರಭುದೇವರೆ, ಕೂರಬಾರದ ಜಾಗದಲ್ಲಿ ಯಾಕೆ ಕುಂತಿದ್ದೀರ, ತೊಡಬಾರದ ವೇಷವನು ಯಾಕೆ ತೊಟ್ಟಿದ್ದೀರ? ಬನ್ನಿ, ನಿಮಗಾಗಿ ಶರಣ ಸಂದೋಹ ಕಾಯುತ್ತಿದೆ.

ಮಂಟೇಸ್ವಾಮಿ ಬಂಗಿ ದಂ ಬಿಟ್ಟು ಬಸವಣ್ಣನ ಕಡೆ ಬೆನ್ನು ಮಾಡುತ್ತಾನೆ.

ನೀಲಾಂಬಿಕೆ: ಬನ್ನಿ ಗುರುಗಳೇ. ನಿಮಗೋಸ್ಕರ ಎಷ್ಟೋ ಜನ್ಮ ಕಾದಿದ್ದೇವೆ.

ನೀಲಗಾರ ೧: ಎಣ್ಣಾ ಅವ್ರೇ ನಮ್ ಗುರುಗೋಳು, ಥರಗೆ ದೊಡ್ಡವ್ರು. ಯಾವ ಪವಾಡಕ್ಕೋಸ್ಕರನೋ ಈ ಯೇಸ ಹಾಕ್ಕಂಡ್ ಬಂದವ್ರೆ. ನಡೀರಿ, ನಾವೂ ಆ ತಿಪ್ಪೆತಾಕ್ ಓಗಾನ.

ಜಂಗಮ ೧: ಬನ್ನಿ ತಮಾಷೆ ನೋಡೋಣ.

ಎಲ್ಲರೂ ಮೂಗುಮುಚ್ಚಿಕೊಂಡು ತಿಪ್ಪೆ ಕಡೆ ಹೋಗುತ್ತಾರೆ.

ಮಂಟೇಸ್ವಾಮಿ: ಅಪ್ಪಾ ಬಸವಣ್ಣೋರೆ. ಅಮ್ಮಾ ನೀಲಮ್ಮೋರೆ. ನಾವು ಗುರುಗೋಳೂ ಅಲ್ಲ. ಯತಿಗೋಳೂ ಅಲ್ಲ. ಈ ಜಂಗಮ್ಯೆಗುಳೊಳ್ಗೆ ಯಾರೋ ಒಬ್ರು ಇರ್ಬೇಕ್ ನೋಡಿ.

ಜಂಗಮ: ಹೌದ್ರೀ ಬಸವಣ್ಣೋರೆ. ಅವನು ಗುರುವೇ ಆಗಿದ್ರೆ ಅವನ್ ಕೊಳ್ಳಲ್ಲಿ ರುದ್ರಾಕ್ಷಿ ಎಲ್ಲಿ?

ಜಂಗಮ ೨: ಹಣೇಲಿ ಈಬತ್ತಿ ಎಲ್ಲಿ?

ಜಂಗಮ ೩: ಎದೆಮೇಲೆ ಸ್ವಾಮಿ ಎಲ್ಲಿ?

ಜಂಗಮ ೪: ಚಿನ್ನದ್ ಕರಡಿಗೆ ಎಲ್ರಿ?

ಜಂಗಮ ೧: ಹಾಳಾಗ್ ಹೋಗ್ಲಿ. ಒಂದ್ ತುಂಡ್ ದಾರಾನೂ ಕಟ್‌ಕೊಂಡಿಲ್ವಲ್ರಿ. ನಡೀರಿ. ನಡೀರಿ. ಇವ್ನ ಗುರು ಆದ್ರೆ ಈ ತಿಪ್ಪೇನೇ ಮಠ ಆಗುತ್ತೆ. ಇಲ್ಲಿ ಕುಂತಿರೋ ಜನ ನೋಡಿ. ನಿಮ್ಮುನ್ ನೋಡಿ ಹ್ಯಾಗೆ ನಗ್ತಾ ಇದಾರೆ.

ಮಂಟೇಸ್ವಾಮಿ: ಹೌದ್ರಪ್ಪ ಬಸವಣ್ಣೋರೆ, ನಾವು ನಿಮ್ಗೆ ಗುರುಗಳಲ್ಲ, ನೀವ್ ನಮ್ಗೆ ಸಿಸ್ಯರಲ್ಲ.

ಬಸವಣ್ಣ: ಇಲ್ಲ, ಈ ಜಗತ್ತು ಕಾಯುತ್ತಿದ್ದ ಗುರುಗಳು ನೀವೇ, ಬನ್ನಿ ಹೋಗೋಣ.

ನೀಲಾಂಬಿಕೆ: ನಿಮಗೋಸ್ಕರವೇ ನಾವು ತಪಸ್ಸು ಮಾಡುತ್ತಿದ್ದುದು.

ಮಂಟೇಸ್ವಾಮಿ: ಅಲ್ರಪ್ಪಾ ಬಸವಣ್ಣೋರೆ. ನೀವು ನಮ್‌ಗಾಗಿ ತಬುಸ್ ಮಾಡಿದ್ದು ನಿಜ ಆಗಿದ್ರೆ ನಿಮ್ ದ್ವಾರದೊಳಗಿದ್ದ ಅಂಬಾರದ ಪಾರದವರು ಯಾಕ್ರಪ್ಪ ನಮ್ಗೆ ಎಕ್ಕತ್ತಿನ್ ಮೇಲೆ ಗುದ್ದಿದ್ರು? ನಮ್ ಸೊಂಟದ ಮ್ಯಾಲೆ ಒದ್ರು? ನಾವ್ ನಿಮ್ಗೆ ಗುರುಗೊಳಲ್ಲ. ನೀವ್ ನಮ್ಗೆ ಸಿಸ್ಯುರಲ್ಲ. ಓಗಿ ಇನ್ಯಾರಾನಾ ಗುರುಗುಳ್ನ ನೋಡ್ಕಳ್ಳಿ.

ಜಂಗಮ ೧: ಬರ್ರಿ ಬರ್ರಿ ಬಸವಣ್ಣೋರೆ, ಇವನ್ ತಾತ್‌ನಂತೋರ್ನ ಹುಡುಕ್‌ಕೊಡ್ತೀವಿ ಬರ್ರಿ.

ಬಸವಣ್ಣ: ನೀವು ನಮ್ಮ ಅರಮನೆಗೆ ಬರದಿದ್ದರೆ ನಿಮ್ಮ ಪಾದವೆ ನಮಗೆ ಅರಮನೆ.

ನೀಲಾಂಬಿಕೆ: ಅಲ್ಲೇ ನಮ್ಮೆಲ್ಲರ ಜಾಗ.

ಜಂಗಮರು: ಬುದ್ಧಿಭ್ರಮಣೆ. ಇದೆಲ್ಲ ಬುದ್ಧಿಭ್ರಮಣೆ.

ಜಂಗಮ ೨: ರೀ ನೀಲಮ್ಮೋರೆ. ನಿಮ್ ಯಜಮಾನ್ರಿಗೇನಾದ್ರೂ ಅಫೀಮ್ ತಿನ್ನಿಸಿದ್ರೇನ್ರೀ?

ಜಂಗಮ ೩: ನೀವಿಬ್ರೂ ಏನಾದ್ರೂ ಸ್ವಲ್ಪ ತಗೊಂಡಿದ್ರಾ?

ಜಂಗಮ ೪: ಇಲ್ಲ, ಇಲ್ಲ. ತಿಪ್ಪೇಲ್ ಬಿದ್ದಿರೋ ಹೊಲಸು ಮುಂಡೇ ಗಂಡನ್ನ ಗುರು ಅಂತ ಇವರು ಸ್ವೀಕಾರ ಮಾಡಿದ್ಮೇಲೆ ನಾವಿನ್ನು ಇವರ ಮನೇಲಿರ್‍ಬಾರ್ದು. ಇವರ ಊರಲ್ಲಿರ್‍ಬಾರ್ದು. ಇವರ ಧರ್ಮದಲ್ಲಿರ್‍ಬಾರ್ದು. ನಡೀರಪ್ಪ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರ....

ಜಂಗಮರು: ನಡೀರಿ, ನಡೀರಿ.

ಜಂಗಮರು ನಿಷ್ಕ್ರಮಣ

ಬಸವಣ್ಣ: ಗುರುಗಳೆ, ಇನ್ನಾದರೂ ದಯಮಾಡಿ.

ಮಂಟೇಸ್ವಾಮಿ: ಅಪ್ಪಾ, ಬಸವಣ್ಣೋರೆ, ನಾವ್ ನಿಮ್ಮ ಅರಮನೆ ಒಳೀಕ್ ಬಂದ್ರೆ ನಿಮ್ ಅರಮನೆ ಬರಿದಾಯ್ತದೆ. ನಿಮ್ ಮಾಮನೆ ಮಣ್ಣಾಯ್ತದೆ. ಕಲ್ಯಾಣ ಕರ್‌ಗೋಯ್ತದೆ. ನಿಮ್ ರಾಜ್ಯ, ಕೋಸ ಎಲ್ಲ ಈ ತಿಪ್ಪೆಯಂಗಾಗಿ, ಮ್ಯಾಲೆ ಒಂದು ಅದ್ದು, ಒಂದು ಕಾಗೆ ಆಡ್ತಾ ಇರ್‍ತಾವೆ. ಆದ್ರಿಂದ ಬಸವಣ್ಣೋರೆ, ಈ ತಿಪ್ಪೆ ನಮ್‌ಗಿರ್‍ಲಿ. ಆ ಅರಮನೆ ನಿಮ್‌ಗಿರ್‍ಲಿ. ನಾವ್ ಬರಾಕಿಲ್ಲ, ನೀವು ಒಂಟೋಗಿ.

ನೀಲಾಂಬಿಕೆ: ನಮ್ಮ ಸರ್ವಸ್ವವು ನಾಶವಾದರೂ ಸರಿ. ನೀವು ಬರಲೇಬೇಕು.

ಮಂಟೇಸ್ವಾಮಿ: ಕಂದಾ ನೀಲಮ್ಮ, ನಿಮ್ಮ ಭಕ್ತಿ ಗುರುಪಾದಕೆ ಅರುವಾಯ್ತಮ್ಮ, ನಿಮ್ಮ ಪಾರದೋರು ನಮ್ಮನ್ ಒಡ್ದೂ ಬಡ್ದೂ ನಮ್ ಮೈಯೊಳಗಿನ್ ಮೂಳೆಯಲ್ಲ ನಿಟಿನಿಟೀ ಅಂತಾ ಇದೆ ಕಣವ್ವ. ಅಷ್ಟುದೂರ ಇರೋ ನಿಮ್ ಅರಮನೆಗಂಟ ಎಂಗಮ್ಮ ನಡ್ಕಂಡು ಬಂದೇವು?

ಬಸವಣ್ಣ: ನಿಮ್ ಮೇಲೆ ಬಿದ್ದ ಏಟು ನಮ್ಮ ಮೇಲೂ ಬಿದ್ದಿದೆ. ಕೃಪೆ ಮಾಡಿ ಮೇಲೇಳಿ.

ನೀಲಾಂಬಿಕೆ. ರಾಚಪ್ಪ, ಬಸವಣ್ಣ ಮಂಟೇಸ್ವಾಮಿಯನ್ನು ಎತ್ತಿಕೊಳ್ಳುತ್ತಾರೆ. ಕಲ್ಯಾಣದ ದ್ವಾರದ ಕಡೆ ಕೊಂಡೊಯ್ಯುತ್ತಿರುವಂತೆ....

ನೀಲಗಾರ ೧: ಗುರುವೆ, ಗುರುಪಾದವೆ, ನಿಮ್ಮ ಒಕ್ಕಲಾದ ನಮ್‌ಗೇ ನಿಮ್ಮ ಗುರ್ತು ಸಿಕ್ನಿಲ್ವಲ್ಲ.

ನೀಲಗಾರ ೨: ನೀವು ಯಾವ ಯೇಸ್‌ದಲ್ಲಿದ್ರೂ ನಿಮ್ ಗುರ್ತಿಡಿಯತಕ್ಕಂತ ನೇತ್ರಗಳನ್ನ ನಮ್ಗೆ ಕೊಡಿ ಗುರುವೆ.

ಮಂಟೇಸ್ವಾಮಿ: ಅಪ್ಪಾ ನೀಲಗಾರ್‍ರು, ನಾವು ಯಾವಾಗ ಯಾವ ಯೇಸ ತಳೀತೀವಿ, ಯಾವ ರೂಪದಲ್ಲಿ ಬತ್ತೀವಿ, ನಮ್ಗೇ ಗೊತ್ತಿರಕ್ಕಿಲ್ಲ. ನಾವ್ ಓದ್‌ತಾವೆಲ್ಲ ನೀವ್ ಬನ್ನಿ. ನಾವ್ ಮಾಡದ್ನೆಲ್ಲ ನಿಗಾಮಡಗ್ ನೋಡ್ಕಂಡು ಆಡುಪದ ಕಟ್ಟಾಡಿ.

ನೀಲಗಾರರು ನಮಸ್ಕರಿಸುತ್ತಾರೆ. ಮಂಟೇಸ್ವಾಮಿ. ಬಸವಣ್ಣ ಇತರರು ನಿಷ್ಕ್ರಮಣ

ನೀಲಗಾರ ೧: ನಮ್ಮ ಗುರುಗಳಾದ ಭೂಮಿಗೆ ದೊಡ್ಡವರನ್ನ ಬಸವಣ್ಣೋರೂವೆ. ನೀಲಮ್ಮೋರೂವೆ ತಮ್ಮ ನಂದೀಮಟುಕ್ಕೆ ಕರ್ಕಂಡೋಗೌರೆ. ನಂದೀಮಟುಕ್ಕೆ ಕರ್ಕಂಡೋಗಿ ನಂದೀ ಮಂಚದ್ ಮೇಲೆ ಕುಂಡ್ರುಸೌರೆ. ದಂಪತಿಗಳಿಬ್ರು ಅಂಗೈಯೊಳಗೆ ಕರ್ಪೂರ ಅಚ್ಕಂಡು, ಜ್ಯೋತಿ ಬೆಳಗಿ ಗುರುಪೂಜೆ ಮಾಡವ್ರೆ. ಆವಾಗ ನೀಲಮ್ಮೋರು, 'ಗುರುವೇ ನಿಮ್ಮ ಅಸಲು ರೂಪವನ್ನ ತೋರ್ಸಿ' ಅಂತ ಕೇಳ್ಕಂಡಾಗ ನಮ್ಮ ಗುರುವು ಜ್ಯೋತಿ ಸ್ವರೂಪವಾಗಿ ಹೊಳೀತಾ ಕಂಡವ್ರೆ. ಆಗ ನೀಲಮ್ಮೋರು ಅವ್ರುರ್ಗೆ 'ಜ್ಯೋತಿಲಿಂಗಯ್ಯ: ಪರಂಜ್ಯೋತಿಲಿಂಗಯ್ಯ' ಅಂತ ನಾಮಕರಣ ಮಾಡವ್ರೆ.

ನೀಲಗಾರರು: ಮಂಟೇದ ಸ್ವಾಮಿ ಬನ್ನಿ
ಪರಂಜ್ಯೋತಿ ಗುರುಲಿಂಗಯ್ಯ ನೀವೆ ಬನ್ನಿ ॥

ನೀಲಗಾರ ೧: ಹಾದಿಮನೆ ಜ್ಯೋತಿ, ಬೀದಿಮನೆ ಜ್ಯೋತಿ, ಬಡವರ ಮನೆ ಜ್ಯೋತಿಯಾದಂತ ನಮ್ಮ ಪ್ಪಾಜಿಯವರು ಈಗ ತಿರುಗಿ ಬಸವಣ್ಣೋರ ನಂದೀಮಟದಿಂದ ಒಲ್ಟು ಕಲ್ಯಾಣದ್ವಾರದಿಂದ ಈಚೆ ಬತ್ತಾವ್ರೆ.

ನೀಲಗಾರರು: ಬೀದಿಪಕ್ಕ ಬಿದ್ದ ಮಾಣಿಕ್ಯ ಜ್ಯೋತಿಯೆ
ಓಂ ಗುರುವೆ । ಬೀದಿಮನೆಯ ಜ್ಯೋತಿಯೆ ॥
ಹಾದಿಪಕ್ಕ ಬಿದ್ದ ಆದಿಮೂಲದ ಜ್ಯೋತಿಯೆ
ಓಂ ಗುರುವೆ । ಹಾದಿಮನೆ ಜ್ಯೋತಿಯೆ ॥
ಸ್ವಾತಿ ಮುತ್ತಿನ ಅಂಗೆ ಥಳಥಳ ಬೆಳಗುವ
ಬಡವರ ಮನೆಯ ಜ್ಯೋತಿಯೆ
ಮಂಟೇದ ಸ್ವಾಮಿ ಬನ್ನಿ ॥

ಒಗೆದ ಬಟ್ಟೆ ತೊಟ್ಟು ಮಂಟೇಸ್ವಾಮಿ: ಬಸವಣ್ಣ. ನೀಲಾಂಬಿಕೆ. ರಾಚಪ್ಪ ಕಲ್ಯಾಣ ದ್ವಾರದಿಂದ ಪ್ರವೇಶ

ಮಂಟೇಸ್ವಾಮಿ: ಅಪ್ಪಾ ಬಸವಣ್ಣೋರೆ, ಅಮ್ಮ ನೀಲಮ್ಮೋರೆ. ನಾವಿನ್ನ ಜಂಗುಮ ರೂಪಾಗಿ ಮುಂದಕ್ಕೋಯ್ತೀವಿ. ನಾವ್ ಈವತ್ ಇಲ್ಲಿ, ನಾಳೀಕ್ ಇನ್ನೆಲ್ಲೋ. ಈಗ ದಂಪತಿಗಳಿಬ್ರೂವೆ ನಮಗೆ ಯಾವ ಬಿಕ್ಸಾ ಕೊಟ್ಟೀರಿ?

ಬಸವಣ್ಣ: ಈ ಜಂಗಮ ಜಗತ್ತೇ ನೀವು ಕೊಟ್ಟ ಭಿಕ್ಷೆಯಾಗಿರುವಾಗ ಯಾವ ಭಿಕ್ಷೆಯನ್ನು ತಾನೆ ಕೊಡಬಲ್ಲೆವು? ನಮ್ಮ ಈ ಕಲ್ಯಾಣವನ್ನೇ ನಿಮಗೆ ಒಪ್ಪಿಸೇವು. ಅದನ್ನೆ ದೊರೆಗಳಾಗಿ ಆಳಿ.

ಮಂಟೇಸ್ವಾಮಿ: ನೆಲೆ ಇಲ್ಲದ ನಮಗೆ ಧರೆಯನ್ನ ಯಾಕೆ ಕೊಟ್ಟೀರ? ನಿಮ್ಮ ಬಗಲಲ್ಲಿರೋ ಸಾಕುಮಗ ರಾಚಪ್ಪಾಜಿಯನ್ನೇ ಭಿಕ್ಷವಾಗಿ ಕೊಡಿ.

ನೀಲಾಂಬಿಕೆ: ಗುರುಗಳ ಜೊತೆ ಹೋಗುತ್ತೀಯ ಕಂದ?

ರಾಚಪ್ಪ ತಲೆ ಅಲ್ಲಾಡಿಸುತ್ತಾನೆ. ಬಸವಣ್ಣ ಹೋಗು ಅನ್ನುವಂತೆ ಸೂಚಿಸುತ್ತಾನೆ.

ರಾಚಪ್ಪ ನೀಲಾಂಬಿಕೆಯನ್ನೇ ನೋಡುತ್ತ ನಿಧಾನವಾಗಿ ಮಂಟೇಸ್ವಾಮಿ ಕಡೆಗೆ ಹೋಗುತ್ತಾನೆ.

ನೀಲಾಂಬಿಕೆ: ಗುರುಸ್ವಾಮಿಯೇ, ಈ ಮಗುವಿನ ತಂದೆಯಾದ ಕೊಡಲ ಸಂಗಮದೇವರು ಇವನನ್ನು ನಮಗೆ ದತ್ತು ಕೊಟ್ಟಾಗ ಒಂದು ವಾಗ್ದಾನ ಪಡೆದಿದ್ದರು. ಈಗ ಇವನ ದಾತರಾದ ನೀವೇ ಇದನ್ನು ನಡೆಸಿಕೊಡಬೇಕು.

ಮಂಟೇಸ್ವಾಮಿ: ಏನು ಮಗ ಆ ವಾಗ್ದಾನ?

ನೀಲಾಂಬಿಕೆ: ಇವನ ಲಗ್ನ ಕಾರ್ಯವನ್ನು ತಾವೇ ನಡೆಸಬೇಕು.

ಮಂಟೇಸ್ವಾಮಿ: ಸೂರ್ಯ ಪ್ರಕಾಸವಾಗಿರತಕ್ಕ ಈ ಮಗೀಗೆ ಚಂದ್ರ ಪ್ರಕಾಸವಾಗಿರತಕ್ಕ ಎಣ್ಣನ್ನ ತಂದು ಲಗ್ನ ಮಾಡ್ತೀವಿ. ಇವನ ಚಿಂತೆ ನಿಮಗೆ ಬ್ಯಾಡ. ಇವನ ಭಾರ ನಮಗಿರಲಿ.

ಬಸವಣ್ಣ: ತಮ್ಮಲ್ಲಿ ಇನ್ನೊಂದು ಪ್ರಾರ್ಥನೆ.

ಮಂಟೇಸ್ವಾಮಿ: ಅದ್ಯಾವುದಪ್ಪ ಬಸವಣ್ಣೋರೆ?

ಬಸವಣ್ಣ: ತಮ್ಮನ್ನು ಸರಿಯಾಗಿ ಅರಿತುಕೊಳ್ಳದೆ ನಮ್ಮ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಕಲ್ಯಾಣವನ್ನ ತ್ಯಜಿಸಿ ಹೋಗಿದ್ದಾರೆ. ಅವರಿಗೆ ಅರಿವನ್ನು ಕೊಟ್ಟು ನೀವೇ ಇಲ್ಲಿಗೆ ಕರೆಸಿಕೊಳ್ಳಬೇಕು.

ಮಂಟೇಸ್ವಾಮಿ: ಅಪ್ಪಾ ಬಸವಣ್ಣೋರೆ. ನಿಮ್ಮ ಜಂಗೂಮ್ರು ನಾವು ಮರೆವು ಕಿತ್‌ಕಳಕ್ ಮುಂಚೇನೇ ನಿಮ್ ರಾಜ್ಯ ಬಿಟ್ಹೋದ್ರು. ನಾವು ಅರಿವು ಕೊಡೋಕ್ ಮುಂಚೇನೇ ಅವ್ರಾಗೇ ಓಡಿ ಬತ್ತಾವ್ರೆ ನೀವೇ ನೋಡೀಪ್ಪ.

ರಂಗದ ಹಿಂದೆ ಗದ್ದಲ. ಜಂಗಮರು ವಾಪಸ್ಸು ಬರುತ್ತಾರೆ.

ಜಂಗಮ ೧: ಮಾಟ!

ಜಂಗಮ ೨: ಮಂತ್ರ!

ಜಂಗಮ ೩: ಯಕ್ಷಣೀ ವಿದ್ಯೆ!

ಜಂಗಮ ೧: ರೀ ಬಸವಣ್ಣೋರೆ. ನಿಮ್ ಪಕ್ಕ ನಿಂತಿದಾನಲ್ರೀ ಅವ್ನು. ತಿಪ್ಪೆ ಒಳಗ್

ಕೂತ್ಕಂಡಿದ್ದ. ಹೇಸುಕೂರೆ ಬಿದ್ದಿದ್ದಾನು. ಅವುನ್ಗ ಹೇಳಿ. ಅವನ ಮಲಯಾಳ-ಬಂಗಾಳ ಜಾದೂ ನಮ್ ಹತ್ರ ನಡಿಯಲ್ಲ ಅಂತ.

ಮಂಟೇಸ್ವಾಮಿ: ಅಪ್ಪಾ ಜಂಗಮ್ರುಗೊಳ. ಅಂಥ ಯಕ್ಸಿನೀ ಇದ್ಯವನ್ನ ನಾವೇನ್ ಮಾಡಿದೀವಪ್ಪ?

ಜಂಗಮ ೧: ಏ ಗಬ್ನಾತದವ್ನೆ. ನವ್ ಲಿಂಗಗಳನ್ನೇ ಮಂಗಮಾಯ ಮಾಡಿದ್ದೀಯಲ್ಲೋ.

ಮಂಟೇಸ್ವಾಮಿ: ನಿಮ್ ಲಿಂಗ್‌ಗೂಳು ನಮ್‌ತಾವ್ ಯಾಕಪ್ಪ ಬಂದಾವು? ನಾವು ಕಲ್ಯಾಣದ ಆಚೆ ಇದ್ದಾಗ ನೀವು ಒಳುಗಿದ್ರಿ. ನಾವ್ ಒಳೀಕ್ ಓದಾಗ ನೀವು ಆಚೆ ಬಂದ್ರಿ. ನೀವು ನಮ್ಮನ್ ಮುಟ್ಟಿಸ್ ಕಳ್ಳಿಲ್ಲ. ನಾವು ನಿಮ್ಮುನ್ ಮುಟ್ಟಿಸ್ಕಳ್ಳಿಲ್ಲ.

ಜಂಗಮ ೨: ಇವೆಲ್ಲ ಒಗಟಿನ್ ಮಾತಾಡ್ಬೇಡ. ರೀ ಬಸವಣ್ಣೋರೆ. ನೀವಾದ್ರೂ ಮರ್‍ಯಾದೆಯಿಂದ ನಮ್ಮ ಲಿಂಗಗಳನ್ನ ಕೊಡಿಸ್ರೀ.

ಮಂಟೇಸ್ವಾಮಿ: ಅಪ್ಪಾ ಜಂಗುಮೈಗುಳಾ. ಎಲ್ಲಾ ತಾವ್‌ಲೂ ನಿಮ್‌ಲಿಂಗ ಉಡುಕ್ ನೋಡ್ರಪ್ಪಾ. ನಿಮ್ಮಂಗೀಲಿದ್ದಾದು, ಅಂಗಿ ಜೇಬನಲ್ಲಿದ್ದಾದು. ಕಣ್ಣು-ಕಿವಿ-ಮೂಗೊಳ್‌ಗಿದ್ದಾದು. ಇಲ್ಲ ನಿಮ್ ಕಾಲ್‌ತಾವ ಎಲ್ಲೋ ಧರೆಮ್ಯಾಗ್ ಬಿದ್ದಿದ್ದಾದು. ಸರ್‍ಯಾಗ್ ಉಡುಕ್ ನೋಡ್ರಪ್ಪ.

ಜಂಗಮರು ಬಟ್ಟೆ. ಬರೆ. ನೆಲ. ಆ ಕಡೆ-ಈ ಕಡೆ ಲಿಂಗ ಹುಡುಕತೊಡಗುತ್ತಾರೆ.

ನೀಲಗಾರರು: ಜಂಗಮರು ಲಿಂಗವ ಹುಡುಕುತಾರೆ
ಮಂಗಮಾಯವಾದುದ ಹುಡುಕುತಾರೆ
ಗುಂಡಗಿತ್ತು ದುಂಡಗಿತ್ತು
ನುಣ್ಣಗಿತ್ತು ಬೆಣ್ಣೆಯಂಗೆ
ಎಂಗೆ ಓಯ್ತು ಎಲ್ಲಿ ಓಯ್ತು
ಇಲ್ಲಿ ಇತ್ತು ಅಲ್ಲಿ ಇತ್ತು
ಹುಡುಕು ಹುಡುಕು ಎಲ್ಲಿ ಬಿತ್ತು
ಬೇಗ ಬೇಗ ಮೇಲಕೆತ್ತು

ಮಂಟೇಸ್ವಾಮಿ: ನಿಮ್ ಲಿಂಗ್‌ಗೋಳು ಸಿಕ್ಕುದ್ವೇನ್ರಪ್ಪ ಜಂಗಮೈಗುಳಾ?

ಜಂಗಮ ೧: ರೀ ಬಸವಣ್ಣೋರೆ. ಹೇಳ್ರಿ ಅವುನ್ಗೆ. ನಾವು ಶಾಪ ಕೊಟ್ಟು ಅವನ ವಂಶಾನೇ ನಾಶ ಮಾಡಿಬಿಟ್ಟೇವು. ಮರ್‍ಯಾದೆಯಿಂದ ನಮ್ ಲಿಂಗ ಕೊಡುಸ್ರೀ.

ಮಂಟೇಸ್ವಾಮಿ: ಬಾಳ ಸಂತೋಸವಪ್ಪ ಜಂಗಮರ್‌ಗೂಳ.

ಜೋಳಿಗೆಯಿಂದ ಕಮಂಡಲವನ್ನು ಹೊರತೆಗೆದು

ಅಪ್ಪಾ ಬಸವಣ್ಣಾ. ಅಮ್ಮಾ ನೀಲಮ್ಮಾ. ಕಂದ ರಾಚಪ್ಪ ಇದೇನೇಳಿ?

ಮೂವರೂ: ತಮ್ಮ ಕಮಂಡಲು

ಮಂಟೇಸ್ವಾಮಿ: ಅಪ್ಪಾ ಜಂಗಮೈಗುಳೇ ಇದೇನೇಳಿ?

ಜಂಗಮರು: (ಕಣ್ಣುಮುಚ್ಚಿ) ಹೆಂಡದ್ ಕುಡ್ಕೆ.

ಮಂಟೇಸ್ವಾಮಿ: ಅಪ್ಪಾ ರಾಚಪ್ಪ. ತಕ. ಈ ವಸ್ತುವನ್ನ ತಕ್ಕಂಡೋಗಿ ಈ ರಂಗದ ಮಧ್ಯದಲ್ಲಿ ಮಡಗು. ಅಪ್ಪ ಜಂಗಮೈಗುಳಾ. ನೀವು ಯಾವುದನ್ನ ಸುರೀಗಡಿಗಿಯಾಗಿ ನೋಡಿದೀರಾ ಅದರೊಳಗೆ ನಿಮ್ಮ ಸಿವಲಿಂಗಗಳೆಲ್ಲ ಬಿದ್ದು ಒದ್ದಾಡ್ತಾ ಇವೆ. ಯಾರ‍್ಯಾರು ಲಿಂಗವಂತರಾಗ್ತಾರೋ ಅವರೆಲ್ಲ ಲಿಂಗಗಳನ್ನ ಎತ್ಕಳ್ರಪ್ಪ.

ನೀಲಗಾರರು: ಜಂಗಮರು ಲಿಂಗವ ಹುಡುಕುತಾರೆ
ಮಂಗಮಾಯವಾದುದ ಹುಡುಕುತಾರೆ
ಸುರೆ ಗಡಿಗೆ ಮುಟ್ಟದೆಂಗೆ ಅನ್ನುತಾರೆ
ಮುಟ್ಟದಿದ್ರೆ ಲಿಂಗವೆಲ್ಲಿ ಅನ್ನುತಾರೆ

ಅತ್ತ ಇತ್ತ ನೋಡುತಾರೆ
ಸುತ್ತ ಮುತ್ತ ತಿರುಗುತಾರೆ
ಯೋಚನೇನ ಮಾಡುತಾರೆ
ಗಡಿಗೆ ಕಡೆಗೆ ನಡೆಯುತಾರೆ
ಎದ್ರು ದೂರ ಸರಿಯುತಾರೆ
ಜಂಗಮರು ಲಿಂಗಕ್ಕೆ ತಡಕುತಾರೆ
ಮಂಗಮಾಯವಾದುದಕ್ಕೆ ಮರುಗುತಾರೆ

ಜಂಗಮರು ಹಾಡಿನಲ್ಲಿ ಸೂಚಿತವಾಗುವ ಕ್ರಿಯೆಗಳನ್ನು ಅಭಿನಯಿಸುತ್ತಾರೆ

ಜಂಗಮ ೧: ಏನ್ರೀ ಮಾಡೋದು?

ಜಂಗಮ ೨: ಹ್ಯಾಗ್ರೀ ಮಾಡೋದು?

ಜಂಗಮ ೩: ಅಲ್ ಮುಟ್ದೋ ಹಾಗಿಲ್ವಲ್ರೀ.

ಜಂಗಮ ೪: ಮುಟ್‌ದೇ ಇದ್ರೆ ಲಿಂಗ ಇಲ್ವಲ್ರೀ.

ಜಂಗಮ ೧: ನಾನೊಂದ್ ಏಳ್ಲಾ. ಒಂದು ಸಲ ಆ ಅದನ್ನ ಮುಟ್ಟಿ ಲಿಂಗ ತಗಂಬುಡಾನ.

ಜಂಗಮ ೨: ಅಯ್ಯೋ ನಿಮ್ ಬುದ್ಧೀಗೇನ್ರಿ ಬಂತು? ಅಲ್ಲಿ ಲಿಂಗ ಇತ್ತು ಅಂತಾನೇ

ಇಟ್ಕೊಳ್ರೀ. ಆ ಹೆಂಡದ ಪಾತ್ರೇಲಿ ಬಿದ್ದಿರೋ ಲಿಂಗಾನ ನಾವ್ ಅಂಗೈಲಿ ತಗೊಂಡು ಹ್ಯಾಗ್ರೀ ಪೂಜೆ ಮಾಡೋದು?

ಜಂಗಮ ೩: ಇನ್ನೊಂದುಪಾಯ. ಆ ಪಾತ್ರೇನ ಮುಟ್ಕೋದು ಬ್ಯಾಡ. ಅದರಲ್ಲಿರೋ ಲಿಂಗ ಕಟ್ಕೋದು ಬೇಡ. ಅದರೊಳಗಡೆ ಲಿಂಗ ಇದೆಯೋ ಇಲ್ವೋ ಅಂತ ಮೊದಲು ನೋಡಬೇಕು. (ಪಕ್ಕದ ಜಂಗಮನಿಗೆ) ಹೋಗ್ ನೋಡ್ರಿ.

ಜಂಗಮ ೪: ನೀವೇ ಹೋಗ್ ನೋಡ್ರಿ.

'ನೀವ್ ಹೋಗಿ'. 'ನೀವ್ ಹೋಗಿ' ಎಂದು ನಾಲ್ಕು ಜನರೂ ಕಾದಾಡುತ್ತಾರೆ. ಮೆಲ್ಲಗೆ ನಾಲ್ವರೂ ಕಮಂಡಲಿನ ಬಳಿ ಬಂದು ಬಗ್ಗಿ ನೋಡಿ

ಜಂಗಮರು: ಅ್ಹಂ? ಇದರೊಳಗೆ ಲಿಂಗಾನೂ ಇಲ್ಲ, ಮಣ್ಣೂ ಇಲ್ವಲ್ರೀ. (ಮಂಟೇಸ್ವಾಮಿಗೆ) ಲೋ ಮಲಯಾಳಿ ಜಾದೂಗಾರ, ನಮ್ಮುನ್ ಯಾಕೋ ಈ ಸುರೀಗಡಿಗೆ ಹತ್ರ ಬರೋ ಹಾಗೆ ಮಾಡ್ದೆ?

ಮಂಟೇಸ್ವಾಮಿ: ನಿಮಗೆ ಲಿಂಗ ತೋರ್ಸನಾಂತಪ್ಪ.

ಜಂಗಮ ೨: ಎಲ್ಲಿದ್ಯೋ ಇದರಲ್ಲಿ ಲಿಂಗ?

ಮಂಟೇಸ್ವಾಮಿ: ಕೈಯಿಕ್ಕಿ ನೋಡ್ರಪ್ಪ.

ಜಂಗಮರು ಮತ್ತೆ ಹಿಂದೆ ಮುಂದೆ ನೋಡುತ್ತಾರೆ. ಕೊನೆಗೆ ಧೈರ್ಯ ಮಾಡಿ ಅದರೊಳಗೆ ಕೈ ಇಡುತ್ತಾರೆ.

ಜಂಗಮ ೩: ಅಯ್ಯೊ ಪಾಪಿ, ನಮ್ಮ ಕೈಗೆ ಅದುನ್ ಮುಟ್ಟುಸ್ ಬಿಟ್ಟಲ್ಲೋ?

ಜಂಗಮ ೪: ವ್ರತ ಕೆಟ್ಟರೂ ಸುಖ ಸಿಗಲಿಲ್ವಲ್ಲೋ, ಎಲ್ಲೋ ನಮ್ ಲಿಂಗ?

ಮಂಟೇಸ್ವಾಮಿ: ಅಪ್ಪ, ನಿಮ್ ಸುಳ್‌ಲಿಂಗವನ್ನು ನಾವು ಮಾಯಾ ಮಾಡಿದೀವಿ. ಮಾಯಮಾಡಿ, ನಿಜವಾದ ಲಿಂಗವನ್ನು ಇದರೊಳಗ್ ತುಂಬಿದೀವಿ. ನಿಮ್ ತಾವ್ ಇದ್ದಿದ್ದು ಉಳಿಮುಟ್ಟಿದ್ ಲಿಂಗ. ನಿಮುಗ್ ನಾವ್ ಕೊಟ್ಟಿರದು ಉಳಿಮುಟ್ಟದ ಲಿಂಗ. ಅದನ್ನ ಇಡಕಂಡು ಐಕ್ಯವಾಗಿ.

ಜಂಗಮ ೧: ಉಳಿ ಮುಟ್ಟದ್ ಲಿಂಗ?

ಜಂಗಮ ೨: ಕೈಯಿಗೆ ಸಿಗದ್ ಲಿಂಗ?

ಜಂಗಮ ೩: ಕಣ್ಣಿಗೆ ಕಾಣದ್ ಲಿಂಗ?

ಜಂಗಮ ೪: ಎಲ್ಲೋಯ್ತೊ ನಮ್ ಲಿಂಗ?

ಎಲ್ಲರೂ ಮಂಟೇಸ್ವಾಮಿಯ ಕಡೆ ತಿರುಗಿ ಹುಚ್ಚರಂತೆ 'ಮಾಟಗಾರ'. 'ಮಂತ್ರಗಾರ' ಎಂದು ಕೂಗುತ್ತ ಹತ್ತಿರ ಹೋಗಿ 'ಥೂ! ಥೂ!' ಎಂದು ಉಗಿಯುತ್ತಾರೆ. ಬಸವಣ್ಣ ಅಡ್ಡ ಬಂದಾಗ ಉಗುಳು ಅವನಿಗೆ ಬೀಳುತ್ತದೆ. ಸಿಟ್ಟಿನಿಂದ ಜಂಗಮರು ನಿಷ್ಕ್ರಮಣ

ಬಸವಣ್ಣ: ಅವರು ನಿಮಗೆ ಉಗಿದ ಉಗಿತ ನಮಗೆ ಬಿದ್ದಿತು.

ಮಂಟೇಸ್ವಾಮಿ: ಅಪ್ಪಾ ಬಸವಣ್ಣೋರೆ. ಈ ಉಳಿ ಮುಟ್ಟದ ಲಿಂಗವನ್ನ ಕಂಡ್‌ಕಳಕೋಸ್ಕರ ನಾವು ಏಸ್ಟೋ ಕೋಟಿ ವರ್ಸ ಏಲು. ಉಚ್ಚೆ. ಉಗುಳಿನ ಪರ್ವತಗಳಲ್ಲಿ ನಿಂತ್ಕಂಡು ಸಿವದ್ಯಾನವನ್ನ ಮಾಡಿದ್ದೀವಿ ಕಣಪ್ಪ. ಇವ್ರು ಉಗ್ತ ನಮಗೆ ಇನ್ಯಾವ ಮೂಲೆಗೆ? ಸಂದಾಗಿ ಗೆಪ್ತಿ ಮಡೀಕ್ಕಳಿ ಬಸವಣ್ಣೋರೆ. ನೀವು ಕಟ್ಟಿದ ಕಲ್ಯಾಣ ಕರಗೋಯ್ತದೆ. ಮಾಮನೆ ಮಣ್ಣಾಯ್ತದೆ. ನೀವಿನ್ನ ಕಲಿ ಬತ್ತಾಇರ್‌ವಾಗ ಉಳಿಮುಟ್ಟಿದ ಲಿಂಗವನ್ನ ಬಿಟ್ಟು. ಉಳಿ ಮುಟ್ಟದ ಲಿಂಗವನ್ನ ಇಡ್ಕಂಡು ಐಕ್ಯವಾಗೋಗಿ. ನಾವಿನ್ನ ಹೊರಡ್‌ತೀವಿ.

ಬಸವಣ್ಣ. ನೀಲಾಂಬಿಕೆ ನಮಸ್ಕರಿಸುತ್ತಾರೆ

ನೀಲಗಾರರು: ನಿಮ್ಮ ಕಲ್ಯಾಣ ಕರಗಿ ಓಯ್ತದೇ
ನಿಮ್ಮ ಮಾಮನೆ ಮಣ್ಣು ಪಾಲಾಯ್ತದೇ
ಉಳಿ ಮುಟ್ಟಿದ ಲಿಂಗವ ಕಡಿದುಕೊಳ್ರಯ್ಯ
ಉಳಿ ಮುಟ್ಟದ ಲಿಂಗವ ನೀವಿಡಿದುಕೊಳ್ರಯ್ಯ

ಮಂಟೇಸ್ವಾಮಿ ಮುಂದಕ್ಕೆ ಹೋಗುತ್ತಿದ್ದಂತೆ ರಾಚಪ್ಪ ಹಿಂದೆ ಹಿಂದೆ ತಿರುಗಿ ನೋಡುತ್ತಿರುತ್ತಾನೆ. ಅಷ್ಟರಲ್ಲಿ ಇನ್ನೊಬ್ಬ ಹುಡುಗ. ಬಾಚಿ ಭಸವಯ್ಯ. ಓಡಿ ಬರುತ್ತಾನೆ.

ಬಾಚಿ ಬಸವಯ್ಯ: ಎಲ್ಲಿಗೊಂಟೋ ರಾಚ?

ರಾಚಪ್ಪ ಮಂಟೇಸ್ವಾಮಿ ಕೈಬಿಡಿಸಿಕೊಂಡು ಓಡಿಬರುತ್ತಾನೆ.

ರಾಚಪ್ಪ: ಸ್ವಾಮಿ. ನಾನೂ ಇವ್ನೂ ಹಗಲೆನ್ನದೆ, ರಾತ್ರಿ ಎನ್ನದೆ ಗೋಲಿ-ಗಜ್ಜುಗ ಆಡ್ಕಂಡಿದ್ದೋರು, ಒಟ್‌ಗೆ ಓದ್‌ಕಂಡು, ಓದ್‌ಕಡೆ ಒಟ್ಟಿಗೆ ಉಂಡ್ಕಂಡು. ಒಟ್ಟಿಗೆ ಮನಗ್‌ತಿದ್ದೋರು. ನನ್ನ ಸಿಸು ಮಗನ್ನಾಗಿ ಮಾಡಿಕಂಡಂಗೆ ಇವನ್ನೂ ಮಾಡ್ಕಳಿ ಗುರುವೇ.

ಮಂಟೇಸ್ವಾಮಿ ಬಾಚಿ ಬಸವಯ್ಯನನ್ನು ಹತ್ತಿರದಿಂದ ನೋಡುತ್ತಾನೆ.

ಮಂಟೇಸ್ವಾಮಿ: ಅಪ್ಪಾ ಬಸವಯ್ಯ, ಈ ಜನ್ಮದಲ್ಲಿ ನೀನು ಬಾಚಿ ಕಾಯಕ ಮಾಡ್ಕಂಡು ಈ ಕಲ್ಯಾಣದ ಬಾಕ್ಲು ಕಾಯ್ಕಂಡಿರಪ್ಪ. ಇದು ನಿನ್ನ ಆರನೇ ಜನ್ಮ.

ಹಿಂದಿನ ಐದು ಜನ್ಮಗಳಲ್ಲಿ ಬೇರೆ ಬೇರೆ ಲೋಕಗಳಲ್ಲಿ ನಮಗೋಸ್ಕರ ಬಾಕಲ್ ಕಾಯ್ಕಂಡಿದ್ದೆ ಕನಪ್ಪ. ಇನ್ನು ನಿನ್ನ ಏಳನೇ ಜನ್ಮದಲ್ಲಿ ನಾವೇ ಬಂದು ನಿಮ್ ಮನೆ ಬಾಗ್ಲು ಕಾಯ್ತೀವಿಕನಪ್ಪ. ನಿಮ್ಮಪ್ಪ ಅವ್‌ನಿಂದ ನಿನ್ನ ಬಿಕ್ಷಾ ತಗಂಡು ನಮ್ಮ ಸಿಸು ಮಗನನ್ನಾಗಿ ಮಾಡ್ಕಂಡು ನಮ್ ಬಿರುದುಗಳ್ನೆಲ್ಲಾ ನಿನುಗ್ ಕೊಟ್ಟು ನಮ್ಮ ಮಟ್ಟಿಕ್ ಸಮಾನರಾದ ಗುರುವನ್ನಾಗಿ ಮಾಡ್ಕತೀವಪ್ಪ. ಆವಾಗ್ ನಮ್ ಜತೀಗ್ ಬಂದೀಯ ಕಂದ?

ಬಾಚಿ ಬಸವಯ್ಯ ತಲೆ ಅಲ್ಲಾಡಿಸುತ್ತಾನೆ

ಮಂಟೇಸ್ವಾಮಿ: ಧನ, ಧಾನ್ಯ, ಸಂಪತ್ತು ಎಲ್ಲಾ ಬುಟ್ ಬಂದೀಯ ಕಂದ?

ಬಾಚಿ ಬಸವಯ್ಯ ತಲೆ ಹಾಕುತ್ತಾನೆ.

ಮಂಟೇಸ್ವಾಮಿ: ಈಗ 'ಉ' ಅಂದು, ಆಮೇಲೆ 'ಊಹುಂ' ಅನಬೇಡ ನನಕಂದ.

ಬಾಚಿ ಬಸವಯ್ಯ: ಇಲ್ಲ, ಸ್ವಾಮ್‌ಗೋಳೆ.

ರಾಚಪ್ಪ, ಬಾಚಿ ಬಸವಯ್ಯನನ್ನೇ ನೋಡುತ್ತ ಮಂಟೇಸ್ವಾಮಿ ಜತೆಗೆ ನಿಷ್ಕ್ರಮಣ

ನೀಲಗಾರ ೧: ಈ ಪ್ರಕಾರವಾಗಿ ನಮ್ಮ ಸ್ವಾಮಿಯವರು ಕಲ್ಯಾಣ ಪಟ್ಟಣದ ಕಲ್ಲು ಮುಳ್ಳುಗಳಿಗೆಲ್ಲ ಕಣ್ಣು ಬರೊವಂಥ ಪವಾಡವನ್ನ ಮಾಡಿ, ಮುಂದಕ್ಕೆ ಎಲ್ಲಿಗೆ ಬಂದೌರಪ್ಪ ಅಂದ್ರೆ, ಇಜ್ಜೈನಗರಕ್ ಬಂದವ್ರೆ.

ನೀಲಗಾರರು: ವಜ್ಜ್ಜೂರ ಪೆಟ್ಟಿಗೆ ಬೀಗ ಮುದ್ರೆಯೊಡೆದು
ಪ್ರಜ್ವಲಿಸಿತೊ ಈ ನಗರ
ಎಸರು ಇಜೆಯನಗರ. ।
ಪಚ್ಚೆಯ ಕಲ್ಲಿನ ಗಿಡಗಿಡದಿಂದಲಿ
ಗೊಂಚಲು ಹವಳ ಹೂಹಣ್ಣು
ಎಸರು ಇಜೆಯನಗರ. ।
ಕಲಕಲ ನೀಲಿ ಹರಳಿನ ನದಿಗೆ
ಚಿನ್ನದ ಮರಳಿನ ದಂಡೆ
ಎಸರು ಇಜೆಯನಗರ ।

ಗೋಪುರ ಕಳಸವ ಎತ್ತರ ಏನೆಂಬೆ
ಭಾಪುರೆ ಗಂಟೆಯ ಮೊಳಗು
ಎಸರು ಇಜೆಯನಗರ. ।
ಆಗಲುಗನಸಿನಿಂದ ತೊಗಲು ಗೊಂಬೆ ಮಾಡಿ
ಜೀವವ ತುಂಬಿದ ಜನರ
ಎಸರು ಇಜೆಯನಗರ. ।

ನೀಲಗಾರ ೧: ಇಂತ ವಜ್ರ ವೈಡೂರ್ಯಗಳಿಂದ, ಸಂಪತ್ತು ಸೌಭಾಗ್ಯಗಳಿಂದ ತುಂಬಿ ತುಳುಕುತ್ತಿರತಕ್ಕಂತ ಇಜಯನಗರವೆಂಬ ಇಸಾಲನಗರಕ್ಕೆ ಧರೆಗೆ ದೊಡ್ಡೋರು ಕಿಡಿಗಣ್ಣ ರಾಚಪ್ಪನ್ನ ಕರಕಂಡು ಬಂದೌರೆ.

ಮಂಟೇಸ್ವಾಮಿ. ರಾಚಪ್ಪ ಪ್ರವೇಶ. ಮಂಟೇಸ್ವಾಮಿ ಒಂದು ಮೂಲೆಯಲ್ಲಿ ಕುಂತು ಭಂಗಿ ಹಚ್ಚಿಕೊಳ್ಳತೊಡಗುತ್ತಾನೆ.

ರಾಚಪ್ಪ: ಸ್ವಾಮ್‌ಗುಳೇ, ಈ ಊರು ಅದೇನ್ ಸಂದಾಗಿದ್ದುದೂ ಅಂತೀನಿ.

ಮಂಟೇಸ್ವಾಮಿ ಹೊಗೆ ಬಿಡುತ್ತಾನೆ. ಹೊಗೆಯನ್ನು ಉರುವತೊಡಗುತ್ತಾನೆ.

ರಾಚಪ್ಪ: ಈ ಊರು ಅದೇನ್ ಸಂದಾಗಿದ್ದಾದೂ ಅಂತೀನಿ.
ಮಂಟೇಸ್ವಾಮಿ: ಇನ್ನೊಂದು ಕಿತ ಆ ಊರ್ ನೋಡೀಯ ಕಂದ?
ರಾಚಪ್ಪ: ಊಕಣ್ ಸ್ವಾಮ್‌ಗುಳೇ, ನೀವ್ ನಂಗೇನೂ ನೋಡಾಕ್ ಬಿಡ್ಲಿಲ್ಲ. ಸರ್‌ರ್‌ರ್ ಅಂತ ಎಳ್ಕಂಬಂದ್‌ಬಿಟ್ರಿ, ಈ ಕಪ್ಪ ಕಟ್ಟಿರೋ ಆಳ್ ಮಂಟಪಕ್ಕೆ.
ಮಂಟೇಸ್ವಾಮಿ: ಮಗ ರಾಚಪ್ಪಾಜಿ, ನೀನು ಇನ್ನೊಂದ್ಕಿತ ಓಗಿ ಈ ಊರುನ್ನ ಕಣ್ತುಂಬಾ ನೋಡ್ಕಂಬಾರಪ್ಪಾ.
ರಾಚಪ್ಪ: ಮತ್ತೀಗಾ, ಒಟ್ಟೆ ತುಂಬ ಅಸ್‌ವಾಗ್ತಾ ಇದೆ, ತಿಂಡೀನೂ ತಿನ್ನಬತ್ತೀನಿ.
ಮಂಟೇಸ್ವಾಮಿ: ಏನ್ ತಿನ್ನಬತ್ತೀಯ ನನ್‌ಕಂದ?
ರಾಚಪ್ಪ: ಬತ್ತಾಸು, ಸಕ್ರೆ ಮಿಟಾಯಿ, ಈಟೀಟ್ ದಪ್ಪ ಮಾವ್ನಣ್ಣು ಇನ್ನೂ ಏನೇನೋ, ಎಸ್ರು ಏಳಾಕ್ ಬರಾಕಿಲ್ಲ ನಂಗೆ. ಅವೆಲ್ಲ ಒಂದೊಂದ್ ತಿನ್ಕಂಡು, ನಿಮ್ಗೂ ಒಂದೊಂದ್ ತಕಬತ್ತೀನಿ.
ಮಂಟೇಸ್ವಾಮಿ: ಓಗಪ್ಪಾ ಮಗ, ಬಾಯ್ತುಂಬಾ ತಿನ್ಕಂಡು ಕೈ ತುಂಬಾ ತಕಬಾ ಓಗಪ್ಪ, ನೀನ್ ಬರೊತ್ತಿಗೆ ನಾವಿಲ್ಲೇ ಈ ಗೊಂಡಾರಣ್ಯಕ್ ಓಗಿ ವಸಿ ಬಿಕ್ಸಾತಂದು ಮಡಗಿರ್ತೀವಿ. ಒತ್ ಮುಣ್‌ಗಾಕ್ ಮುಂಚೆ ಬಂದ್ಬುಡು.

ಕುಮರೆ ಪತ್ರಿವಂತೆ ಅಭಿನಯಿಸುತ್ತ ರಾಚಪ್ಪ ನಿಷ್ಕ್ರಮಣ

ನೀಲಗಾರ ೧: ಆವತ್ತು ಸುಕ್ರುವಾರ, ಇಜಯನಗರದೊಳಗೆ ದೊಡ್ಡ ಸಂತೆ.

ನೀಲಗಾರರು ಸಂತೆಯ ಮಾರಾಟಗಾರರಾಗುತ್ತ

ನೀಲಗಾರ ೧: ಪುರಿ ಉಂಡೆ, ಆಣೆಗೆ ಮೂರು, ಆಣೆಗೆ ಮೂರು.
ನೀಲಗಾರ ೨: ಸಕ್ರೆ ಮಿಠಾಯಿ, ಸಕ್ರೆ ಮಿಠಾಯಿ, ಕಾಸ್‌ಗೊಂದು, ಕಾಸ್‌ಗೊಂದು.
ನೀಲಗಾರ ೩: ಕಳ್ಳೆಪುರಿ, ಕಳ್ಳೆಪುರಿ, ಮೂರ್‌ಕಾಸ್ ಗೊಂದ್ಸೇರು.
ನೀಲಗಾರ ೪: ಕಳ್ಳೇಬೀಜ, ಗರ್ಮಾಗರಂ, ಗರ್ಮಾಗರಂ, ಆಣೇಗೊಂದ್ ಚಟಾಕು.
ನೀಲಗಾರ ೧: ಕಲ್ಲಂಗ್ರೀ, ಕಲ್ಲಂಗ್ರೀ. ರೀ ಸ್ವಾಮಿ ಬರ್‍ರೀ ಎಂಗದೆ ನೋಡ್ರಿ, ರಕ್ತ, ರಕ್ತ ಇದ್ದಂಗದೆ ನೋಡ್ರೀ.
ನೀಲಗಾರ ೨: ದ್ರಾಕ್ಷಿ, ಕಾಬೂಲ್, ಕಾಬೂಲ್ ನಮ್ದೂಕೆ ಅಣ್ಣು ಕಾಬೂಲ್ದೂ ಸ್ವಾಮಿ.
ನೀಲಗಾರ ೧: ಬತ್ತಾಸು, ಕೆಂಪು ಹಳದಿ ನೀಲಿ ಬಿಳಿ ಬಣ್ಣ ಬಣ್ಣದ್ದು ಬೆಂಡು ಬತ್ತಾಸು.

ರಾಚಪ್ಪ ಪ್ರವೇಶ

ರಾಚಪ್ಪ: ಅಣ್ಣಾ, ಅಣ್ಣಾ, ಬತ್ತಾಸ್ ಕೊಡು. ಒಂದ್ ನಂಗೆ. ಒಂದು ನಮ್ ಸ್ವಾಮ್‌ಗುಳ್ಗೆ.
ನೀಲಗಾರ ೧: ಕಾಸೆತ್ತು.
ರಾಚಪ್ಪ: ನನ್ ತಾವ ಕಾಸಿಲ್ಲ.
ನೀಲಗಾರ ೧: ನನ್ ತಾವ ಬತ್ತಾಸಿಲ್ಲ.
ರಾಚಪ್ಪ: (ಜೋಳಿಗೆಯಿಂದ ಏನೋ ತೆಗೆದು) ಅಣ್ಣಾ, ಅಣ್ಣಾ, ನೋಡು ಸಮುದ್ರದ್ ತಾವಿಂದ ಏಟೊಂದ್ ಕಪ್ಪೆ ಚಿಪ್ಪು ಆಯ್ಕಂದ್ ತಕಂಬಂದಿದೀನಿ. ಇದುಕ್ ಬತ್ತಾಸ್ ಕೊಟ್ಟೀಯ?
ನೀಲಗಾರ ೧: ಕಪ್ಪೆ ಚಿಪ್ನ ತಿನ್ನ.. ನಡಿಯೋ ಇಲ್ಲಿಂದ.
ರಾಚಪ್ಪ: ಅಣ್ಣಾ, ಅಣ್ಣಾ. ಒಂದ್ ಮಾವ್‌ನಣ್ಣು ತತ್ತಾ.
ನೀಲಗಾರ ೪: ಎಂಟಾಣೆ ಬಂದ ತತ್ತಾ.
ರಾಚಪ್ಪ: ಅಣ್ಣಾ, ನನ್‌ತಾವ್ ಕಾಸಿಲ್ಲ ಕಣಣ್ಣಾ.
ನೀಲಗಾರ ೪: ಮುತ್ತು-ರತ್ನ ಮಡ್ಗಿದೀಯ?
ರಾಚಪ್ಪ: ನೋಡು ಈ ಕಲ್ಲು. ಇದು ಆ ಪರ್ವತದ್‌ತಾವ ಹೊಳೆ ದಂಡೇಲಿತ್ತು. ನುಣ್-ನುಣ್‌ಗದೇ, ಆಯ್ಕಂಬಂದಿದೀನಿ.

ನೀಲಗಾರ ೩: ಅದನ್ನೇ ಅಗ್‌ಕಂಡ್ ತಿನ್ನ ಓಗು.
ರಾಚಪ್ಪ: ಅಣ್ಣಾ. ಅಣ್ಣೆಲ್ದೇ ಇದ್ರೆ ಪಾಟೇನಾರಾ ಕೊಡಣ್ಣ.
ನೀಲಗಾರ ೪: ಪಾಟೇನೂ ಇಲ್ಲ. ಗೀಟೇನೂ ಇಲ್ಲ ಓಗೋ.

ರಾಚಪ್ಪ ಇನ್ನಿಬ್ಬರ ಬಳಿ ಹೋಗಿ ಕೈಯೊಡ್ಡುತ್ತಾನೆ. ಅವರೂ ಇಲ್ಲವೆಂಬಂತೆ ಅಭಿನಯಿಸುತ್ತಾರೆ.

ರಾಚಪ್ಪ: ಅಪ್ಪ. ನನ್ ತಾವ ಇರ ಕಲ್ಲು. ಕಪ್ಪೆ ಚಿಪ್ಪು. ಬಣ್ಣ ಬಣ್ಣದ ಬಳೆ ಚೂರು. ಬಣ್ ಬಣ್ಣದ್ ಗಾಜಿನ ಚೂರು. ಇಗೋ ನವಿಲ್‌ಗರಿ. ಕಾಗೆ ಬಂಗಾರ ಅದೂ ತೆಗುದ್ ಕೊಡ್ತೀನಿ. ನೀವು ನಿಮ್ ತಾವಿರ ಒಂದೊಂದ್ ಸಾಮಾನ್ ನನುಗ್ ಎತ್‌ಕೊಟ್‌ಬಿಡಿ.

ಅವರು ನೋಡದೆ ವ್ಯಾಪಾರದಲ್ಲಿ ತೊಡಗಿರುವುದನ್ನು ಅಭಿನಯಿಸುತ್ತಾರೆ.

ರಾಚಪ್ಪ: ಕೊಡ್ತೀರಾ? ಇಲ್ವಾ?

ಯಾರು ಗಮನಿಸುವುದಿಲ್ಲ

ರಾಚಪ್ಪ: ಮಾಡ್ತೀನಿ ಇರಿ ನಿಮ್ಗೆ.
ನೀಲಗಾರ ೧: ಈ ಪ್ರಕಾರವಾಗಿ ಸಿಸು ಮಗನಾದ ರಾಚಪ್ಪಾಜಿ ಸಂತೆಗೋಗಿ ಅದೂ ಇದೂ ಕೇಳಿ ಇಲ್ಲ ಅನ್ನುಸ್ಕಂಡು ಸಿಟ್ಟೆದ್ದು ಕಲ್ಲೆಸ್ದು ಫಜೀತಿ ಮಾಡಿ. ಒಟ್ಟೆ ಅಸ್ದು. ಗಂಟಲೊಣಗಿ ಇಜಯನಗರದ ಬೀದಿಬೀದಿಯಲ್ಲಿ ಬಿಕ್ಸಾ ಬೇಡ್ತಾನೆ.
ನೀಲಗಾರರು: ಊರನೆಲ್ಲ ತಿರುಗುತ್ತಾನೆ
ನೀಡಿ ಕೈಗಳ ಬೇಡುತ್ತಾನೆ
ಅಣ್ಣ-ಅಕ್ಕ ಅನ್ನುತಾನೆ
'ಅನ್ನ-ನೀಡಿ' ಬೇಡುತಾನೆ
ಜೋಳಿಗೇಯ ಒಡ್ಡುತಾನೆ
ಜೋಳರಾಗಿ ಬೇಡುತಾನೆ
ಕಂಡವರ ಹಿಂದೆ ಬಿದ್ದು
ಭಂಡನಂಗೆ ಬೇಡುತಾನೆ

ರಾಚಪ್ಪ ರಂಗದ ಮೇಲೆ ಭಿಕ್ಷೆ ಬೇಡುವುದನ್ನು ಅಭಿನಯಿಸುತ್ತಾನೆ

ನೀಲಗಾರ ೧: ತಂದೆ. ಗುರುವೆ: ಗುರುಸ್ವಾಮಿಯೆ. ಇಂತೀ ಐಶ್ವರ್ಯಗಳಿಂದ ತುಂಬಿತುಳುಕ್ತಾ ಇರತಕ್ಕಂತ ನಗರದಲ್ಲಿ ಒಂದು ತುತ್ತು ಅನ್ನ.

ಒಂದು ಚೂರು ರೊಟ್ಟಿ. ಒಂದು ಗುಕ್ಕು ನೀರು. ಒಂದು ಬಿಡಿಕಾಸು. ಪುಡಿಕಾಸು. ಸವಕಲುಕಾಸು ಬಿಕ್ಸಾ ಸಿಗ್ಲಿಲ್ವಲ್ಲಪ್ಪ ಅಂತ ಚಿಂತೆ ಮಾಡ್ತಾ ನಿಂತಿರೂವಾಗ.

ಗೋಲಿಯಾಡುತ್ತ ಹುಡುಗರ ಪ್ರವೇಶ

ನೀಲಗಾರರು: ಆಡಾನ ಬನ್ನಿ ಗೋಲಿ ಆಟ
ಓಡೋಡಿ ಬನ್ನಿ ನಲಿಯುತ
ರಾಮು. ಬೀಮು. ಸೋಮು. ಚೋಮು
ಆಡಾನ ಬನ್ನಿ ಗೋಲಿ ಆಟ
ರನ್ನದಗೋಲಿ ನನ್‌ತಾವ
ಮುತ್ತಿನಗೋಲಿ ನಿನ್‌ತಾವ
ಪಚ್ಚೆಯಗೋಲಿ. ಅವಳಾದ ಗೋಲಿ
ತಕ್ಕಂಡು ಆಡಾನ ಗೋಲಿಯಾಟ.

ರಾಚಪ್ಪ ಹುಡುಗರ ಹಿಂದೆ ಹಿಂದೆ ಹೋಗುತ್ತಾನೆ

ರಾಚಪ್ಪ: ಲೇ ಹೈಕ್ಳಾ. ನಾನೂ ಸೇರ್ಕತೀನಿ ಗೋಲಿ ಆಟಕ್ಕೆ.
ಹುಡುಗ ೧: ಇವನ್ಯಾವನೋ ಬಂದ್ನಲ್ಲಪ್ಪ ಕೆಟ್ಟ ಮೋರೇನು.
ಹುಡುಗ ೨: ಊ ಕನ. ತೊಡಕ್ ನೆಟ್ಟಗ್ ಬಟ್ಟೆಯಿಲ್ಲ. ನೆತ್ತಿಗೆ ವಸಿ ಎಣ್ಣೆಲ್ಲ. ಆಟ ಆಡ್ತೀಯ ಪರದೇಸಿ ಆಟವಾ?
ರಾಚಪ್ಪ: ನಿಮ್ಗಿಂತ ಚೆಂದಾಗ್ ಆಡೀನ್ ಕಯ್ಯೋ. ಕಲ್ಯಾಣ ಪಟ್ನದಾಗೆ ಗೋಲಿ ಗೆಜ್ಜಗಾನೆಲ್ಲ ನಾನೇ ಗೆದ್‌ಗತಿದ್ದೆ.
ಹುಡುಗ ೧: ಏನ್ರಲಾ. ಈ ಪಾಪಿ ಪರದೇಸಿ ನಮ್ಮುನ್ನೇ ಗೆಲ್ತಾನಂತಲ್ಲ.
ಹುಡುಗ ೨: ಆಟಕ್ಕೆ ಸೇರುಸ್ಕಂಡು ನೋಡೇ ಬಿಡವಕನs. ನಾವ್ ಗೆಲ್ತೀವ್ರೋ ಅವ್‌ನ್ ಗೆಲ್ತಾನೋಂತ.
ಹುಡುಗ ೩: ಬಡಾಯಿ ಕೊಚ್‌ಕೊಂಡಲ್ರೋ ಪರದೇಸಿ. ಅದೆಂಗಾಡೀಯ ಆಡು ನೋಡಾವ.
ಹುಡುಗ ೧: ಅದೆಂಥಾ ಗೋಲಿ ಮಡಗಿದ್ದೀಯಲಾ? ಚಿನ್ನದ್ದೋ. ರತ್ನದ್ದೊ. ಮುತ್ತಿಂದೋ. ಅವಳದ್ದೋ?
ರಾಚಪ್ಪ: ಅದೆಂತದಲಾ ಅದು? ಚಿನ್ನ. ರನ್ನ, ಮುತ್ತು. ಅವಳ ಎಲ್ಲ ಹೆಣ್ಮಕ್ಳು ವಡವೇಗೆ. ಗಂಡ್ಮಕ್ಳ ಆಟಕ್ಕಲ್ಲ.
ಹುಡುಗ ೧: ಚಿನ್ನ. ಬೆಳ್ಳಿ ನೀನೆಲ್ಲಿ ಕಂಡೀಯಾ ಪರದೇಸಿ? ಎಂಗಾಡಿಯ ನಮ್ ಜೊತೇಲಿ ಗೋಲಿ ಆಟವ?

ರಾಚಪ್ಪ: ನನ್ ಜೋಳಿಗೆ ಒಳಗೆ ನಮ್ ಗುರುಗೋಳು ಮಂತ್ರಿಸಿದ ಕಲ್ಲೊಂದೈತೆ. ಅದ್ರಾಗೆ ಆಡ್ತೀನಿ ಕಯ್ಯೋ.

ಹುಡುಗ ೧: ಬಾ ನೋಡೇ ಬಿಡಾವ ಒಂದು ಕೈಯ.

ನೀಲಗಾರರು: ಆಡೋಣ ಬನ್ನಿರೊ ಗೋಲಿ ಆಟ
ಬನ್ನಿ ಬನ್ನಿ ನಲಿಯುೂತ ।

ಹಾಡುತ್ತಿರುವಾಗ ಆಟ ನಡೆಯುವುದು. ರಾಚಪ್ಪ ಹುಡುಗರ ಗೋಲಿಗಳನ್ನು ಒಂದೊಂದಾಗಿ ಗೆದ್ದುಕೊಳ್ಳುತ್ತಾನ

ಹುಡುಗ ೧: (ಕಳೆದುಕೊಂಡವನಂತೆ) ನನ್ ಮುತ್ತಿನ ಗೋಲಿ.

ನೀಲಗಾರರು: ಆಡೋಣ ಬನ್ನಿರೋ ಗೋಲಿಯಾಟ
ಬನ್ನಿ ಬನ್ನಿ ನಲಿಯುೂತ ।

ಹುಡುಗ ೨: (ಕಳೆದುಕೊಂಡವನಂತೆ) ನನ್ನ ಹವಳದ ಗೋಲಿ.

ನೀಲಗಾರರು: ಆಡೋಣ ಬನ್ನಿರೋ ಗೋಲಿಯಾಟ
ಬನ್ನಿ ಬನ್ನಿ ನಲಿಯುೂತ ।

ಹುಡುಗ ೩: (ಕಳೆದುಕೊಂಡವನಂತೆ) ನನ್ನ ರತ್ನದ ಗೋಲಿ.

ನೀಲಗಾರರು: ಆಡೋಣ ಬನ್ನಿರೋ ಗೋಲಿಯಾಟ
ಬನ್ನಿ ಬನ್ನಿ ನಲಿಯುೂತ ।

ಹುಡುಗ ೪: (ಕಳೆದುಕೊಂಡವನಂತೆ) ನನ್ನ ಪಚ್ಚೆ ಗೋಲಿ.

ನೀಲಗಾರರು: ಆಡೋಣ ಬನ್ನಿರೋ ಗೋಲಿಯಾಟ
ಬನ್ನಿ ಬನ್ನಿ ನಲಿಯುೂತ ।

ಹುಡುಗರು: ವಾಪಸ್ ಕೊಡೋ ಪರದೇಸಿ.

ರಾಚಪ್ಪ: (ಅವನ್ನೆಲ್ಲ ಜೋಳಿಗೆಗೆ ಹಾಕಿಕೊಳ್ಳುತ್ತ) ನಾನ್ ಗೆದ್ದಿದ್ದು ಗೋಲಿಕಯ್ಯೊ. ನಿಮಗ್ಯಾಕೆ ವಾಪಸ್ ಕೊಟ್ಟಾರು. ಇದನ್ನ ಸಂತೇಗ್ ತಕೋ ಓಗಿ ಬೆಂಡು ಬತ್ತಾಸು ಎಲ್ಲ ತಕತೀನಿ. ನಿಮ್ಗೂ ಒಂದೊಂದ್ ಕೊಡುಸ್ತೀನಿ.

ಹುಡುಗರು ರಾಚನ ಮೇಲೆ ಬೀಳುತ್ತಾರೆ. ರಾಚ ಬಿಡಿಸಿಕೊಳ್ಳುತ್ತಾನೆ.

ಹುಡುಗರು: ಕಳ್ಳ! ಕಳ್ಳ! ಕಳ್ಳ!

ಮೂವರು ನೀಲಗಾರರು ಆ ಊರಿನ ಗಂಡಸರಾಗುತ್ತಾರೆ

ಹುಡುಗ ೧: ಈ ಕಳ್ಳ ನಮ್ ಗೋಲಿಯೆಲ್ಲ ಕದ್‌ಗಬಿಟ್ಟ. ವಾಪಸ್ ಕೊಡಲ್ವಂತೆ.

ರಾಚಪ್ಪ: ಕದ್‌ಗಂಡಿಲ್ಲಕಪ್ಪೋ ಗೆದ್‌ಕಂಡಿದೀನಿ.

ದೊಡ್ಡವ ೧: ಬೋಳಿಮಕ್ಳ, ಈ ತಿರ್‌ಬೋಕಿ ಜತೆಗೇನ್ರೊ ನೀವ್ ಗೋಲಿ ಆಡಾದು. ನಡೀರಿ ನೀವು ಅಟ್ಟೀಗೆ.

ರಾಚಪ್ಪ ಗಕ್ಕನೆ ಗೋಲಿಗಳನ್ನು ಬಾಯೊಳಕ್ಕೆ ಹಾಕಿಕೊಳ್ಳುತ್ತಾನೆ

ದೊಡ್ಡವ ೨: ಏ ತಿರ್‌ಬೋಕಿ ಯಾರ್‌ಗುಟ್‌ದೋ ನೀನು? ನಮ್ ಉಡುಗುರ್ ಗೋಲಿ ತೆಗೆದು ಮಡಗು.

ರಾಚಪ್ಪ: ಕೊಡಕಿಲ್ಲ ಓಗ್ರಯ್ಯೋ.

ದೊಡ್ಡವ ೩: ಓಹೋ ನೀನೇ ಅಲ್ವಾ ಆ ಸಂತೆ ತಾವೆಲ್ಲಾ ಎಲ್ಲಾ ಉಲ್ಡುಸ್ ಬಂದೌನು? ಆಕ್ರಲೋ ಎಲ್ಡು. ಇನ್ನೂ ಮಾತಾಡ್ತಾ ನಿಂತೌರೆ ಇವನ್ತಾವ.

ಇಬ್ಬರು ರಾಚನನ್ನು ಹೊಡೆಯುತ್ತಾರೆ. ಅವನು ಕೆಳಗೆ ಬೀಳುತ್ತಾನೆ.

ಹುಡುಗರು: ಅಂಗೆ ಆಗಬೇಕು, ಹಲ್ಲು ಮುರಿಬೇಕು, ನೀನಳಬೇಕು, ನಾನ್ ನಗಬೇಕು.

ರಾಚಪ್ಪ ಅವರನ್ನು ಅಟ್ಟಿಸಿಕೊಂಡು ಹೋಗುವನು. ಹುಡುಗರು ಓಟ ಕೀಳುತ್ತಾರೆ. ದೊಡ್ಡವರು ರಾಚಪ್ಪನನ್ನು ಹಿಡಿದು ಇನ್ನೆರಡು ಥಳಿಸಿ ಅವನ ಜೋಳಿಗೆ ಕಿತ್ತುಕೊಂಡು ಬರಿದು ಮಾಡುತ್ತಾರೆ.

ರಾಚಪ್ಪ: ಅಯ್ಯೋ ನನ್ ಕಪ್ಪೆಚಿಪ್ಪು! ಬಣ್ ಬಣ್‌ದ್ ಕಲ್ಲು! ನವಲ್ ಗರಿ! ಬಿಳೀಪುಕ್ಕ! ಕಾಗೆ ಬಂಗಾರ!

ದೊಡ್ಡವ ೧. ೨ ಅವನನ್ನು ಎಳೆದುಕೊಂಡು ನಿಷ್ಕ್ರಮಣ

ನೀಲಗಾರರು: ಆಡಿ ಬಾ ನನ ಕಂದ ಅಂಗಾಲ ತೊಳೆದೇನು
ತಂಗೀನಕಾಯಿ ತಿಳಿನೀರು । ತಕ್ಕಂಡು
ನಿನ್ನ ಸಿಂಗಾರ ಪಾದ ತೊಳೆದೇನು

ಓಡಿ ಬಾ ನನಕಂದ ಮಾಡಿಡುವೆ ನಿನಗೆಂದು
ಗಾಡಿತುಪ್ಪದ ಕಜ್ಜಾಯ । ತಿನಕೊಂಡು
ಆಡೋಗು ತಿರುಗಿ ಬಯಲೊಳಗೆ

ಕಳ್ಳನೆಂದು ಬಡಿಸಿಕೊಂಡಲ್ಲೊ । ರಾಚಪ್ಪಾಜಿ
ಸುಳ್ಳನೆಂದು ಒದೆಸಿಕೊಂಡಲ್ಲೋ ॥

ಇಂತನಗರವ ಕಂಡೇ ಇಲ್ಲ
ಅಂತ ನೆಗೆದು ಕುಣಿಯುತಿದ್ದೆ
ನಿಂತುಕೊಂಡೇ ಹಾರುತಿದ್ದೆ
ಇಂತ ಪಾಡು ನಿನಗೆ ಬಂತಲ್ಲೋ । ರಾಚಪ್ಪಾಜಿ
ಇಂತ ಪಾಡಲ್ಲೊ ।

ರಾಚಪ್ಪ ಪ್ರವೇಶ. 'ಥೂ' ಎಂದು ಉಗಿಯುತ್ತಾನೆ. ಯಾರನ್ನೋ ಚೆನ್ನಾಗಿ ಅಣಕಿಸುತ್ತಾನೆ. ಇನ್ನೊಂದು ಕಡೆಯಿಂದ ಮಂಟೇಸ್ವಾಮಿ ಪ್ರವೇಶ. ರಾಚಪ್ಪ ಅಳುತ್ತ ಮಂಟೇಸ್ವಾಮಿ ಕಡೆ ಓಡಿ ಬರುತ್ತಾನೆ.

ರಾಚಪ್ಪ: ಸ್ವಾಮ್‌ಗುಳೇ ನನ್ ಇಡ್ಕಂಡು ಬೈಗ್ಳ ಬೊಯ್‌ದ್ರು. ಒಡತ ಒಡುದ್ರು.

ಮಂಟೇಸ್ವಾಮಿ: ಏನ್ ತಿಂಡಿ ತಂದೆ ಮಗ? ಕಜ್ಜಾಯ ಎಲ್ಲಿ? ಬತ್ತಾಸ್ ಎಲ್ಲಿ? ಲಡ್ಡು ಎಲ್ಲಿ? ಅಣ್ಣುಗಳೆಲ್ಲಿ?
ರಾಚಪ್ಪ: ಯಾರೂ ಬಿಕ್ಸ ಕೊಡ್ಲಿಲ್ಲ. ಕಾಸ್ ಕೇಳುದ್ರು. ಗೋಲಿ ಆಟ ಆಡಿ ಚಿನ್ನ-ಬೆಳ್ಳಿ-ಮುತ್ತಿನ್ ಗೋಲಿ ಗೆದ್‌ಗಂಡೆ. ಕಳ್ಳ ಅಂತ ಇಡ್ಕಂಡು ಬೊಯ್‌ದ್ರು, ಒಡದ್ರು.
ಮಂಟೇಸ್ವಾಮಿ: ಈ ಊರು ಬೋ ಸೊಗಸಾಗದೆ ಅಂದೆ. ಏಟ್ ಸಂದಾಗದೆ ಗೊತ್ತಾಯ್ತ ಮಗ?
ರಾಚಪ್ಪ: ಸ್ವಾಮ್‌ಗುಳೇ, ಒಟ್ಟೆ ಅಸೀತಾದೆ.

ಮಂಟೇಸ್ವಾಮಿ ದ್ರಾಕ್ಷಿ ಗೊಂಚಲನ್ನು ಜೋಳಿಗೆಯಿಂದ ತೆಗೆದುಕೊಡುತ್ತಾನೆ.

ರಾಚಪ್ಪ: ಅದ್ ಯಾವ್ ಮಾಯ್ದಲ್ಲಿ ಬಿಕ್ಸಾ ತಂದ್ರಿ ಇದನ್ನ?
ಮಂಟೇಸ್ವಾಮಿ: ನೀನು ಊರೊಳಿಕ್ ಓಗಿ ನರಮನ್ಸರನ್ನ ಬಿಕ್ಸ ಬೇಡ್‌ತಿದ್ದಾಗ ನಾವ್ ಕಾಡೊಳಿಕ್ ಓಗಿ ಮರಗಿಡ್‌ಗಳನ್ನ ಬಿಕ್ಸ ಬೇಡುದ್ವಪ್ಪ.
ರಾಚಪ್ಪ: (ಹಣ್ಣು ತಿನ್ನುತ್ತ) ಸ್ವಾಮ್‌ಗುಳೇ ಅವ್ರು ನನ್ಗೆ ಸುಮ್ ಸುಮ್ಕೆ ಒಡುದ್ರು-ಬಡುದ್ರು. ನಾನು ಈ ಅಣ್ ತಿನ್ಕಂಡೋಗಿ ಅವ್ರುಗ್ಗೆಲ್ಲ ಬುಲ್ಡೆ ಬಿಚ್ಚಾಕಿ ಬತ್ತೀನಿ.
ಮಂಟೇಸ್ವಾಮಿ: ಕೇಳುಸ್ಕೋ ಮಗ.

ಅನೇಕರು ನರಳುತ್ತಾ ವಿಕಾರವಾಗಿ ಕೂಗುವ ಕೂಗುಗಳು ಕೇಳುತ್ತದೆ.

ರಾಚಪ್ಪ: ಏನ್ ಕೂಗು ಅದು?!

ಮಂಟೇಸ್ವಾಮಿ: ಈಗ ಕತ್ಲಾಗೀತು. ಈ ಊರೋರೆಲ್ಲ ಮನೀಕಂಡವ್ರೆ. ಅವ್ರುನ್ನ ಮಾರಮ್‌ಗುಳು ಇಡ್ಕಂಡು ವಸ್‌ವಸೀನೇ ತಿಂತಾವ್ರೆ.

ರಾಚಪ್ಪ: ಸ್ವಾಮ್‌ಗುಳೇ, ಒಟ್ಟೆ ತುಂಬ್ತು. ಓದ್ರು ಓಗ್ಲಿ ಬನ್ನಿ. ಆ ಮಾರಮ್ಮನ್ ಓಡ್ಸವ.

ಮಂಟೇಸ್ವಾಮಿ: ಆ ಮಾರಮ್‌ಗುಳ್ನ ಅವ್ರಾಗೆ ಅವ್ರೆ ಮನೆ ಒಳ್ಗೆ, ಮನುಸ್‌ನೊಳ್ಗೆ ಕೂಡಾಕ್ಕೊಂಡೌರಪ್ಪ. ಅಗಲೊತ್ನಲ್ಲಿ ಒಬ್ರನ್ನೊಬ್ರು ಕಿತ್ಕಂಡು ತಿಂತಾರೆ. ರಾತ್ರಿ ಒತ್ನಲ್ಲಿ ಮಾರಮ್‌ದಿರು ಅವ್ರುನ್ನ ಕಿತ್ಕಂಡ್ ತಿಂತಾರೆ.

ಕೂಗು ಇನ್ನೂ ಜೋರಾಗುತ್ತದೆ.

ರಾಚಪ್ಪ: ನಡೀರಿ ಗುರ್‌ಗಳೇ, ಆ ಮಾರಮ್‌ದಿರು ನಮ್ಮುನ್ನೂ ತಿನ್ಬುಟ್ಟಾವು. ಕಾಡೊಳಿಕ್ ಓಗ್‌ಬಿಡಾನ.

ಮಂಟೇಸ್ವಾಮಿ: ನಡಿ. (ತಟ್ಟನೆ ನಿಲ್ಲುತ್ತಾನೆ)

ಮಂಟೇಸ್ವಾಮಿ: ಅಗೋ ಅಲ್ಲಿ, ಹುಲಿ!

ರಾಚಪ್ಪ ಹೆದರಿ ಹಿಂದೆ ಓಡಿಬರುತ್ತಾನೆ.

ಮಂಟೇಸ್ವಾಮಿ: ಅತ್ಕಡೆ ಮಾರಮ್‌ದೀರು!

ರಾಚಪ್ಪ ಮತ್ತೆ ಇತ್ತಕಡೆ ಓಡಿಬರುತ್ತಾನೆ.

ಮಂಟೇಸ್ವಾಮಿ: ನಡಿ ಮಗ, ನಡಿ, ಮೊದ್ಲು ಉಲಿ, ಮೇಸದ್ ಕಲ್‌ತ್ಕೋ. ಆಮೇಲೆ ಮಾರಮ್‌ದಿರ ಮೇಸದ್ ಕಲ್‌ತ್ಕಣೇವಂತೆ.

ರಾಚಪ್ಪನನ್ನು ಹಿಡಿದು ಹುಲಿಕೂಗು ಬರುತ್ತಿರುವ ಕಡೆ ಎಳೆದೊಯ್ಯುತ್ತಾ ನಿಷ್ಕ್ರಮಣ.

ನೀಲಗಾರ ೧: ಅಲ್ಲಿಂದ ನಮ್ಮ ಸ್ವಾಮ್‌ಗಳು ಬೂಮಿಗೆ ದೊಡ್ಡೋರು ಎಷ್ಟೋ ವರ್ಸ ಕಾಡುಮೇಡು ಅಲ್ಕಂಡು ಆಮ್ಯಾಲೆ ಸಕ್ಕರಾಯ ಪಟ್ಣಕ್ಕೆ ಬಂದು ಆ ಪಟ್ಟಣದ ಅರಸುಕುಮಾರರಾದ ಈರಬದ್ರ ರಾಜೇಂದ್ರ ಸ್ವಾಮಿಗಳನ್ನು

ಸಿಸು ಮಕ್ಕಳನ್ನಾಗೆ ಮಾಡಿಕಂಡು ಈಗ ವೆಳೆದು ನಿಂತಂತ್ರ ರಾಚಪ್ಪಾಜಿಗೆ ಆರಳುತಾ ಇರುವಂತ ಒಂದು ಎಣ್ಣುಕೂಸು ತರಬೇಕೂಂತ ಕಾಗಿನೆಲೆ ಗ್ರಾಮುಕ್ ಬತ್ತಾವ್ರಲ್ಲೊ.

ನೀಲಗಾರರು: ಮಂಟೇದ ಸ್ವಾಮಿ ಬನ್ನಿ
ಪರಂಜ್ಯೋತಿ ಲಿಂಗಯ್ಯ ನೀವೆ ಬನ್ನಿ ॥

ಇಬ್ಬರು ಹುಡುಗಿಯರು ಬಿಂದಿಗೆ ಹೊತ್ತುಕೊಂಡು ಪ್ರವೇಶ

ನೀಲಗಾರರು: ತಾರಕ್ಕ ಬಿಂದಿಗೆ ನಾ ನೀರಿಗ್ ಓಗುವೆ
ತಾತಾರೆ ಬಿಂದಿಗೆಯ ।
ಗಾರಾದ ಊರಾಚೆ ಸೀ ನೀರಿಗ್ ಓಗುವೆ
ತಾತಾರೆ ಬಿಂದಿಗೆಯ ।
ಬೇಸಿಗೆ ಒಲದಾಚೆ ಸೀತಾಳ ನೀರಿಗೆ
ತಾತಾರೆ ಬಿಂದಿಗೆಯ ।
ಸೀತಾಳ ನೀರಿಗೆ ಪಾತಾಳ ಬಾವಿಗೆ
ತಾತಾರೆ ಬಿಂದಿಗೆಯ ।

ಹಾಡು-ಕುಣಿತ ಮುಗಿದ ಮೇಲೆ ಇಬ್ಬರೂ ನೀರು ಸೇದುವುದನ್ನು ಅಭಿನಯಿಸುತ್ತಾರೆ.

ಹುಡುಗಿ ೧: ಅಲ್ಲ ಕಣೇ, ದಿನಾ ಬತ್ತಿದ್ದೌಳು ದೊಡ್ಡೀ ಯಾಕೆ ಬರ್ಲಿಲ್ಲ ಇವತ್ತು?

ಹುಡುಗಿ ೨: ಏ, ನಿನಗೆ ಗೊತ್ತಿಲ್ವ. ನಾಳೀಕೆ ಅವುಳ್ಗೆ ಲಗ್ನ.

ಹುಡುಗಿ ೧: ಅಂತೂ ಅವುಳ್ಗೆ ಅವ್ಳ ಚಿಕ್ಕಮ್ಮನ್ ಕಾಟ ತಪ್ತು ಅನ್ನು.

ಹುಡುಗಿ ೨: ಹೂಂ. ಬೆಕ್ಕಿನ್ ಬಾಯ್ ತಪ್ಪಿಸ್ಕಂಡು, ಉಲೀ ಬಾಯ್ಗೆ ಸಿಕ್ಕಂಡಂಗಾಯ್ತು. ಅವಳ್ ಗಂಡ ಆಗೋವ್ನು ಆ ದನದ್ ಯಾಪಾರಿ ಈರಣ್ಣ. ಅವ್ನು ಮೂರ್‌ಜನ ಎಡ್ತೀದಿರ ಎಣ, ಇಕ ಈ ಬಾವೀಲೆ ತೇಲಾಡಿತ್ತು.,

ಹುಡುಗಿ ೧: ಅವ್ನಾ ಗಂಡು? ದುಡ್ನಾಸೇಗೆ ಎಲ್ಲೋ ಆ ಚಿಕ್ಕವ್ವುಂದೇ ಇರ್ಬೇಕು ಈ ಕೆಲ್ಸ. ನೋಡಲ್ಲಿ ದೊಡ್ಡಮ್ಮ ಈ ತಾಕೇ ಬತ್ತಾವ್ಳೆ. ಮದುವೆ ಇಂದಿನ್ ದಿವ್ಸಾನೂ ನೀರೊರೋದು ತಪ್ಲಿಲ್ಲ ಅವಳ್ಗೆ.

ದೊಡ್ಡಮ್ಮ ಬಿಂದಿಗೆ ಹಿಡಿದು ಪ್ರವೇಶ. ಇಬ್ಬರೂ ಹುಡುಗಿಯರು ಒಬ್ಬರಿಗೊಬ್ಬರು ಸನ್ನೆ ಮಾಡುತ್ತಾರೆ.

ಹುಡುಗಿಯರು: ಸೋ ಎಸ್ನಿರೆ, ಸೋಬಾನ ಎಸ್ನಿರೆ.

ಹುಡುಗಿ ೧: ಅಮ್ಮ ಮದ್ವೆ ಎಣ್ಣು, ನಿನ್‌ಗೀಗಾಗ್ಲೆ ಆಸೀಮ್ಯೆಯಿ. ತತ್ತಾ ನಾವೇ ನೀರ್ ಸೇತ್ಕೊಡ್ತೀವಿ.

ದೊಡ್ಡಮ್ಮ: ಬ್ಯಾಡ ಕಣ್ರೋ, ನೀವ್ ಓಗ್ರಿ. ಮನೇಲಿ ಗಲಾಟೆ, ನಾನಿಲ್ಲೇ ಒಂಗೇ ಮರದ್ ಕೆಳ್ಗೆ ಒಂದ್ ಗಳ್ಗೆ ಕೂತಿದ್ ಬತ್ತೀನಿ.

ಇಬ್ಬರೂ 'ಸೋ ಎಸ್ನಿರೆ' ಹಾಡಿಕೊಳ್ಳುತ್ತಾ ನಿರ್ಗಮನ. ಅವರು ಹೋದಮೇಲೂ ಹಾಡು ಕೇಳಿಬರುತ್ತಿರುತ್ತದೆ. ದೊಡ್ಡಮ್ಮ ಕೊಡವನ್ನು ಅಲ್ಲೆ ಬಿಟ್ಟು ತಾನೇ ಬಾವಿ ಕಡೆಗೆ ನಿಧಾನವಾಗಿ ಹೆಜ್ಜೆ ಹಾಕುತ್ತಾಳೆ. ಮತ್ತೆ ಹಿಂದೆ ಬರುತ್ತಾಳೆ. ಮತ್ತೆ ಮುಂದೆ ಹೋಗುತ್ತಾಳೆ. ನೀಲಗಾರರು ರಂಗಕ್ಕೆ ನುಗ್ಗುತ್ತಾರೆ.

ನೀಲಗಾರ ೧: ಅಮ್ಮ ತಾಯಿ ನಿಂತ್ಕ.

ನೀಲಗಾರ ೨: ನಿಂತ್ಕ, ನಿಂತ್ಕ.

ನೀಲಗಾರ ೧: ಅಲ್ಲಮ್ಮಾ, ಜನ ಬಾವಿ ಆಚೆ ನಿಂತ್ಕಂಡು ಕೊಡಾ ಒಳೀಕ್ ಬಿಟ್ಟು ನೀರೆಳ್ಕತರೆ.

ನೀಲಗಾರ ೨: ನೀನು ಕೊಡಾ ಆಚೆ ಬಿಟ್ಟು, ನಿನ್ನ ಒಳೀಕ್ ಬಿಟ್ಕಂಡು ನೀರೆಳ್‌ಕಳಕೊಂಟಿದೀಯ.

ನೀಲಗಾರ ೩-೪: ಇದ್ಯಾಕಮ್ಮ?

ದೊಡ್ಡಮ್ಮ: ಅಪ್ಪ ನೀಲಗಾರ್ರು, ನಾಳೆ ನನ್ ಕತ್ಗೆ ಬ್ಯಾಡದೋನ್ ಕೈಯಿಂದ ತಾಳಿ ಕಟ್ಟುಸ್ತಾರೆ, ಅದಿಕ್ಕೆ ನಾನು ಈ ಬಾವಿ ನೋಡ್ಕಂಡಿದೀನಿ.

ನೀಲಗಾರ ೧: ಓಹೋ ಅರ್ಥ ಆಯ್ತು ಬಿಡಮ್ಮ.

ನೀಲಗಾರ ೨: ಈ ಬಾವೀನೆ ಯಾಕಮ್ಮ? ಬೇರೆ ಯಾವ ಬಾವೀನೂ ಯಾಕಿಲ್ಲಮ್ಮ?

ನೀಲಗಾರ ೧: ಬಾ, ಎಂಗಿದ್ರು ಇದ್ರೊಳಿಕ್ ಬೀಳಕ್ಕೆ ಇಂದೆ ಮುಂದೆ ನೋಡ್ತಿದಿಯ. ಬಾ ನಾವೇ ನಿನ್ನ ಕರ್ಕೊಂಡೋಗಿ ಒಂದ್ ಆಳ್‌ಬಾವಿ ಒಳೀಕ್ ತಳ್‌ಬತ್ತೀವಿ.

ನೀಲಗಾರ ೨: ಆಮೇಲೆ ನೀನೆ ಮೇಲಕ್ಕೆ ಅತ್‌ಕಂಡ್ ಬತ್ತೀಯ.

ದೊಡ್ಡಮ್ಮ: ಅಪ್ಪ ನೀಲಗಾರ್ರು. ನನ್ ದಾರಿಗ್ಯಾಕೆ ಅಡ್ಡ ನಿಂತಿದೀರ? ನನ್‌ಗೋಳು ನಿಮ್ಗೆ ಏಳಕ್ಕಾಗಲ್ಲ. ಏಳುದ್ರೆ ನಿಮ್ಗೆ ಅರ್ತ ಆಗಲ್ಲ. ನಿಮ್ ಪಾಡಿಗ್ ನೀವು ಬದುಕ್ಕೋ ಓಗಿ. ನನ್ ಪಾಡಿಗ್ ನಾನು ಮುಳುಗ್‌ಕಂತೀನಿ.

ನೀಲಗಾರ ೧: ಮಾರಾಯ್ತಿಯಂಗೆ ಮುಳುಕ್ಕ. ಆದ್ರೆ ಮುಳುಕ್ಕಳಕ್ ಮೊದ್ಲು ಒಂದ್ ಬೆಂಡ್ ಕಟ್ಕ.

ನೀಲಗಾರ ೨: ಇಂಗ್ ಮುಳುಗ್‌ದೋಳು ಅಂಗ್ ತೇಲ್ಕಂಡು ಮೇಲಿಕ್ ಬತ್ತೀಯ.

ದೊಡ್ಡಮ್ಮ: ಅಪ್ಪಾ, ಒಂದ್‌ಸತಿ ಮುಳುಗುದ್ ಮೇಲೆ ತಿರ್ಗಿ ಮೇಲಕ್ ಬರೋ

ಆಸೆ ನಂಗಿಲ್ಲ. ಕಣ್ರಪ್ಪ. ನಸಿಗ್ ದಾರಿ ಬಿಟ್ಟು ನಿಮ್ ದಾರಿ ನೀವ್ ಇಡ್ಕಂಡು ಒಂಟೋಗ್ರಿ.

ನೀಲಗಾರ ೧: ಅಂಗಿದ್ರ ಇನ್ನೊಂದ್ ಉಪಾಯ ಮಾಡವ. ಬೆಂಡೂ ಬೇಡ ಗಿಂಡೂ ಬೇಡ. ನಿನ್ ಪಾಡಿಗ್ ನೀನ್ ಮುಳುಕ್ಕ. ನೀನ್ ಮುಳ್ಕಳಕ್ ಮೊದ್ಲು ನಾವ್ ನಿನ್ ಸೊಂಟಕ್ಕೊಂದ್ ಅಗ್ಗ ಕಟ್ತೀವಿ.

ನೀಲಗಾರ ೨: ನೀನ್ ಮುಳುಗುದ್ ಮೇಲೆ, ನಾವ್ ಮ್ಯಾಲೆ ಎಳಕಂತೀವಿ.

ದೊಡ್ಡಮ್ಮ: ಅಪ್ಪಾ ನೀಲಗಾರ್ರು, ಸಾಯೋಕೊಂಟಿರೋಳ್ನ ಬದುಕ್ಸಾಕ್ ಬರ್ಬೇಡಿ. ನಿಮ್ ಕಾಲ್ ಮುಗದ್ ಬೇಡ್ಕತೀನಿ. ನನ್ ದಾರಿ ನನಗ್ ನೋಡ್ಕಳಾಕ್ ಬಿಡಿ.

ಮತ್ತೆ ಬಾವಿಯ ಕಡೆ ಹೋಗುತ್ತಾಳೆ. ಬಾವಿಗೆ ಕೈ ಮುಗಿದು ನಿಲ್ಲುತ್ತಾಳೆ.

ನೀಲಗಾರ ೧: ಏನಪ್ಪ ಗತಿ?

ದೊಡ್ಡಮ್ಮ: ಅಮ್ಮಾ ಗಂಗಮ್ ತಾಯಿ, ನನ್ನ ನಿನ್ ಪಾಲ್‌ಮಾಡ್ಕೊಳಮ್ಮ. ಈ ಕಣ್ಣೀರಿನ್ ಬೂಮಿ ಬಿಟ್ಟು ತಣ್ಣೀರಿನ್ ಬಾವಿ ಒಳೀಕ್ ಬತ್ತಿದೀನಿ.

ಹಿನ್ನೆಲೆಯಿಂದ: 'ಮಗಳೇ ನಿಂತ್ಕೊ. ನಿಂತ್ಕೊ' ಮಂಟೇಸ್ವಾಮಿ ಪ್ರವೇಶ

ಮಂಟೇಸ್ವಾಮಿ: ಅಮ್ಮಾ ಮಗಳೇ ವಸಿ ನಿಂತ್ಕೊ.

ದೊಡ್ಡಮ್ಮ: ಅಪ್ಪ ಜಂಗಮರೆ, ನೀವೂ ನನ್ ತಡಿಯಕ್ ಬಂದಿದೀರ?

ನೀಲಗಾರರು: ಈ ಬಾಳು ಸಾಕು ನನಗೆ ।
ಆ ಸಾವು ಬೇಕು ನನಗೆ । ಜಂಗುಮಯ್ಯ
ಕಣ್ಣೀರ ನೆಲವ ತೊರೆದು । ಜಂಗುಮಯ್ಯ
ತಣ್ಣೀರ ಜಲವ ಒಗುವೆ

ದೊಡ್ಡಮ್ಮ: 'ಈ ಕಣ್ಣೀರಿನ ನೆಲಕ್ಕೆ ಇನ್ನೊಂದ್ಕಿತ ಬರ್ಬೇಡ ಮಗಳೆ' ಅಂತ ಆಸೀರ್ವಾದ ಮಾಡಿ, ನನ್ನ ಈ ತಣ್ಣೀರ್ ಜಲಕ್ಕೆ ಕಳಿಸ್‌ಕೊಡಿ ಜಂಗುಮಯ್ಯನೋರೆ.

ಮಂಟೇಸ್ವಾಮಿ: ನೀನು ನಿಜವಾಗಿ ಸಾಯ್‌ಬೇಕಂತ ಮಾಡಿದೀಯ ಮಗಳೆ?

ದೊಡ್ಡಮ್ಮ: ನಿಮಗನುಮಾನಾನಾ ಜಂಗುಮಯ್ಯನೋರೆ?

ಮಂಟೇಸ್ವಾಮಿ: ನೀನದೆಂಗಮ್ಮ ಸತ್ತೀಯ?

ದೊಡ್ಡಮ್ಮ: ಅಂಗಂದ್ರೇನು ಜಂಗುಮಯ್ಯನೋರೆ?

ಮಂಟೇಸ್ವಾಮಿ: ಅಮ್ಮ ಮಗಳೇ, ಬದ್ಕಿರೋರ್ ಮಾತ್ರ ಸಾಯ್ತರಮ್ಮ. ಸತ್ತೋರೆಂಗಮ್ಮ ಸಾಯ್ತಾರೆ?

ದೊಡ್ಡಮ್ಮ: ನಿಮ್ ಮಾತ್‌ಗೇನರ್ಥ ಜಂಗುಮಯ್ಯನೋರೆ.

ಮಂಟೇಸ್ವಾಮಿ: ಅಮ್ಮ, ನೀನೀಗಾಗ್ಲೆ ಸತ್ತಿದೀಯ ಕಣಮ್ಮ. ಸತ್ತು ನರಕ್‌ದೊಳಗ್ ಬಿದ್ದಿದೀಯ ಕಣಮ್ಮ –

ದೊಡ್ಡಮ್ಮ: (ಕಿವಿಮುಚ್ಚಿಕೊಂಡು) ಅಂಗಾದ್ರೆ ಈ ಬಾವಿ? ಈ ಊರು? ಈ ಜನ?

ಮಂಟೇಸ್ವಾಮಿ: ಎಲ್ಲಾ ಸತ್ತೋಗೌರೆಕನವ್ವ. ಇದು ಸತ್ತ ನೆಲ, ಅದು ಸತ್ತ ಜಲ, ಇದು ಸತ್ತ ಗಾಳಿ, ಅದು ಸತ್ತ ಆಕಾಶ.

ನೀಲಗಾರರು: ನೆಲವೂ ಸತ್ತಿತು ತಾಯಿ
ನೀನು ಸತ್ತಾಗ ।
ಜಲವೂ ಸತ್ತಿತು ತಾಯಿ
ನೀನು ಸತ್ತಾಗ ।
ವಾಯೂ ಸತ್ತಿತು ತಾಯಿ
ನೀನು ಸತ್ತಾಗ ।
ಗಗನ ಸತ್ತಿತು ತಾಯಿ
ನೀನು ಸತ್ತಾಗ ।
ಸತ್ತ ಬಾವಿಗೆ ತಿರುಗಿ ಬೀಳಬೇಡ
ಸತ್ತ ಸಾವನು ತಿರುಗಿ ಸಾಯಬೇಡ ॥

ಮಂಟೇಸ್ವಾಮಿ: ನಾಳೆ ನಿಮ್ ಚಿಕ್ಕವ್ವ ತ್ವಾರಣ ಕಟ್ಸಿ, ವಾಲ್ಗಾ ಊದ್ಸಿ ನಿನ್ ಎಣುಕ್ಕೆ ಮದ್ವೆ ಮಾಡುಸ್ತಾಳೆ ಕನವ್ವ. ಆವಾಗ ನಾವು ನಿನ್ ಎಣಾನ ಬಿಕ್ಸಾ ತಗಂಡು, ಆ ಎಣಕ್ಕೆ ಜೀವ ಬಿಕ್ಸೆಯನ್ನ ಕೊಟ್ಟೇ ನಿನ್ ಕರ್ಕೊಂಡೋಯ್ತೀವಿ. ಅಮ್ಮ ದೊಡ್ಡಮ್ಮ, ನೀನೀಗ ನೀನಲ್ಲ ಕನವ್ವ, ನಿನ್ ದೆವ್ವ. ಸತ್ತೋಗಿರ ನೀನು ನಿನ್ನ ಸತ್ತ ಮನೆಗೆ ಸತ್ತೋರ ಪಿಸಾಚಿಯಂಗೆ ತಿರ್‌ಗಾ-ಮುರ್‌ಗಾ ನಡ್ಕಂಡು ತಿರ್‌ಗೋಗಮ್ಮ. ನಾವು ನಾಳೆ ನಿನ್ನ ಕರ್ಕಂಡೋಯ್ತೀವಿ.

ದೊಡ್ಡಮ್ಮ ಸ್ವಲ್ಲ ದೂರ ಹಿಂದಕ್ಕೆ ನಡೆಯುತ್ತ ಹೋಗಿ ಕುಸಿಯುವಳು. ಮಂಟೇಸ್ವಾಮಿ ರಂಗದ ಇನ್ನೊಂದು ಭಾಗದಲ್ಲಿ ಕೂತು ಬಂಗಿ ಹಚ್ಚಿಕೊಳ್ಳುವನು. ನೀಲಗಾರರು ಓಲಗ ತಮಟೆಯವರಾಗಿ ರಂಗದ ಮಧ್ಯಕ್ಕೆ ಬರುತ್ತಾರೆ. ದೊಡ್ಡಮ್ಮನ ಗೆಳತಿಯವರು ಹಾಡತೊಡಗುತ್ತಾರೆ. ಮಲತಾಯಿ ಮದುವೆಯ ಏರ್ಪಾಟುಗಳನ್ನು ಅಭಿನಯಿಸುತ್ತಾಳೆ.

ನೀಲಗಾರರು: ಕಲ್ಯಾಣವೇ ಸೀತೆ ಕಲ್ಯಾಣವೇ
ಜನಕರಾಜನ ಸುತೆಯ
ಭುವನದೊಡೆಯಗೆ ಕೊಡುವ
ಲೋಕಪಾಲುಕರ ಸೂತ್ರದ ಗೊಂಬೆಗೆ ॥ ಕಲ್ಯಾಣವೆ ॥

ಹುಡುಗಿಯರು ವಧುವಿಗೆ ಅಲಂಕಾರ ಮಾಡುವುದನ್ನು ಅಭಿನಯಿಸುತ್ತಾರೆ.

ಮುದಿಯಾದ ವರ ಬಂದು ಮಂಟಪದೊಳಗೆ ಕೂರುತ್ತಾನೆ. ಶಾಸ್ತ್ರಿ ಮಂತ್ರ ಹೇಳತೊಡಗುತ್ತಾನೆ.

ಮಂತ್ರ: ಗಣ ಗಣಾಯ ನಮ:
ಮಣ ಮಣಾಯ ನಮ:
ನೊಣ ನೊಣಾಯ ನಮ:

ನೀಲಗಾರರು: ಪಚ್ಚೆ ಮಂಟಪದೊಳಗೆ
ನಚ್ಚಿಗ ಕಾದವನೆ ॥ ಕಲ್ಯಾಣ ॥
ಮುತ್ತಿನ ಮಡದಿ ಬಾ
ಒತ್ತೇಕೆ ಅಂದವನೆ ॥ ಕಲ್ಯಾಣ ॥

ಶಾಸ್ತ್ರಿ: ವಧುವನ್ನು ಕರಕೊಂಡು ಬರೋಣವಾಗಲಿ.

ದೊಡ್ಡಮ್ಮ ಮಂಕು ಬಡಿದಂತಿರುವಳು. ಮಂಟೆಸ್ವಾಮಿ. ರಾಚಪ್ಪ ಪ್ರವೇಶ

ಮಂಟೇಸ್ವಾಮಿ: ಬಿಕ್ಸಾ. ಕ್ವಾರಣ್ಯ ಧರ್ಮಗುರುವೇ.

ಮಲತಾಯಿ: ಯಾವನೋ ಅವ್ನು ಪರದೇಸಿ ಮುಂಡೇಮಗ? ಲಗ್ನ ಕಾರ್ಯದೊಳ್ಗೆ ಇಗ್ನ ಮಾಡಕ್ ಬಂದಿರೋನು?

ಮಂಟೇಸ್ವಾಮಿ: ಅಲ್ಲಮ್ಮ. ಅಮಂಗಳ ಕಾರ್ಯದೊಳ್ಗೆ ಮಂಗಳ ಮಾಡಕ್ ಬಂದಿರೋನು.

ಮಲತಾಯಿ: ಮುಚ್ಕಂಡು ಕುಕ್ರುಸ್ಕೊ. ದಾರೆ ಮೊರ್ತ ಆದ್ಮೇಲೆ ಮಿಕ್ಕಿದ್ದು ದಕ್ಕಿದ್ದು ಕೊಡ್ತೀವಿ.

ಮಂಟೇಸ್ವಾಮಿ: ಬಾಳ ಸಂತೋಸವಮ್ಮ ತಾಯಿ. ಇಲ್ಲೆ ಕುಂತ್ಕಂಡಿರ್ತೀವಿ. ನಮ್ಮನ್ ಮರೀಬ್ಯಾಡ ತಾಯಿ.

ಶಾಸ್ತ್ರಿ: ವಧುವನ್ನು ಕರಕೊಂಡು ಬರೋಣವಾಗಲಿ.

ಮಲತಾಯಿ: ಲೇ, ಆ ಕೊಳಕ್ ಮೋರೇವ್ಳಿಗೆ ಅದೇಟ್ ಅಲಂಕಾರ ಮಾಡೀರ, ಕರ್ಕಂಬರ್ರೆ !

ದೊಡ್ಡಮ್ಮನನ್ನು ಗೆಳತಿಯರು ಮೇಲೆಕ್ಕೆಬ್ಬಿಸಿ ಮಂಟಪದ ಕಡೆ ಕರೆದೊಯ್ಯುತ್ತಾರೆ.

ಮಂಟೇಸ್ವಾಮಿ: ಕ್ವಾರಣ್ಯ ಬಿಕ್ಸಾ.

ಮಲತಾಯಿ: ಅಯ್ಯೋ ನಿನ್ ಬಾಯ್ಗೆ ಎರೆಮಣ್ಣುಯ್ಯ. ಜಲ್ದಿ ಕರ್ಕಂಬರ್ರೆ.

ಶಾಸ್ತ್ರಿ: ಶೀಘ್ರವಾಗಿ-ಶೀಘ್ರವಾಗಿ. ಮುಹೂರ್ತದ ವೇಳೆ ಮೀರ್ತಾ ಬಂತು. ಅಪ್ಪಾ ನೀಲಗಾರ್ರು, ಬೇಗ ಅಕ್ಷತೆ ಹಂಚಿ.

ದೊಡ್ಡಮ್ಮನನ್ನು ಮಂಟಪದಲ್ಲಿ ಕರಕೊಂಡು ಬಂದ ತಕ್ಷಣ ಅವಳು ಧೊತ್ತೆಂದು ಕೆಳಗೆ ಬೀಳುತ್ತಾಳೆ. ಮಲತಾಯಿ. ಮಂಟೇಸ್ವಾಮಿಯನ್ನುಳಿದು ಎಲ್ಲರೂ ಮಂಟಪದ ಸುತ್ತ ನಿಂತುಕೊಳ್ಳುತ್ತಾರೆ.

ಮಲತಾಯಿ: ಒಲ್ಲದ ಗಂಡ ಅಂತ ಕಳ್ಳಾಟ ಆಡೀಯೇನೇ ಮುಂಡೆ. ಟೊಂಕ ಮುರುದ್ ಬಿಟ್ಟೇನ್ ಉಸಾರ್.

ಶಾಸ್ತ್ರಿ: ಅಮ್ಮಾ ಕಲ್ಯಾಣಮ್ಮ. ನಿನ್ನ ಮಲಮಗಳು ತೀರಿಕೊಂಡಳಮ್ಮ.

ಮಲತಾಯಿ: ಎಲಾ ಮುಂಡೆ! ಸತ್ಹೋದ್ಲ? ಅಯ್ಯೋ ಇವಳ ಬಾಯಿಗೆ ಮಣ್ಣಾಕ. ತಾಯಿ ತಂದಿಲ್ಲದ ತಬ್ಬಲಿ ಅಂತ ಈ ಅಪರಂಜಿಯಂತ ಗಂಡನ್. ತಂದ್‌ನಲ್ಲೇ, ಅದೆಂಗೇ ಸತ್ತೇ? ಯಾವಳನ್ ಕೇಳ್ಕಂಢ್ ಸತ್ತೇ?

ಮಂಟೇಸ್ವಾಮಿ: ಬಿಕ್ಸಾ, ಕ್ವಾರಣ್ಯ ಬಿಕ್ಸ.

ಮಲತಾಯಿ: ನಿನ್ ಬಾಯಿಗ್ ಬರ್‌ಬಾರದ್ ಒತ್ ಬರಾ.

ನೀಲಗಾರ ೧: ಅಪ್ಪಾ ಶಾಸ್ತ್ರಿಗಳೇ, ಶಾಸ್ತ್ರದ್ ಪ್ರಕಾರ ಇವಾಗ ಏನ್ಮಾಡ್ಬೇಕು?

ಶಾಸ್ತ್ರಿ: ಇಲ್ಲಿ ಶಾಸ್ತ್ರದ ಪ್ರಕಾರ ಯಾವ್ದೂ ನಡಿಯೋಲ್ಲ. ನಡೀರಿ ಈರಣ್ಣೋರೆ. ನಿಮ್ ಕುಲದಲ್ಲಿ ವಧುಗಳು ಕಾಸ್ಕೊಂದು ಕೊಸರಿಗೆರ್ಡು.

ವರನನ್ನು ಎಳೆದುಕೊಂಡು ನಿಷ್ಕ್ರಮಣ.

ಮಲತಾಯಿ: ಅಯ್ಯೋ ಒಂದ್ ಪಲ್ಲ ಅಕ್ಕಿ ಅನ್ನ ಮಾಡ್ಸಿದ್ದೆ. ಒಂದು ಬಳ್ಳ ಆಲ್ಕೀರ್ ಮಾಡ್ಸಿದ್ದೆ. ಇವುಳ್ ತಿಥಿ ಒತ್ತೀಗಾದ್ರೆ ಎಲ್ಲಾ ಅಳಸೋಗ್‌ತದಲ್ಲಪ್ಪೋ.

ಮಂಟೇಸ್ವಾಮಿ: ಅಮ್ಮಾ ಕಲ್ಯಾಣಮ್ಮ, ಬಿಕ್ಸಾರ್ತಿಗಳಾದ ನಮ್ಗೆ ಕ್ವಾರಣ್ಯ ನೀಡಮ್ಮ.

ಮಲತಾಯಿ: ನಿನ್ ದರಿದ್ರ ಮಕ ನೋಡೇ ಇಂಗಾಗಿದ್ದು. ಎಣಾ ಬಿದ್ದಿರೋ ಮನೇಗ್ ಬಂದು ಬಿಕ್ಸಾ ಕೇಳ್ತಿಯಲ್ಲೋ ನಿನ್ ನಾಲ್ಗೆ ಸೇದೋಗಾ.

ಮಂಟೇಸ್ವಾಮಿ: ಎಣಾ ಬಿದ್ದಿರೋ ಮನೇಲಿ ಧನ ಕೇಳಾಕ್ ನಾನ್ ಬಂದಿಲ್ಲ ಕಣಮ್ಮ. ನಿನ್ನ ಧನ ನಿನ್ಗೇ ಇರ್ಲಿ. ಆ ಎಣವನ್ನ ನಮಗೆ ಬಿಕ್ಸಾ ಕೊಡಮ್ಮ.

ಮಲತಾಯಿ: ಆ ಎಣಾನೇನ್ ಉಪ್ಪಿನಕಾಯ್ ಆಕಂತಿಯೇನು?

ಮಂಟೇಸ್ವಾಮಿ: ಇಲ್ಲಮ್ಮ, ಅದುಕ್ಕೊಂದ್ ಲಗ್ಣ ಮಾಡ್ತೀವಮ್ಮ.

ಮಲತಾಯಿ: ಅಯ್ಯೋ, ಅಯ್ಯೋ, ಅಲ್ ಮಡಗಿದ್ ತಂಗಿನ್‌ಕಾಯ್‌ಗುಳ್ನೆಲ್ಲಾ ಒತ್ಕಂಡೋಗ್ತಾರ್ರಲ್ಲಪ್ಪೋ. ಅಲ್ಯಾವೊಳೊ ಅಡ್ಗೇನೆಲ್ಲಾ ಸಾಗುಸ್ತಾ ಔಳಲ್ಲಪ್ಪೋ. ಯಾವನೋ ಅವ್ನು! ಯಾವಳೋ ಅವ್ಳು!

ಮಲತಾಯಿ ಕೂಗುತ್ತ ನಿಷ್ಕ್ರಮಣ

ಮಂಟೇಸ್ವಾಮಿ: (ದೊಡ್ಡಮ್ಮನ ಶವಕ್ಕೆ) ಅಮ್ಮಾ. ತಾಯಿ ದೊಡ್ಡಮ್ಮ. ನೀನು ಸತ್ತೋಗಿದ್ದಿಯ ಕಣಮ್ಮ. ಉಟ್ಟಿಕ್ ಮೊದ್ಲೆ ಅಮ್ಮ ಸತ್ ಗೋಳ್ಳೊಳ್ಗೆ. ಚಿಕ್‌ಪ್ರಾಯ್‌ದೊಳ್ಗೆ ಅಪ್ಪ ಸತ್ ನೋವೊಳ್ಗೆ. ನಿಮ್ಮ ಚಿಕ್ಕಮ್ಮ ಕೊಟ್ಟ ಚಿತ್ರ ಇಂಸೆ ಒಳ್ಗೆ. ಒಲ್ಲದ ಗಂಡನ್ನ ಕೂಡಬೇಕು ಅನ್ನೋ ಚಿಂತೆ ಒಳ್ಗೆ ವಸಿ ವಸೀನೇ ಸತ್ತೋಗಿದಿಯ ಕಣಮ್ಮ. ಅಮ್ಮಾ ದೊಡ್ಡಮ್ಮ. ಚಂದ್ರಪ್ರಕಾಸನಾಗಿರತಕ್ಕ ನಿನಗೆ ಈ ಸೂರ್ಯ ಪ್ರಕಾಸವಾಗಿರತಕ್ಕ ಗಂಡನ್ನ ತಂದಿದೀವಿ. ಎದ್ದು ಬಾರಮ್ಮ.

ನೀಲಗಾರರು: ಬದುಕಿ ಸತ್ತ ಕಣ್ಣುಗಳಿಗೆ
ಸತ್ತ ಹಂಗೆ ಕಂಡೆಯಮ್ಮ ।
ಸತ್ತು ಬದುಕಿದ ಕಣ್ಣುಗಳಿಗೆ
ಎದ್ದು ಬಾರೆ ನನ್ನ ಮಗಳೆ ।
ನಿದ್ದೆಯನ್ನು ಒದ್ದು ಬಾರೆ ನನ್ನ ಮಗಳೆ ।
ಮೃತ್ಯುವನ್ನು ಗೆದ್ದು ಬಾರೆ ನನ್ನ ಮಗಳೆ ।

ನೀಲಗಾರರು. ಗೆಳತಿಯರು ನೋಡುತ್ತಿದ್ದಂತೆ ದೊಡ್ಡಮ್ಮ ಮೇಲೆದ್ದು ಬರುತ್ತಾಳೆ. ಮಂಟೇಸ್ವಾಮಿ ಅವಳ ಕೈಯನ್ನು ರಾಚಪ್ಪನ ಕೈಯಲ್ಲಿಡುತ್ತಾನೆ.

ನೀಲಗಾರರು: ಕಳಿಸಿಕೊಡಿ ಸಿಸು ಮಗಳ
ಎಳೆ ನಿಂಬೆಯಂತೋಳ
ಲೋಕಪಾಲುಕರ ಅರಮನೆಗೆ ॥
ಕಳಿಸಿಕೊಡಿ ನಿಮ ಮಗಳ
ಸುಳಿ ಬಾಳೆಯಂತೋಳ
ಸೋಕವಿಲ್ಲದ ಗುರುಮನೆಗೆ ॥

ಮಂಟೇಸ್ವಾಮಿ. ರಾಚಪ್ಪ. ದೊಡ್ಡಮ್ಮ ನಿಷ್ಕ್ರಮಣ.

ಮಲತಾಯಿ ಪ್ರವೇಶ.

ಮಲತಾಯಿ: ಅಯ್ಯೋ, ಅಯ್ಯೋ ಬರ್‍ರಪ್ಪೋ. ನಿಮ್ ಕಣ್‌ಗುಳೇನ್ ಬಿದ್ದೋಗಿದ್ದಾವಾ? ಸತ್ತೋಳಂಗೆ ಆಟಾ ಮಾಡಿ ಈ ಮುಂಡೆ ಮಿಂಡ್‌ಗಾರನ್ ಜೊತೆ ಓಯ್ತಾ ಅವ್‌ಳಲ್ಲಪ್ಪೋ.

ನೀಲಗಾರ ೧: ಅವ್ವೋ, ಇದು ನಾಟ್ಕ. ಅಷ್ಟು ಜೋರಾಗಿ ಬಾಯ್ ಬಡ್ಕಬೇಡ.

ನೀಲಗಾರ ಅವಳ ಬಾಯಿ ಮುಚ್ಚಿ ರಂಗವಾಚೆ ಕರೆದೊಯ್ಯುತ್ತಾನೆ.

ನೀಲಗಾರರು: ಮಂಟೇದ ಸ್ವಾಮಿ ಬನ್ನಿ
ನಿರ್ವಾಣ್ಯದ ಗುರುಲಿಂಗಯ್ಯ ನೀವೆ ಬನ್ನಿ ॥

ನೀಲಗಾರ ೧: ಕಾಗಿನೆಲೆಯಲ್ಲಿ ಧರೇಗೆ ದೊಡ್ಡೋರು ಮಹಾಮಾತೆ ದೊಡ್ಡಮ್ಮನೋರ್ಗೆ, ಬೂಮಿ ತೂಕದ ರಾಚಪ್ಪನ್ನ ಲಗ್ನ ಮಾಡಿ ಅಲ್ಲಿಂದ ಬಿನ್ನಾಕ್ನಳ್ಳಿ, ಮಳವಳ್ಳಿ, ಮಾರಳ್ಳಿ ಇಂತಿಂತಾ ಊರುಗಳಲ್ಲಿ ಪವಾಡಗಳನ್ನ ಮೆರೀತಾ ಎಲ್ಲಿಗೆ ಬಂದ್ರುಪ್ಪಾ ಅಂದ್ರೆ, ಕುಂದೂರ್ ಬೆಟ್ಟಕ್ ಬಂದ್ರು.

ನೀಲಗಾರರು: ಕುಂದೂರು ಬೆಟ್ಟದ್ ಮ್ಯಾಕೆ
ನಿಂತುಕೊಂಡ್ರು ನಮ್ಮ ಗುರುವು
ನಾಲ್ಕು ದಿಕ್ಕ ನೋಡುತಾರೆ
ಏಗದಿಟ್ಟಿ ಮಡಗುತಾರೆ ।

ಕುಂದೂರು ಬೆಟ್ಟವನ್ನು
ನಮ್ಮ ಸ್ವಾಮಿ ಇಳುಗುತಾರೆ
ಸಿಸು ಮಕ್ಕಳ ಕರಕೊಂಡು
ಕಾಡಂಕಳ್ಳಿ ಗೋಗುತಾರೆ ॥

ಕುರುಬ ಬೊಪ್ಪನ ಗೌಡನನ್ನ
ಒಕ್ಕಲಾಗಿ ಮಾಡುತಾರೆ
ಮಾಚಿದೇವನ ಉಬ್ಬೆ ಮ್ಯಾಗೆ
ಗುರು ಮಠವ ಕಟ್ಟುಸ್ತಾರೆ ।
ಮಂಟೇದ ಸ್ವಾಮಿ ಬನ್ನಿ ।
ಪರಂಜೋತ್ಯಾ ಲಿಂಗಯ್ಯ ನೀವೆ ಬನ್ನಿ ॥

ನೀಲಗಾರ ೧: ಕುರುಬ ಬೊಪ್ಪನ ಗೌಡನನ್ನು ಒಕ್ಕಲಾಗಿ ಮಾಡಿಕೊಂಡು ಮಾಚಿದೇವನ ಉಬ್ಬೆ ಮನೆ ಮ್ಯಾಗೆ ಗುರುಮಠ ಕಟ್ಟಿಸ್‌ಕಂಡು ಧರೇಗೆ ದೊಡ್ಡೋರು ಮೂರ್ತಾ ಮಾಡ್ತಾವ್ರೆ.

ಭಾಗ - ೨

ನೀಲಗಾರರು: ಮಂಟೇದಸ್ವಾಮಿ ಬನ್ನಿ ।
ಕಂಡಾಯದೊಡೆಯ ।
ಗುರುಲಿಂಗಯ್ಯ ನೀವೆ ಬನ್ನಿ ॥

ನೀಲಗಾರ: ಇತ್ತ ರಾಜಬೊಪ್ಪಣಪುರದೊಳಗೆ ನಮ್ಮ ಗುರುಸ್ವಾಮಿಯೋರು ಗುರುತರವಾದ ಗುರುಮಟವನ್ನು ಕಟ್ಟಿಸ್ಕೊಂಡು ಒಂದ್ ಜಿನ ಬಂಗೀಫಳಾರವನ್ನ ಮಾಡ್ತಿದ್ದ ವ್ಯಾಳೆಯಲ್ಲಿ ದಂಪತಿಗಳಾದ ದೊಡ್ಡಮ್ನೋರು, ರಾಚಪ್ನೋರು ಇನೋದದಿಂದ ಚೌಕಾಬಾರಾ ಆಡ್ತ ಕುಂತೌರೆ.

ರಾಚಪ್ಪಾಜಿ. ದೊಡ್ಡಮ್ಮ ಪ್ರವೇಶ. ಹಿಂದೆ ಸ್ವಲ್ಪ ದೂರದಲ್ಲಿ ಮಂಟೇಸ್ವಾಮಿ ಪ್ರವೇಶ.

ದೊಡ್ಡಮ್ಮ: (ಚಪ್ಪಾಳೆ ತಟ್ಟಿ) ಇಕಾ ನನ್ ಕವ್ಡೆ ಚೌಕಾ ಬಿತ್ತು! ಮೇಲ್ಮೂರು!

ರಾಚಪ್ಪ: ಇಕಾ ಇಕಾ ಇಕಾ ನಂದೆಂಟು! ಬಾರಾ ಬಿತ್ತು! ಮೇಲೆ ಚೌಕಾ, ಮೇಲೆ ಎಲ್ಡು.

ದೊಡ್ಡಮ್ಮ: ಅಯ್ಯೊ ನನ್ ಕಾಯ್ ಮನೆಗ್ಬಂತು.

ರಾಚಪ್ಪ: ಚೌಕಾ, ಚೌಕಾ, ಚೌಕಾ, ಅಯ್ಯೋ ಒಂದು!

ದೊಡ್ಡಮ್ಮ: ಮೂರು, ಮೂರು, ಮೂರು, ಮೂರ್ ಬಿತ್ತು. ನಿನ್ ಕಾಯ್ ಮನೇಗೋಯ್ತು. ಎರ್ಡು, ಎರ್ಡೂ, ಎರ್ಡೂ ಅಣ್ಣಾಯ್ತು, ನನ್ ಕಾಯ್ ಅಣ್ಣಾಯ್ತು.

ರಾಚಪ್ಪ: ನನ್ ಕಾಯೂ ಅಣ್ಣಾಯ್ತು.

ದೊಡ್ಡಮ್ಮ: ಅದೆಂಗೆ?

ರಾಚಪ್ಪ: ನಿನ್ ಕಾಯ್ ಅಣ್ಣಾದ್ರೆ ನನ್ ಕಾಯೂ ಅಣ್ಣಾದಂಗೇ.

ದೊಡ್ಡಮ್ಮ: ಉಶ್! ಗುರ್‌ಗಳ್ ಕೇಳುಸ್ಕಂಡಾರು, ಮೆತ್ತಗೆ.

ಮಂಟೇಸ್ವಾಮಿ: (ತಟ್ಟನೆ ಎದ್ದು) ಕಂದ ರಾಚಪ್ಪಾಜಿ, ಕಂದ ದೊಡ್ಡಮ್ಮಾಜಿ, ನಿಮ್ಮಾಟದ್ ಪಾಟ ನಮ್‌ಗರುವಾಯ್ತುಪ್ಪ. ನಮ್ದೂ ಒಂದು ಅಣ್ಣಾಗದ ಕಾಯ್ ಉಳ್ ಕಂಡೈತೆ.

ರಾಚಪ್ಪ: ಅದು ಯಾವ್ ಮರುದ್ ಕಾಯಿ ಗುರುಗಳೇ?

ಮಂಟೇಸ್ವಾಮಿ: ಈ ದರೆ ಉಟ್‌ದಾಗಿಂದ ಕಾಯ್ತಾ ಇರುವಂತ ಮರದ ಕಾಯಿ ಕಣಪ್ಪ. ಅದು ನಮಕೋಸ್ಕರ ಕಾಯ್ಕಂಡೈತೆ. ಆ ಅಣ್ಣೊಳ್ಗೆ ಇನ್ನೊಂದು ದರೆಯಗಲದ ಮರದ ಬೀಜ ಮೊಳೀತಾ ಐತೆ.

ತನ್ನ ಜೋಳಿಗೆ-ಕಂಡಾಯ-ಭಿಕ್ಷಾಪಾತ್ರೆ ಎಲ್ಲವನ್ನು ಸಿದ್ಧಮಾಡಿಕೊಂಡು ಹೊರಡಲನುವಾಗುತ್ತಾನೆ.

ದೊಡ್ಡಮ್ಮ: ಆ ಅಣ್ಣು ಯಾವ್ ತ್ವಾಟದಲ್ಲಿ ಸಿಕ್ತದೆ? ಯಾವ ಕೊಂಬೇಲಿ ಬಿಟ್ಟದೆ

ಮಂಟೇಸ್ವಾಮಿ: ಆ ಅಣ್ಣು ಬಿಟ್ಟ ಮರ ಗುರುವಿಂದ್ಯದಲ್ಲಿ ಬೆಳೀಬೇಕಾದ್ದು ನರವಿಂದ್ಯದಲ್ಲಿ ಬೆಳುದ್‌ಬುಟ್ಟದೆ ನನಕಂದ. ಮಗ ರಾಚಪ್ಪಾಜಿ, ನಿನ್ನ ನಾವು ಕಲ್ಯಾಣದಿಂದ ಕರ್ಕಂಬತ್ತಾ ಇದ್ದಾಗ, ಬಾಕ್ಲಲ್ಲೊಬ್ಬನ್ನ ಸಿಸು ಮಗನ್ನ ಮಾಡ್ಕ ಅಂತ ಏಳಿದುದ ಗೆಪ್ತಿ ಅದಾ ಕಂದ?

ರಾಚಪ್ಪ: ಅದೇ, ಆ ಬಾಚಿ ಕಾಯಕದ ಬಸವಯ್ಯ.

ಮಂಟೇಸ್ವಾಮಿ: ಅವ್ನೇ. ತನ್ನ ಏಳನೇ ಜನ್ಮದಲ್ಲಿ ಮಳವಳ್ಳಿ ತಾಲ್ಲೂಕ್ ನಿಡುಗಟ್ಟ ಗ್ರಾಮದಲ್ಲಿ ಆರು ಮಕ್ಕಳ ಸಂತಾನವನ್ನು ಪಡೆದಿದ್ದ ಮುದ್ದೋಜಿ-ನಿಂಗಮ್ಮ ಅನ್ನತಕ್ಕಂತ ದಂಪತಿಗೋಳ್ಗೆ ಏಳನೇ ಮಗನಾಗಿ ಜನ್ಮ ಸೌನೆ ಕನಪ್ಪ. ಇದು ಅರುವಾದಾಗಿಂದ ನಮ್ಮ ಕಳ್ಳು ಬಾದುಸ್ತಾದೆ ಕನಪ್ಪ.

ನೀಲಗಾರರು: ಸಿಸುವ ತಾಯಿ ನೆನೆಯುವಂಗೆ.
ಸಿಸು ಮಗನನು ನೆನೆಯುತಾರೆ ।
ಸಿಸುಮಗ ಕೆಂಪಣ್ಣನನ್ನ
ಕರೆದು ತರಲು ಒಲ್ಡುತಾರೆ ।
ಹೆಗಲ ಮೇಲೆ ಕಂಡಾಯ
ತಲೆಮ್ಯಾಗೆ ಕಾವಿಪೇಟ
ಕೊಳ್ಳರುದ್ರಾಕ್ಷಿ ಮಾಲೆ
ಬಂಗಿಸೊಪ್ಪು ಒಗೆಸೊಪ್ಪ
ಚಿಲುಮೆ ಒಳ್ಗೆ ತುಂಬಿಕೊಂಡು ।
ಮಂಟೇದಸ್ವಾಮಿ ಬನ್ನಿ

ಕಲ್ಯಾಣದೊಡೆಯ.....
ಗುರುಲಿಂಗಯ್ಯ ನೀವೆ ಬನ್ನಿ ॥

ನೀಲಗಾರ ೧: ಬಂಗೀಸೊಪ್ಪು, ಒಗೇಸೊಪ್ಪು ಚಿಲ್ಮೆ ಒಳ್ಗೆ ತುಂಬ್ಕಂಡು ಎಡದ ಕೈಯೊಳಗೆ ಬಿಕ್ಸಾ ಪಾತ್ರೆನ ಇಡಕಂಡು ಆ ಬಿಕ್ಸಾ ಪಾತ್ರೆಯೊಳಗೆ ತಮ್ ಜೀವಾನೆ ತುಂಬ್ಕಂಡು ನಿಡುಗಟ್ಟ ಗ್ರಾಮಕ್ಕೆ ಬಂದು ಕೇರಿ ಕೇರಿ ಸುತ್ತಿ ಓಜರ ಓಣಿ ಒಳಗೆ ರಾಜರಾಣಿಯಂಗ್ ಬಾಳ್ತಾ ಇರುವಂತ ಮುದ್ದೋಜಿ ನಿಂಗಮ್ಮನ ಮನೆ ತಾವು ಕ್ವಾರಣ್ಯ ಸಾರ್ಕಂಡು ಬತ್ತಾವ್ರಲ್ಲಪ್ಪ ಧರೆಗೆ ದೊಡ್ಡೋರು.

ನೀಲಗಾರರು: ಸಿಸುಮಗನೆ ಎಲ್ಲಿದ್ದೀಯೊ
ಬಾಗ್ಯಸಾಲಿ ಕೆಂಪಣ್ಣ ।
ಎಸವ ತಂದು ಕೊಡುವ ಮಗನೆ
ಬಾಗ್ಯಸಾಲಿ ಕೆಂಪಣ್ಣ ।
ನಿನ್ನ ಮರಿಯ ಮಾಡಬೇಕು
ಪವಾಡ ಗೆಲ್ಲಬೇಕು ।
ಸಿಸುಮಗನೆ ಎಲ್ಲಿದ್ದೀಯೊ
ಬಾಗ್ಯಸಾಲಿ ಕೆಂಪಣ್ಣ ।
ಕರೆದರೂ ಓ ಅನ್ನನಾರೆ
ಬಾಗ್ಯಸಾಲಿ ಕೆಂಪಣ್ಣ ।
ಮರೆತು ನಿನ್ನ ಬದುಕಲಾರೆ
ಬಾಗ್ಯಸಾಲಿ ಕೆಂಪಣ್ಣ ।

ರಂಗದ ಇನ್ನೊಂದು ಭಾಗದಲ್ಲಿ ಕೆಂಪಣ್ಣ ಕುಲಮೆ ಬಳಿ ಆಳುಗಳಿಂದ ಕೆಲಸ ಮಾಡಿಸುತ್ತ ಕೂತಿದ್ದಾನೆ.

ನೀಲಗಾರ ೧: ಅಗೋ ಅಲ್ಲಿ ಕೂತೌನ್ನೋಡಿ. ಅವ್ನೇ ಕೆಂಪಣ್ಣ.
ಮಂಟೇಸ್ವಾಮಿ: ಅಪ್ಪಾ ನೀಲಗಾರ್ರು, ಅವನ್ ನೋಡ್ತಾ ಇದ್ರೆ ನಮ್ಮ ಮನಸ್ಸು ಉಕ್ತದಲ್ಲಪ್ಪ.
ನೀಲಗಾರರು: ಚಂದ್ರನಂಗೆ ಹೊಳೆಯುತಾನೆ
ಸೂರ್ಯನಂಗೆ ಸುರಿಯುತಾನೆ
ಪಟ್ಟೆ ಪೀತಾಂಬರ ಮೈಯ್ಯತುಂಬ ।
ಕತ್ತಿನೊಳಗೆ ಕಂಠೀಹಾರ

ಮುತ್ತಿನ ಕಿರೀಟ ನೆತ್ತಿಮ್ಯಾಲೆ
ಚೊಕ್ಕ ಚಿನ್ನ ಕಡಗ ಕೈಯಲ್ಲಿ ॥

ಮಂಟೇಸ್ವಾಮಿ: ನಾನೇ ಕೂಗಿ ಅವುನ್ನ ಮಾತಾಡಿಸ್ತೀನಿ.
ಕ್ವಾರಣ್ಯ ಧರ್ಮ ಗುರುವೇ....

ಕೆಂಪಣ್ಣ: (ಗಮನಿಸುವುದಿಲ್ಲ)

ಮಂಟೇಸ್ವಾಮಿ: ಕ್ವಾರಣ್ಯ ಬಿಕ್ಸಾ....

ನೀಲಗಾರರು: ದಾನಮಾಡಿದವನ ಮನೆಗೆ
ಮಾನ ಹೊನ್ನು ದೊರಕಲಮ್ಮ ।
ಅನ್ನ ನೀಡಿದವರ ಮನೆಗೆ
ಪುಣ್ಯ ಕೋಟಿ ದೊರಕಲಮ್ಮ ।
ಬಿಕ್ಸೆ ನೀಡಿದವರ ಮನೆಗೆ
ಲಕ್ಸ ಸುಕವು ಸಿಕ್ಕಲಮ್ಮ ॥

ಕೆಂಪಣ್ಣ: ಏ, ನಿಲ್ಲೊ ! ಕೆಲ್ಸ ಮಾಡ ಜಾಗಕ್ ಬಂದು ಯಾವನೋ ಅವ್ನು ಪದ ಏಳ್ತಿರೋನು?

ಮಂಟೇಸ್ವಾಮಿ: ನಾನ್ ಕಣಪ್ಪ ಮಗ.

ಕೆಂಪಣ್ಣ: ಎಲಾ ನನ್ಮಗನೇ. ನನ್ನೇ ಮಗಾ ಅನ್ನುವಷ್ಟು ಕೊಬ್ಬೇನೊ ನಿಂಗೆ?

ಮಂಟೇಸ್ವಾಮಿ: ಅಪ್ಪಾ....

ಕೆಂಪಣ್ಣ: ಅಂಗ್ ಬಾ ದಾರೀಗೆ.

ಮಂಟೇಸ್ವಾಮಿ: ಅಪ್ಪಾ, ಒಂದು ಸಣ್ಣ ಬಿಕ್ಸಾ ಬೇಡಾಕ್ ಬಂದಿದೀನಿ. ಅದನ್ನ ನೀಡಿ ಕಳ್ಸಿದ್ರೆ ನನ್‌ದಾರಿ ನಾನಿಡ್ಕಂಡು ಒಂಟೋಯ್ತಿನಿ ಕನಪ್ಪ.

ಕೆಂಪಣ್ಣ: ಅಲ್ಲಾ ಕಣೋ ಜಂಗಮ, ಮನೆ-ಮಠುಕ್ ಓಗಿ ಬಿಕ್ಸಾ ಕೇಳ್ದೆ ಕುಲ್ಮೇತಕ್ ಬಂದು ಬಿಕ್ಸ ಕೇಳ್ತಿಯಲ್ಲಾ? ನಿನ್ನ ಮಕಕ್ಕೇನ್ ಚಿನ್ನ ಬೇಕಾ? ಬೆಳ್ಳಿ ಬೇಕಾ?

ಮಂಟೇಸ್ವಾಮಿ: ಚಿನ್ನದ್ ಬಿಕ್ಸಕ್ಕಾಗಿ ನಾವ್ ಬಂದಿಲ್ಲಪ್ಪ.

ಕೆಂಪಣ್ಣ: ಅಂಗಿದ್ರೆ ಮಣ್ ತಿನ್ನಕ್ ಬಂದ?

ಮಂಟೇಸ್ವಾಮಿ: ಚಿನ್ನ, ಬೆಳ್ಳಿ, ಬಿಕ್ಸ ಬೇಡ. ನಿನ್ನ ಬಿಕ್ಸವನ್ನೇ ನಮಗೆ ನೀಡಪ್ಪ.

ಕೆಂಪಣ್ಣ: (ಜೋರಾಗಿ ನಗುತ್ತಾನೆ) ಅಲ್ಲಾ ಕಣೋ ಮುಂಡೆಮಗನೇ ನೀನೇನ್ ಎಂಡಾ ಕುಡ್ಡಿದಿಯೋ. ಬಂಗಿ ಸೇದಿದಿಯೋ? ನನ್ನ ಬಿಕ್ಸೆ ಬೇಕೂಂದ್ರೆ ಏನೋ?

ಮಂಟೇಸ್ವಾಮಿ: ನಾನ್ ನಿನ್ಗೆ ಗುರುವಾಗ್ತೀನಿ. ನೀನು ನನಗೆ ಸಿಸ್ಯನಾಗಪ್ಪ.

ಕೆಂಪಣ್ಣ: ಎಲಾ ಇವ್ನ, ಅಂಗಂದ್ರೇನೋ?

ಮಂಟೇಸ್ವಾಮಿ: ನಾ ನಿನಗೆ ಗಂಡನಾಗ್ತೀನಿ. ನೀ ನನಗೆ ಎಡ್ತೀ ಆಗಪ್ಪ.

ಕೆಂಪಣ್ಣ: ಏನಂದೆ? ಗಂಡರ ಗಂಡನಾದ ನಾನು ನಿನಗೆ. ತಿರ್‌ಬೋಕಿಗೆ ಎಡ್ತೀ ಆದೇನಾ? ಅಲ್ಲಾ ಕಣೋ ಪರ್‌ದೇಸಿ. ನಾನ್ ಮಾಡಿಕೊಟ್ಟ ತಾಳಿಸರ ಕಟ್ಟಿದ ಮ್ಯಾಗೆ ಈ ಲೋಕದೊಳ್ಗೆ ಗಂಡದಿರ್‍ಗೆ ಎಡ್ತೀದೀರು ಆಗ್ತಾರೆ. ಈ ಲೋಕದ ಗಂಡ್ದೀರ್‍ಗೆಲ್ಲ ಗಂಡ ನಾನು. ನಾನೆಂಗೋ ಎಡ್ತೀ ಆಗ್ತೀನಿ ನಿಂಗೆ?

ಮಂಟೇಸ್ವಾಮಿ: ನಾನು ಸಿಸ್ಯನಾಗು ಅನ್ನೋಕ್ ಮೊದ್ಲು ನೀನೇ ನಮ್ಮನ್ನ ಗುರುವಾಗೂ ಅಂತ ಕೇಳ್ಕಂಡಿದ್ದೆ ಕನಪ್ಪ.

ಕೆಂಪಣ್ಣ: ಅಂಗಂತ ನಿಂಗೆ ಕನ್ಸು ಬಿದ್ದಿರ್‌ಬೇಕು.

ಮಂಟೇಸ್ವಾಮಿ: ಕನಸ್ ಕಾಣ್ತಾ ಇರೋ ನಿನ್ಗೆ ನಾವೇಳಿದ್ದು ಕನಸ್‌ನಂಗೇ ಕಾಣ್ತಿರ್‌ಬೇಕು. ಅಪ್ಪಾ ಕೇಳು. ನಿನ್ನ ಆರನೇ ಜನ್ಮದಲ್ಲಿ ಆದಿಕಲ್ಯಾಣದ ಬಾಕುಲ್ ಕಾಯ್ಕಂಡಿದ್ದ ನೀನು ನಮ್ಮ ಸಿಸು ಮಗನಾಗ್ತೀನಂತ ಕೇಳ್ಕಂಡಿದ್ದೆ. ನಿನಗಿನ್ನೂ ವ್ಯಾಳೆ ಬಂದಿಲ್ಲ. ಏಳನೇ ಜನ್ಮದಲ್ಲಿ ಉಟ್ಟಿ ಬಾ. ಆಗ ಮಾಡ್ಕತೀವಿ ಅಂತ ನಾವು ನಿನಗೆ ಬಲಗೈ ಬಾಸೆ ಕೊಟ್ಟಿದ್ವು. ಆವಾಗ ಗುರು ಬುದ್ದಿಯೊಳಗಿದ್ದ ನೀನು ಈವಾಗ ದುರ್‌ಬುದ್ದಿಯೊಳಗೆ ಬಿದ್ದಿದ್ದೀಯಲ್ಲ ಕೆಂಪಣ್ಣ.

ಕೆಂಪಣ್ಣ: ಬೊ ಚಂದಾಗದೆ ಕಣೋ ನಿನ ಕಂತೆ ಪುರಾಣ. ಅದು ಸರಿ ನಾನು ನಿನ್ಗೆ ಸಿಸ್ಯನಾದ್ರೆ ನನ್ ತಾವಿರೋ ಈ ಸಂಪತ್‌ಗಿಂತಾ ಮೀರಿದ್ ಸಂಪತ್ ಏನ್ ಕೊಟ್ಟಿಯೋ ನನಗೆ?

ಮಂಟೇಸ್ವಾಮಿ: ಇದುಕ್ಕಿಂತ ಮೀರಿದ್ ಸಂಪತ್ ಕೊಡ್ತೀವಿ ಕನಪ್ಪ.

ಕೆಂಪಣ್ಣ: ಅದ್ಯಾವುದೋ ಇದುನ್ನೂ ಮೀರಿದ್ ಸಂಪತ್ತು?

ನೀಲಗಾರರು: ಏಗಲು ಮ್ಯಾಗೆ ಅರುಕು ಜೋಳ್ಗೆ
ಕಾಲುಗಳಿಗೆ ಮುರುಕು ಅವುಗೆ
ರುದ್ರಾಕ್ಸಿ ಮಾಲೆ ಕೊಳ್ಳತುಂಬ
ಅಣೆಮ್ಯಾಗೆ ಈಬತ್ತಿ ಪಟ್ಟೆ
ಎಡದ ಕೈಲಿ ಬಾರಿ ಕಂಡಾಯ
ಬಲದ ಕೈಲಿ ತಿರುಪೆ ಪಾತ್ರೆ
ಇಂತ ಬಾಗ್ಯ ನೀಡುತೀವಿ
ಊರುಕೇರಿ ಅಲೆಸಿ ನಿನ್ನ,
ಮನೆ ಮನೇ ಬಾಗಿಲ ಮುಂದೆ
'ಕ್ವಾರಣ್ಯ' ಅನಿಸುತೀವಿ.

ಮಂಟೇಸ್ವಾಮಿ: ಅಪ್ಪಾ, ಈ ತಿರ್‌ಕಂಡ್ ತಿನ್ನದಕಿಂತಾ ಸಿರಿವಂತಿಗೆ ಯಾವುದಿದ್ದದಪ್ಪಾ ಈ ಲೋಕದೊಳ್ಗೆ?

ಕೆಂಪಣ್ಣ: ಲೋ ತಿರ್‌ಬೋಕಿ. ನಿನ್ ತಾವ ಬಾಯಿಗ್ ಬಂದಂಗೆ ಮಾತಾಡ್ಕಂಡಿರಾಕೆ ನನ್ಗೆ ವ್ಯಾಳೆ ಇಲ್ಲ. ಇನ್ನೊಂದ್ಕಿತ ಈ ಕಡೀಕೇನಾದ್ರೂ ಸುಳ್ದೆ ಅಂದ್ರೆ ನನ್ನ ಜೀತದಾಳುಗಳ ಕೈಲಿ ನಿನ್ನ ಮೂಳೆ ಮುರುಸ್‌ಬುಡ್ತೀನಿ. ಮರ್ವ್ಯಾದೆಯಿಂದ ಇಲ್ಲಿಂದ ತೊಲಗು.

ಮಂಟೇಸ್ವಾಮಿ: ಓಯ್ತೀನಿ ಕನಪ್ಪ. ಇಲ್ಲೂ ನಮ್ಮಾಸೆ ಪೂರೈಸ್ಲಿಲ್ಲ. ಅಪ್ಪ ಕೆಂಪಣ್ಣ, ಶಾನೆ ದೂರದಿಂದ ಚಳಿ ಒಳ್ಗೆ ನಡ್ಕಂಬಂದಿದೀವಿ, ಮೈ ನಡಗ್ತಾ ಅದೆ, ಬಂಗೀ ಊಟ ಮಾಡ್ಬೇಕು, ವಸಿ ಕೆಂಡಾನಾದ್ರೂ ಬಿಕ್ಸೆ ಕೊಡಪ್ಪ.

ಕೆಂಪಣ್ಣ: ಎಲಾ ಬೊಡ್ಡಿ ಹೈದಾ. ನನ್ನ ಕುಲುಮೆ ತಾಕ ಬಂದು, ಕೆಲ್ಸ ಕೆಡ್ಸಿ ಕೆಂಡದ ಬಿಕ್ಸೆ ಕೇಳ್ತೀಯ. ತಕ, ಕೊಡ್ತೀನಿ.

ತನ್ನ ಇಕ್ಕಳದಿಂದ ಬ್ಯಾಲದ ಗಾತ್ರದ ಕೆಂಡ ತೆಗೆದು

ಕೆಂಪಣ್ಣ: ಅಂಗೈಯೊಡ್ಡಿ ಬಿಕ್ಸಾ ತಕೊಳ್ಳೊ ನನ್‌ಮಗನೆ.

ಮಂಟೇಸ್ವಾಮಿ ಅಂಗೈಯೊಡ್ಡಿ ಅದನ್ನು ಈಸಿಕೊಂಡು ಬಂಗಿ ಹಚ್ಚಿಕೊಳ್ಳುವನು. ಆಳುಗಳು ನೋಡಿ ಗಾಬರಿಯಿಂದ ನಿಷ್ಕ್ರಮಣ.

ಮಂಟೇಸ್ವಾಮಿ: (ಹೊಗೆ ಬಿಡುತ್ತ) ಅಪ್ಪಾ ಕೆಂಪಣ್ಣ, ಈ ಕೆಂಡ ನಮಗಿರ್ಲಿ, ಈ ಒಗೆ ನಿನ್ಗಿರ್ಲಿ.

ನೀಲಗಾರರು: ಅಂಗೈಯೊಳಗೆ ಕೆಂಡ ಹಿಡಿದು
ಬಂಗಿ ಸೊಪ್ಪ ಒತ್ತಿಸಿಕೊಂಡು
ಅದರ ಒಗೆಯ ಉರುಬುತಾರೆ
ಕೆಂಪಣ್ಣನ ಮೊಕದಮ್ಯಾಲೆ ॥
ವಾಲಾಡುತಾನೆ ಕೆಂಪಾಚಾರಿ
ಮ್ಯಾಲೆ ಕೆಳೀಕೆ ನೋಡುತಾನೆ
ತೇಲುಗಣ್ಣು ಮೇಲುಗಣ್ಣು
ನೀಲಿಗ್ಯಾನದಿ ತಿರುಗುತಾನೆ ॥

ಕೆಂಪಣ್ಣ ಹುಚ್ಚನಂತೆ ನಗತೊಡಗಿ ತನ್ನ ಆಭರಣಗಳನ್ನು ಕಿತ್ತು ಚೆಲ್ಲಾಪಿಲ್ಲಿ ಮಾಡಿಕೊಳ್ಳುತ್ತಾನೆ.

ಮಂಟೇಸ್ವಾಮಿ: ಯಾಕಪ್ಪಾ ಇಂಗಾಡೀಯ ಕೆಂಪಣ್ಣ?

ಕೆಂಪಣ್ಣ ಹುಚ್ಚುಚ್ಚಾಗಿ ಕುಣಿಯುತ್ತಾನೆ.

ಮಂಟೇಸ್ವಾಮಿ: ಅಪ್ಪಾ ಕೆಂಪಣ್ಣ. ನೀನು ಗಂಡರ ಗಂಡ. ಆ ಕಟ್ಟೆ ಮ್ಯಾಗೆ ವಸಿ ನಿಂತ್ಕಳಪ್ಪ.

ಕೆಂಪಣ್ಣ: ಹಿಹ್ಹಿಹೀ... ನಾನು ಗಂಡರ ಗಂಡ. (ಕಟ್ಟೆ ಮೇಲೆ ನಿಲ್ಲುತ್ತಾನೆ)

ಮಂಟೇಸ್ವಾಮಿ: ಅಲ್ಲಿಂದ ಏನ್ ಕಂಡೇದಪ್ಪ?

ಕೆಂಪಣ್ಣ: ಅಯ್ಯಯ್ಯೋ, ನಮ್ ಅಟ್ಟೀ ಮ್ಯಾಗೆ ಅದ್ದೂ ಕಾಗೆ ಆಡ್ತಾವೆ.

ಮಂಟೇಸ್ವಾಮಿ: ಇಲ್ಲ ಕನಪ್ಪ ಕೆಂಪಣ್ಣ. ನಿನ್ನಟ್ಟೀ ಮ್ಯಾಗೆ ಚಿನ್ನದ ಮೋಡ ತೇಲ್ತಿತ್ತು. ನಾನು ಕಣ್ಣಾರೆ ನೋಡ್ಕಂಬಂದಿದೀನಿ.

ಕೆಂಪಣ್ಣ: ಸುಳ್ಳು! ಅದ್ದು, ಕಾಗೆ, ಗೂಬೆ.

ಮಂಟೇಸ್ವಾಮಿ: ಇನ್ನೇನು ಕಂಡದಪ್ಪ ಕೆಂಪಣ್ಣ?

ಕೆಂಪಣ್ಣ: ನಾವ್ ಕಟ್ಟಿದ್ ಮನೆ ಬಿದ್ದೋಗದೆ.

ಮಂಟೇಸ್ವಾಮಿ: ಸರಿಯಾಗ್ ನೋಡಪ್ಪ ಕೆಂಪಣ್ಣ, ನಿನ್ ಮನೇಗೆ ಚಿನ್ನದ ಕಂಬ, ರನ್ನದ ಜಂತೆ ಇನ್ನೂ ಅದೆ ನೋಡಪ್ಪ. ಚೆನ್ನಾಗಿ ನೋಡಪ್ಪ.

ಕೆಂಪಣ್ಣ: ಸುಳ್ಳು! ಸುಳ್ಳು! ಬಿದ್ದೋಗದೆ.

ಮಂಟೇಸ್ವಾಮಿ: ಅಂಗೆ ನಿಮ್ಮಪ್ಪ ಅಮ್ಮ ಏನ್ಮಾಡ್ತಾವ್ರೆ ನೋಡಪ್ಪ.

ಕೆಂಪಣ್ಣ: ಇಬ್ರೂ ಸತ್ ಮನಗೌರೆ.

ಮಂಟೇಸ್ವಾಮಿ: ಇಲ್ಲ ಕಣಪ್ಪ ಕೆಂಪಣ್ಣ, ನಿಮ್ ತಂದೆ ತಾಯಿ ಗುಂಡ್‌ಕಲ್ ಇದ್ದಂಗೌರೆ ಸರೀಗ್ ನೋಡಪ್ಪ.

ಕೆಂಪಣ್ಣ: ಸುಳ್ಳು, ಸುಳ್ಳು, ಎಲ್ಲ ಸುಳ್ಳು.

ನೀಲಗಾರರು: ಹಟ್ಟಿ ಹಾಳಾಗಿ ಹೋಯ್ತು
ಕೊಟ್ಟಿಗೆ ಬೀಳಾಗಿ ಹೋಯ್ತು
ಕಟ್ಟಿದ್ದ ಮನೆ ಬಿದ್ದು ಹೋಯ್ತು
ಇಟ್ಟ ಧನ ಕರಗಿ ಓಯ್ತು ॥

ನೀಲಗಾರ ೧: ಇವೆಲ್ಲ ಆದಂಗೆ ಕಂಡ ಕೆಂಪಾಚಾರಿಗೆ ನೀಲಿಗ್ಯಾನ ಅನ್ನೋದು ಇನ್ನೂ ಜೋರಾಗದೆ. ಅವತ್ತಿಂದ ಅವ್ನು ನಿಂತ್ಕಂಡ್ ತಾವ ನಿಂತ್ಕಳ್ನಾರ, ಕುಂತ್ಕಂಡ್ ತಾವ ಕುಂತ್ಕಳ್ನಾರ, ಕಂಡ್ ಕಂಡರ್‌ಗೆಲ್ಲ ಕಲ್ಸಿಸಿತಾನೆ, ಗಳೀಗ್ಗೊಂದು ಗ್ಯಾನ, ಗಂಟೇಗೊಂದ್ ಬುದ್ದಿ.

ಮಂಟೇಸ್ವಾಮಿ: ಅಪ್ಪಾ ಕೆಂಪಣ್ಣ, ನಿನ್ ತಂದೆ ತಾಯಿ ಅಣ್‌ಗುಳು ಮನೆ ಒಳ್ಗೆ ಕಾಯ್ಕಂಡೌರೆ. ಇಂದಕ್ ತಿರ್ಗಿ ಮನೇಗೋಗು ನಾವು ಮುಂದುಕ್ ಓಯ್ತೀವಿ.

ಕೆಂಪಣ್ಣ: ಹಿಹಿಹ್ಹೀ. ನೀನು ಮುಂದೇ ಓಗು... ನಾನ್ ಇಂದೇ ಬತ್ತೀನಿ.

ನೀಲಗಾರರು: ನೀನು ಮುಂದೆ ನಾನು ಇಂದೆ
ಓದತಾಕೆ ನಾನು ಬಂದೆ

ನಡಿಯೋ ಮುಂದೆ
ಬರುವೆನು ಹಿಂದೆ
ಮುಂದೆ ಮುಂದೆ ಮುಂದೆ ಮುಂದೆ
ಹಿಂದೆ ಹಿಂದೆ ಹಿಂದೆ ಹಿಂದೆ

ಮಂಟೇಸ್ವಾಮಿ ಕುಂತಲ್ಲಿ ಕುಂತು. ನಿಂತಲ್ಲಿ ನಿಂತು. ನಡೆದಲ್ಲಿ ನಡೆದು ಕೆಂಪಣ್ಣ ರಂಗದ ಮೇಲೆಲ್ಲ ವಿಚಿತ್ರವಾಗಿ ವರ್ತಿಸುತ್ತಾನೆ.

ಮಂಟೇಸ್ವಾಮಿ: ಅಪ್ಪಾ ಕೆಂಪಣ್ಣ, ಇಗೋ ಇಲ್ಲಿ ಕುಂದೂರು ಬೆಟ್ಟ ಬಂತು, ಕೂತ್ಕ ಬಾ. ಇಬ್ರೂ ಬಂಗೀ ಊಟ ಮಾಡವ.

ನೀಲಗಾರರು: ಬಂದೆ ಬಂದೆ ಬಂದೆ ಬಂದೆ ।
ಕುಂತೆ ಕುಂತೆ ಕುಂತೆ ಕುಂತೆ ।

ನೀಲಗಾರ ೧: ಇವಾಗ ನಮ್ ಗುರುಗುಳೇನ್ಮಾಡ್ತಾರೆ, ಚಿಲ್ಮೆ ಒಳೀಕ್ ಬಂಗೀ ಸೊಪ್ ತುಂಬ್ಕಂಡು ಅದುನ್ ಅಚ್ಕಂಡು, ಉಸ್ ಅಂತ ದಮ್ ಎಳ್ದು, ಅದರ ಒಗೇನ ಕೆಂಪಣ್ಣನ ಮಕಕ್ಕೆ ಬಿಟ್ಟು, ತಾವೇ ಕೊಟ್ಟ ನೀಲಿಗ್ಯಾನವನ್ನ ತಾವಾಗಿ ತೆಗೆದಾಕ್ತಾವ್ರೆ.

ಕೆಂಪಣ್ಣ: (ಥಟ್ಟನೆ ಮೇಲೆದ್ದು) ಹಾ!? ಇದ್ಯಾವ ಜಾಗ? ನಾನಿಲ್ಲಿಗ್ ಯಾಕ್ ಬಂದೆ? ನನ್ ಕುಲುಮೆ ಎಲ್ಲಿ? ಆಳುಕಾಳು ಎಲ್ಲಿ? ಹೊಲಮನೆ ಎಲ್ಲಿ? ಲೋ ಜಂಗಮ ನಿನ್ ನೋಡಿದ್ರೆ ಮಾಟಾ ಮಂತ್ರದೋನಂಗೆ ಕಾಣ್ತೀಯಾ. ಏಳು, ಇದೆಲ್ಲಾ ಯಾಕಾಯ್ತು? ಎಂಗಾಯ್ತು?

ಮಂಟೇಸ್ವಾಮಿ: ಮಗಾ, ವಸಿ ಕುಂತ್ಕಂಡು ಬಂಗಿ ಸೇದು.

ಕೆಂಪಣ್ಣ: ಇಲ್ಲ, ಇಲ್ಲ. ಮೊದ್ಲು ಬೊಗ್ಳು. ಎಲ್ಲಿ ನನ್ನ ಮುತ್ತಿನ ಕಿರೀಟ? ಎಲ್ಲಿ ನನ್ನ ಪಟ್ಟೆ ಪೀತಾಂಬರ?

ಮಂಟೇಸ್ವಾಮಿ: ಎಲ್ಲಾನೂ ನಾವೇ ಕಿತ್ಕಂಬುಟ್ವೋ ಕನಪ್ಪ.

ಕೆಂಪಣ್ಣ: ನೀನು?....ನೀನು?...ಅಯ್ಯೋ ನನಗಿಂಗೆಲ್ಲಾ ಯಾಕಾಯ್ತು?

ತಲೆಮೇಲೆ ಕೈಯಿಟ್ಟುಕೊಂಡು ಗೋಳಾಡುತ್ತಾನೆ

ಮಂಟೇಸ್ವಾಮಿ: ಅಪ್ಪಾ, ನಿನಗಿನ್ನಾ ಅಂಕಾರ ಅನ್ನದು ಇಳ್ದಿಲ್ಲ ಮಗ.

ಕೆಂಪಣ್ಣ: ಮೊದಲು ಜವಾಬು ಕೊಡು. ನನ್ಗೆ ಇಂತಿಂಥ ಕಷ್ಟಗಳನ್ನ ಯಾಕೆ ಕೊಟ್ಟೆ?

ಮಂಟೇಸ್ವಾಮಿಗೆ ಹೊಡೆಯಲು ಹೋಗುತ್ತಾನೆ

ಮಂಟೇಸ್ವಾಮಿ: ಯಾಕೇ ಅಂತೀಯಾ ಮಗ? ನಿನ್ನ ಒಂದು ಬರಗ ಕಿತ್ಕಂಡ್ ತಿನ್ನಾ ಇತ್ತು, ಅದ್ಕೆ.

ಕೆಂಪಣ್ಣ: (ಜೋರಾಗಿ ನಕ್ಕು) ನನ್ನ ಯಾವ ಬರಗ ಮುಟ್ಟಂಗಿತ್ತೊ ಪರದೇಸಯ್ಯ? ಅದನ್ನ ತೋರ್‍ಸು. ಇಲ್ದೆ ಇದ್ರೆ ನಿನ್ನಿಲ್ಲೇ ಊತಾಕ್ಬುಡ್ತೀನಿ.

ಮಂಟೇಸ್ವಾಮಿ: ಅಪ್ಪಾ, ನಾವು ಮುಪ್ಪಾಗ್ತಾ ಇರೋರು. ಇನ್ನೇನ್ ನಾವೇ ಮಣ್‌ಗೋಯ್ತೀವಿ. ನಮ್ಮನ್ ಊಳ ಕಷ್ಟ ನಿಂಗ್ ಬ್ಯಾಡ. ನಿನ್ನ ಇನ್ನೂ ತಿಂತಾ ಇರ ಬರಗನ್ನ ಈಗ್ಲೇ ಇಲ್ಲಿಗ್ ಕರಸ್ತೀವಿ. ಅದು ನಿನ್ನ ಕಂಡ್ ತಕ್ಷಾನ ನಿನ್ ಮ್ಯಾಲೆ ಬೀಳ್ತದೆ. ಆಮ್ಯಾಲೆ ನೀನುಂಟು ಅದುಂಟು.

ಡಮರುಗ ಬಾರಿಸುತ್ತಾನೆ.

ನೀಲಗಾರರು: ಕಾಡುಮೇಡಿನ ಪಟ್ಟೆ ಬರುಗ
ಬೇಡರ ಕಣ್ಣಿಗೆ ಕಾಣದ ಬರುಗ ।
ನಿದ್ದೆಯೊಳಗೆ ಹೊಂಚಿ ಕೂತು
ಸಪ್ಪದೊಳಗೆ ತಿನ್ನೊ ಬರುಗ ।
ಕಪ್ಪು ರಾತ್ರಿ ಪಂಜೆ ಬಾರೊ
ಅಂಜೋರೆದೆಗೆ ಮೃತ್ಯು ಬಾರೊ ।
ಸಿಡಿಲಿನಂಗೆ ಸಿಡಿದು
ಗುಡಿಗಿನಂಗೆ ಗುಡುಗಿ
ಮಿಂಚಿನಂಗೆ ನೆಗೆದು ಬಾರೊ ॥

ಹುಲಿವೇಷದವನು ಕುಣಿಯುತ್ತಾ ಪ್ರವೇಶ. ನೀಲಗಾರರು ತಮಟೆ ಬಾರಿಸುತ್ತಾರೆ. ಹುಲಿ ಕುಣಿಯುತ್ತಾ ಕೆಂಪಣ್ಣನನ್ನು ಅಟ್ಟಿಸಿಕೊಂಡು ಹೋಗುತ್ತದೆ. ಕೆಂಪಣ್ಣ ಕೆಳಗೆ ಬೀಳುತ್ತಾನೆ.

ಮಂಟೇಸ್ವಾಮಿ: ಈ ಬರಗಾನೆ ಕನಪ್ಪ ನಿನ್ ಕಿತ್ಕಂಡ್ ತಿನ್ನಾ ಇದ್ದುದ್ದು. ಈಗಾಗ್ ನೀನೇನಾರಾ ಎದುರ್‍ಕಂಡ್ರೆ ಅದು ನಿನ್ ಗುಂಡ್ಗೆ ಸೀಳ್‌ಬುಡ್ತದೆ. ಏಳು, ಮ್ಯಾಕೆದ್ದು ಅದರೊಂದ್ಗೆ ಕುಸ್ತಿ ಮಾಡು.

ಕೆಂಪಣ್ಣನೂ ತಾಳಕ್ಕೆ ತಕ್ಕಂತೆ ಕುಣಿಯುತ್ತ ಹುಲಿಯೊಂದಿಗೆ ಕುಸ್ತಿ ಶುರು ಮಾಡುತ್ತಾನೆ. ನಿಧಾನವಾಗಿ 'ಹುಲಿ' ಸೋಲತೊಡಗುತ್ತದೆ. ಕೆಂಪಣ್ಣ ಹುಲಿಯನ್ನು ಮೇಲೆತ್ತಿ ಕೆಳಕ್ಕೆ ಒಗೆಯಲು ಹೋದಾಗ.

ಮಂಟೇಸ್ವಾಮಿ: ದುಡುಕ್ ಬ್ಯಾಡ ಕೆಂಪಣ್ಣ. ಆ ಉಲೀನ ನೀನು ವಸಾ ಮಾಡ್ಕಬೌದೇ

ಪ್ರೊರ್ಟು. ಅದನ್ನ ಕೊಲ್ಲಕಾಗಕಿಲ್ಲ. ಅದು ಸತ್ರೇ ನೀನೂ ಸಾಯ್ತೀಯ. ಅದನ್ ಬುಟ್‌ಬುಡು.

ಕೆಂಪಣ್ಣ ಹುಲಿಯನ್ನು ಬಿಡುತ್ತಾನೆ.

ಮಂಟೇಸ್ವಾಮಿ: ನನ್ ಕಂದ ಬರ್ಗ. ನಮ್ ಕೆಂಪಣ್ಣ ನಿನ್ ಪರೀಕ್ಷೆ ಗೆದ್ ಕಂಡ. ಇನ್ನ ಅವ್ನು ಕಾಳಿಂಗನ ಪರೀಕ್ಸೆ ಗೆದ್ಗಬೇಕು. ಅಪ್ಪಾ ಕೆಂಪಣ್ಣ, ಕಾಳಿಂಗ ಅಂಡಾಂಡ ಪಿಂಡಾಂಡಬುವನ ಬ್ರಹ್ಮಾಂಡವನ್ನೆಲ್ಲಾ ಕಚ್ಬೈತೆ. ಇನ್ನ ಆ ಕಾಳಿಂಗನನ ನಿನ್ಮೇಲೆ ಬುಡ್ತೀನಿ.

ಡಮರುಗ ಬಾರಿಸುತ್ತಾನೆ

ನೀಲಗಾರರು: ಹರನ ಕೊಳ್ಳನು ಸುತ್ತಿದ್ ಕಾಳಿಂಗಾ । ನೀ
ಹರಿಯಾ ಸುಪ್ಪತ್ತಿಗೆ ಕಾಳಿಂಗಾ ॥
ನರರಿಗೆ ನಂಜಾದೆ ಕಾಳಿಂಗಾ । ನೀ
ಸುರರಿಗೆ ಮಂಜಾದೆ ಕಾಳಿಂಗಾ ॥
ಸರಸರ ಹರಿದು ಬಾ ಕಾಳಿಂಗಾ ॥ ನೀ
ಧರೆಯೆಲ್ಲ ತರತರ ಕಾಳಿಂಗಾ ॥
ಏಳೆಡೆ ಎತ್ತೋನೆ ಕಾಳಿಂಗಾ
ಬ್ಯಾಗನೆ ಬಾರೋ ಕಾಳಿಂಗಾ ॥

ಹಾವು ವೇಷ ತೊಟ್ಟವನು ನಾಗಮಂಡಲ ಕುಣಿತದಲ್ಲಿ ಬಂದು ಸ್ವಲ್ಪ ಹೊತ್ತು ತಾಳಕ್ಕೆ ಕುಣಿದು ಕೆಂಪಣ್ಣನನ್ನು ಸುತ್ತುವರಿಯುತ್ತಾನೆ. ಕೆಂಪಣ್ಣ ಬಿಡಿಸಿಕೊಳ್ಳಲು ಹೆಣಗಾಡುತ್ತಾನೆ.

ಕೆಂಪಣ್ಣ: ಅಪ್ಪಾ ಜಂಗುಮ, ನಾನು ನಿನ್ನ ಜೀತದಾಳಾಯ್ತೀನಿ. ನಿನ್ನ ಸ್ಯಾವೆ ಮಾಡ್ಕಂಡಿರ್ತೀನಿ. ಈ ಕಾಳಿಂಗನ ಕೈಯಿಂದ ನನ್ನ ಬಿಡ್ಸೋ.

ಮಂಟೇಸ್ವಾಮಿ: ಕಂದಾ ಕೆಂಪಣ್ಣ, ಈ ಕಾಳಿಂಗನ ತೆಕ್ಕೇ ಒಳ್ಗೆ ಅನ್ನೇಡು ವರ್ಸ ತಬುಸು ಮಾಡ್ದೇ ಓದ್ರೆ, ನರನಾಗಲಿ, ಸುರನಾಗ್ಲೀ, ಕಿನ್ನರ ದ್ಯಾವತೆಗುಳಾಗ್ಲಿ ಅವರಿಗೆ ಬಿಡುಗಡೆ ಇಲ್ಲ.

ಕೆಂಪಣ್ಣ: ಅಯ್ಯೋ. ಅಯ್ಯೋ....

ಮಂಟೇಸ್ವಾಮಿ: ಕಂದಾ ಕಾಳಿಂಗಾ, ನೀನೀ ಸಿಸು ಮಗನ್ನ ಕುಂದೂರು ಬೆಟ್ಟದ್ ವ್ಯಾಗೆ ಕಾಳಿಂಗನ್ ಗವೀ ವಳೀಕೆ, ಕರ್ಕಂಡೋಗಿ ಅನ್ನೆರ್ಡು ವರ್ಸ ಅವನ್ನ ಬೇಕಾದಂಗೆ ಪರೀಕ್ಸೆ ಮಾಡು. ಕಂದಾ ಬರಗ, ನೀನು ಓಗಿ ಆ ಗವಿ ಬಾಕಲ್ಗೆ ಒಂದು ಬಂಡೆ ನೂಕ್ಬುಟ್ಟು ಒಂಟೋಗು.

ಕೆಂಪಣ್ಣ: ಅಯ್ಯೋ. ಅಯ್ಯೋ. ಕತ್ತಲು. ನಾಗಲೋಕ. ಎಡಗೋಳ ಮ್ಯಾಲೆ ರತ್ನ. ನಂಜುನ್ ಸಮುದ್ರ...ಅದರ್ ಮ್ಯಾಗೆ ಸಕ್ರೆ ದೋಣೆಗುಳು.

ಮಂಟೇಸ್ವಾಮಿ: ಇನ್ನೂ ಏನೇನೋ ನೋಡ್ಬೇಕು ಕೆಂಪಣ್ಣ. ಇಷ್ಟಕ್ಕೆ ಇಂಗ್ ಒದರಾಡ್ ಬ್ಯಾಡ.

ಮಂಟೇಸ್ವಾಮಿ ನಿಷ್ಕ್ರಮಣ. ಕಾಳಿಂಗ-ಹುಲಿಗಳು ಹಣಗಾಡುತ್ತಿರುವ ಕೆಂಪಣ್ಣನನ್ನು ರಂಗದ ಹಿಂಭಾಗಕ್ಕೆ ಕರದೊಯ್ಯುತ್ತಾರೆ.

ನೀಲಗಾರ ೧: ಎಳೆಡೆ ಕಾಳಿಂಗ ಕೆಂಪಣ್ಣನನ್ನು ಕಾಳಿಂಗನ ಗವೀ ಒಳೀಕೆ ಎಳ್ಕಂಡೋಗೈತೆ. ಏಳು ಪಟ್ಟೆ ಬರಗ ಆ ಗವೀ ಬಾಕುಲ್ಗೆ ಆನೆ ದಪ್ಪ ಗುಂಡನ್ನು ನೂಕೈತೆ. ಆ ಗವೀ ಒಳ್ಗೆ –

ನೀಲಗಾರರು: ಉಣ್ಣಾಕೆ ಅನ್ನವಿಲ್ಲ
ದಾವ್ರಕ್ಕೆ ನೀರು ಇಲ್ಲ
ಕೆರೆ ಆವು ನಾಗರಾವು
ಕೊಳಕು ಮಂಡಲ ಆವು
ಗೋಧಿ ಆವು ಹೆಬ್ಬಾವು
ಮೈಯ ಮೇಲೆ ಅರಿಯುತಾವೆ
ಕೈ ಬಾಯಿ ಕಡಿಯುತಾವೆ ॥
ಚಿಕ್ಕೆ ಚಂದ್ರಾಮನಿಲ್ಲ
ಹೊತ್ತೀನ ಬೆಳಕೇ ಇಲ್ಲ
ಕತ್ತಲೋ ಕತ್ತಲೆಲ್ಲ ॥

ನೀಲಗಾರ ೧: ಈ ಪ್ರಕಾರವಾಗಿ ಇತ್ತ ಆ ಕೆಂಪಣ್ಣ ಯಮಯಾತನೆ ಅನುಬೋಗುಸ್ತಾ ಅವ್ನೆ. ಅತ್ತ ದರೆಗೆ ದೊಡ್ಡೋರು ರಾಜ ಬೊಪ್ಪನಪುರದ ಗುರುಮಠದೊಳ್ಗೆ ಸಿಸ್ಯ ಸಮೇತವಾಗಿ ಮೂರ್ತ ಮಾಡ್ತಾ ಅವ್ರೆ.

✿ ✿ ✿ ✿ ✿

ಭಾಗ - ೩

ನೀಲಗಾರರು: ಸಿದ್ದಯ್ಯ ಸ್ವಾಮಿ ಬನ್ನಿ ।
ಪವಾಡ ಗೆದ್ದಯ್ಯ ನೀವೆ ಬನ್ನಿ ॥

ನೀಲಗಾರ ೧: ನಮ್ಮ ಗುರುಸ್ವಾಮಿಯೋರು ರಾಜಬೊಪ್ಪನಪುರದಲ್ಲಿ ದ್ಯಾನ ತಬಸು ಮಾಡ್ಕಂಡು ಅನ್ನೇಡು ವರ್ಸ ಮೂರ್ತ ಮಾಡ್ತವ್ರೆ. ರಾಚಪ್ಪಾಜಿ ದೊಡ್ಡಮ್ಮಾಜಿಯವ್ರನ್ನ ಕಣ್ತುಂಬ ನೋಡ್ಕಂಡು, ರಾಜೇಂದ್ರು ಈರಬದ್ರು ಸ್ವಾಮಿಗುಳ್ನ ನೋಡಿ ಸಂತೋಸ ಪಟ್ಕಂಡು, ಮಡಿವಾಳ ಮಾಚಿದೇವ, ಕುರುಬ ಬೊಪ್ಪನಗೌಡ ಇಂತಿಂತೀ ಸಿಸ್ಯ ಕೋಟಿಯನ್ನ ಉದ್ಧಾರ ಮಾಡ್ಕಂಡು, ದರೆ ಅಗಲದ ತಮ್ಮ ಗುರು ಮಟದೊಳ್ಗೆ ಮೂರ್ತ ಮಾಡ್ತೌರೆ. ಮೂರ್ತ ಮಾಡ್ತಾ ಇದ್ದ ವ್ಯಾಳೆಯಲ್ಲಿ ಒಂಜಿನ ಬಂಗೀ ಪಳಾರ ಮಾಡ್ತಾ ಇದ್ದಾಗ –

ಮಂಟೇಸ್ವಾಮಿ ಬಂಗೀ ಸೇದುತ್ತ ಕುಂತವನು ತಟ್ಟನೆ ಏಳುತ್ತಾನೆ.

ಮಂಟೇಸ್ವಾಮಿ: ಅಪ್ಪ ನೀಲಗಾರ್ರ, ನನ್ನ ಸಿಸು ಮಗ ಕೆಂಪಾಚಾರಿಯನ್ನ ಆ ಕಾಳಿಂಗನ್ ಗವೀ ಒಳೀಕ್ ತಳ್ಳಿ ಏಟೊರ್ಸ ಆಯಿತ್ರಪ್ಪ?

ನೀಲಗಾರ ೧: ಅನ್ನೇಡು ವರ್ಸವಾದವು ಗುರುವೇ, ಗುರುಪಾದವೇ.

ಮಂಟೇಸ್ವಾಮಿ: ಅಪ್ಪಾ, ಅವ್ನು ಈಗ ಬದುಕೌನೋ, ಸತ್ತೌನೋ ಕಾಣೆ. ನಾಗ್ರಾವ್ ಕಚ್ಚಿ ಸತ್ನೋ, ಎಬ್ಬಾವ್ ನುಂಗ್ ಸತ್ನೋ, ಅಸುವಾಗಿ ಅನ್ನವಿಲ್ದೆ ಸತ್ನೋ, ದಾವ್ರಾಗಿ ನೀರಿಲ್ದೆ ಸತ್ನೋ ತಕ್ಸಾನ ಓಗಿ ನಾವು ನೋಡ್ಕಂಬತ್ತೀವಿ.

ನೀಲಗಾರರು: ಕಾಳಿಂಗನ ಗವಿ ಒಳಗೆ
ಏನಾದ್ನೋ ನನ ಕಂದ
ಬ್ಯಾಗದಲ್ಲಿ ಓಗಬೇಕು

ಏನಾದ ನೋಡಬೇಕು
ಸಿದ್ದಯ್ಯ ಸ್ವಾಮಿ ಬನ್ನಿ ।
ಪವಾಡ ಗೆದ್ದಯ್ಯ ನೀವೆ ಬನ್ನಿ ॥

ಮಂಟೇಸ್ವಾಮಿ ರಂಗದ ಇನ್ನೊಂದು ಭಾಗಕ್ಕೆ ಬಂದು ನಿಲ್ಲುವನು.

ಮಂಟೇಸ್ವಾಮಿ: ಅಪ್ಪಾ ಕಾಳಿಂಗನ ಗವೀ ಒಳ್ಗೆ ತಬುಸು ಮಾಡ್ತಾ ಇರೋ ಕೆಂಪಣ್ಣ. ನಿನ್ನ ಅನ್ನೇಡು ವರ್ಸ ಮುಗೀತಪ್ಪಾ. ಕೆಳೀಕಿಳ್ದು ಬಾ... ಏನು? ಸಪ್ಪನೇ ಬತ್ತಾ ಇಲ್ವಲ್ಲ. ಅಪ್ಪಾ ಕೆಂಪಣ್ಣ. ನಾನು ಮುಪ್ಪಾದ ಮುದುಕ, ಬೆಟ್ಟ ಅತ್ ಬರಾಕಾಗಕಿಲ್ಲ. ನೀನೇ ಇಳಿದು ಬಾ ನನಕಂದ... ಇನ್ನೂ ಸಪ್ಪ ಇಲ್ಲ....

ನೀಲಗಾರರು: ನಾಗರಾವು ಕಚ್ಚಿ ಬಿಡ್ತೊ
ಹೆಬ್ಬಾವು ನುಂಗೀ ಆಕ್ತೊ
ಕಾಳಿಂಗನ ಗವೀ ಒಳ್ಗೆ
ಯಾವ ಸಾವು ನಿನಗೆ ಬಂತೊ
ಅಸಿದು ಅಸಿದು ಸತ್ತು ಓದೊ
ಬಾಯಾರಿ ಸತ್ತು ಓದೊ
ಉಸಿರು ಕಟ್ಟಿ ಸತ್ತು ಓದೋ

ಮಂಟೇಸ್ವಾಮಿ ರಂಗದ ಇನ್ನೊಂದು ಭಾಗಕ್ಕೆ ಬರುವನು. ಅವನ ಹಿಂದೆ ನೀಲಗಾರರು.

ಮಂಟೇಸ್ವಾಮಿ: ಮಗ ಕೆಂಪಣ್ಣ, ಕಳ್ ತಟ್ಟಂಗ್ ಕೂಗುದ್ರೂ ಒಂದ್ ಕಿತಾನೂ ಊ ಅಂತಿಲ್ವಲ್ಲ ನನಕಂದ. ಆಳು ಕಾಳಿಂಗನ ಗವೀ ಒಳೀಕ್ ನೂಕ್‌ದ್ವಲ್ಲಾ ಅಂತ ಸಿಟ್ಟಾ ಕಂದ? ಇಲ್ಲಾ ಬರಗನ ಕೈಗೆ ಸಿಗಾಕುಸ್ದೇ ಅಂತ ಸಿಟ್ಟಾ ಕಂದ? ಅಪ್ಪಾ ನೀಲಗಾರ್ರು, ನಾನು ಕೂಗಿ ಕೂಗಿ ಗಂಟ್ಲು ಬಿದ್ದೋಯ್ತು. ಇನ್ನು ನಮ್ಮ ಬಿರುದೆಲ್ಲಾ ಅವ್ನುದ್ದೇ ಅಂತ ಕೂಗಿ ಏಳಿ.

ನೀಲಗಾರರು: ನಮ್ಮ ಜೋಳಿಗೆ ನಿನ್ನದಯ್ಯ
ನಮ್ಮ ಬಿರುದು ನಿನ್ನದಯ್ಯ ।
ನಮ್ಮ ಇದ್ಯ ನಿನ್ನದಯ್ಯ
ನಮ್ಮ ಬುದ್ದಿ ನಿಮ್ಮದಯ್ಯ ॥

ಮಂಟೇಸ್ವಾಮಿ: ತಡೀರಪ್ಪ ತಡೀರಿ. ಅವ್ನ ಮನುಸ್‌ನಗಿರಾದು ನಮ್ಮ ಬುದ್ದೀಗ್ ಅರುವಾಯ್ತು. ನಾವು ಗವಿ ಒಳೀಕ್ ತಳ್ಳಿದ್ ಕೆಂಪಣ್ಣ ಅದ್ರೊಳಗಿದ್

ಯಮುಗತ್ತಲು ಕಂಡ್‌ತಕ್ಸನ ಯಮನ ಪಾಲಾಗೋದ. ಅವನ ಮೈಯ್ಯ ಚಿಪ್ಪೊಡೆದು ಆ ಚಿಪ್ಪೊಳಗ್ನಿಂದ, ಒಂದ್ ಕಣ್ಣೊಳಗ್ ಸೂರ್ಯ, ಇನ್ನೊಂದ್ ಕಣ್ಣೊಳಗ್ ಚಂದ್ರ ಮಿನುಗ್ತಾ ಇರತಕ್ಕಂತ ಇವ್ನು ಉಟ್ ಬಂದ. ನೀಲಿಗ್ಯಾನ ಬಂದ್ಮೇಲೆ ಲೀಲೆಕಾರನಾದ ಇವುನ್ಗೆ 'ಗನನೀಲಿ ಸಿದ್ದಪ್ಪಾಜಿ' 'ಗನಲೀಲೆ ಸಿದ್ದಪ್ಪಾಜಿ' ಅಂತ ಇವತ್ಲಿಂದ ನಾಮಕರಣ. ಅಪ್ಪಾ ಗನನೀಲಿ ಸಿದ್ದಪ್ಪಾಜಿ, ಗನನೀಲಿ ಸಿದ್ದಾಪ್ಪಾಜಿ.

ನೀಲಗಾರರು: ಸಿದ್ದಯ್ಯ ಸ್ವಾಮಿ ಬನ್ನಿ
ಪರಂಜ್ಯೋತಿ ।
ಗುರುಲಿಂಗಯ್ಯ ನೀವೆ ಬನ್ನಿ ॥
ಬಾರದ ಪವಾಡಕೆ
ಬಂದೊದಗೊ ಗನನೀಲಿ
ಸಿದ್ದಯ್ಯ ನೀವೆ ಬನ್ನಿ ॥

ನೀಲಗಾರ ೧: ಅಗೋ ಅಗೋ ಅತ್ತ ಕಾಳಿಂಗ, ಇತ್ತಬರಗ, ಮಧ್ಯ ಜ್ಯೋತಿ ಬಂದಂಗೆ ಬತ್ತಾವ್ರೆ ಸಿದ್ದಪ್ಪಾಜಿ.
ನೀಲಗಾರ ೨: ನೆತ್ತಿ ಮ್ಯಾಲೆ ಅನ್ನೆಳ್ಡಾಳುದ್ದ ಉತ್ತ ಅಕಾಸುಕ್ ಮುಟ್ಟದೆ.
ನೀಲಗಾರ ೩: ಎಕ್ಕತ್ತಿನ್ ಮ್ಯಾಲೆ ಧರೆ ಗಾತ್ರದ ಮತ್ತೀಮರ.
ನೀಲಗಾರ ೪: ಎಡದಾ ಕಂಕ್ಳಲ್ಲಿ, ಬಲದಾ ಕಂಕ್ಳಲ್ಲಿ ಗರುಡುನ್ ಗೂಡು.
ನೀಲಗಾರ ೧: ಪಾತಾಳ್‌ದೊಳೀಕೆ ಇಳ್ದೋಗಿರ ಉಗುರ್ ಕಣ್ಣು.
ನೀಲಗಾರ ೨: ನಾಕೂ ದಿಕ್ಕಿಗೆ ಅಬ್ಬಿರೋವಂತ ನೂರೊಂದು ಕೋಟಿ ಕಿರ್‌ಜಡೆ.

ಅತ್ತ ಕಾಳಿಂಗ, ಇತ್ತ ಹುಲಿ ಇಟ್ಟುಕೊಂಡು ಸಿದ್ದಪ್ಪಾಜಿ ಕೆಳಗಿಳಿದು ಬರುತ್ತಾನೆ. ಮಂಟೇಸ್ವಾಮಿಗೆ ನಮಸ್ಕರಿಸುತ್ತಾನೆ.

ನೀಲಗಾರರು: ನೀಲಿಗ್ಯಾನ ಓಯಿತಯ್ಯ
ಸೌಗ್ಯಾನ ಬಂದಿತಯ್ಯ ।
ನರನ ಜಲುಮ ಕಳೆಯಿತಯ್ಯ
ಹರನ ಜಲುಮ ದೊರಕಿತಯ್ಯ ।
ತಂದೆ ನಿನ್ನ ಪಾದ ಕರಣ
ಮಂಡೆ ಮ್ಯಾಲೆ ಒದಗಿತಯ್ಯ
ಸಿದ್ದಯ್ಯ ಸ್ವಾಮಿ ಬನ್ನಿ ॥

ಮಂಟೇಸ್ವಾಮಿ ಸಿದ್ದಪ್ಪಾಜಿಯನ್ನು ಅಪ್ಪಿಕೊಳ್ಳುತ್ತಾನೆ.

ಮಂಟೇಸ್ವಾಮಿ: ಅಪ್ಪ. ನನ ಕಂದ ಒರಗ. ಅಪ್ಪ ನನ ಕಂದ ಕಾಳಿಂಗ. ನೀವಿಬ್ರೂ ಈ ನಮ್ಮ ಕಂದನನ್ನು ಕೊಂದು ಅವನಿಗೆ ಇನ್ನೊಂದು ಜೀವ ಕೊಟ್ಟಿದೀರ. ನಿಮ್ಮನ್ನು ಶಾನೆ ಒತ್ತು ನೋಡುದ್ರೆ ಈ ಬೂಮಿ ಬಿರುದೋದಾದು. ನೀವು ನಿಮ್ಮ ನಿಮ್ಮ ಗವಿ ಒಳೀಕೆ ತಿರ್ಗಿ ಓಗ್ ಸೇರ್ಕಳ್ರಪ್ಪ.

ಹುಲಿ-ಕಾಳಿಂಗ ನಿಷ್ಕ್ರಮಣ

ಮಂಟೇಸ್ವಾಮಿ: ಅಪ್ಪಾ ಸಿದ್ದಪ್ಪಾಜಿ. ನಾವು ಬ್ರಮ್ಮಾಂಡ್ಲದ ಮೊಟ್ಟೆ ಒಳಗೆ ಕುಂತು ಕಂಡುದ್ದನ್ನ ನೀನು ಕಾಳಿಂಗನ್ ಗವಿ ಒಳಗ್ ಕಂಡಿದಿಯ ನನ್‌ಮಗ. ಇನ್ನು ನಮ್ಮ ರಾಜಬೊಪ್ಪನ ಗುರುಮಟಕ್ಕೆ ನೀನೇ ದಳವಾಯಿ. ನಡಿಯಪ್ಪ ಓಗನ.

ಸಿದ್ದಪ್ಪಾಜಿಯನ್ನು ಅಪ್ಪಿಕೊಂಡು ಕರೆದೊಯ್ಯುತ್ತಾನೆ.

ನೀಲಗಾರ ೧: ಸಿಸು ಮಗನಾದ ಗನನೀಲಿ ಸಿದ್ದಪ್ಪಾಜಿಯನ್ನು ರಾಜ ಬೊಪ್ಪಣಪುರದ ಗುರುಮಟಕೆ ಕರ್ಕೊಂಡೋಗಿ ನಮ್ಮ ಗುರುದೇವ್ರು. ನೂರೊಂದು ಕಿರು ಜಡೆ ಬಿಡ್ಸಿ, ನೆತ್ತೀಗೊಂದ್ ಕೊಪ್ಪರ್ಕೆ ಎಣ್ಣೆ ಒತ್ತೌರೆ. ಗಡ್ಡದೊಳ್‌ಗಿರೋ ಹಕ್ಕಿಗೂಡುಗಳ್ನ ಬಿಡ್ಸಿ. ನೆತ್ತಿಮ್ಯಾಲ್ ಬೆಳ್ದಿರೋ ಮರಾನ ಕುಯ್ಸಿ, ಮೂಗಿನ್ ಮ್ಯಾಲ್ ಬೆಳ್ದಿರೋ ಉತ್ತಾನ ಒಡ್ಸಿ, ಏಳ್ ಸಮುದ್ರುದ್ ನೀರ್ ತಂದು, ಏಳ್ ಜಿನ, ಏಳ್ ರಾತ್ರಿ ಸ್ನಾನ ಮಾಡ್ಸಿ ತಮ್ಮ ನೂರೊಂದು ಬಿರುದುಗಳ್ನ ಸಿದ್ದಪ್ಪಾಜಿಯವರ್ಗೆ ಕೊಟ್ಟಾರೆ.

ಸಿದ್ದಪ್ಪಾಜಿ. ಮಂಟೇಸ್ವಾಮಿ ಪ್ರವೇಶ

ಮಂಟೇಸ್ವಾಮಿ: ಅಪ್ಪಾ ಸಿದ್ದಪ್ಪಾಜಿ, ಅನ್ನೇಡು ವರ್ಸ ದ್ಯಾನ ತಬಸು ಮಾಡಿ ದಣ್‌ದಿದ್ದೀಯ. ಈವತ್ಗೆ ನಮ್ ಬಿರುದುಗಳೆಲ್ಲಾ ನಿಮ್ಮವಾದೊ. ನಮ್‌ದು ಇನ್‌ಮ್ಯಾಲೆ ಕುಂತ್‌ಪಟ್ಟ, ನಿನ್‌ದು ದಳವಾಯಿ ಪಟ್ಟ. ಏಳೇಳು ಲೋಕ ನೋಡಿ ಬಂದೋ, ಬೇಕಾದಂಗೆ ಸಿಸುಮಕ್ಕಳ ಮಾಡ್ಕಂಡ್ ಬಂದೊ, ನಮ್ಮ ಗುರುಪಾದಕೆ ಒಪ್ಪಿದ ಸಿಸ್ಯ ನೀನೊಬ್ನೇಯ ಕಂದ. ರಾತ್ರಿ ಆಗೋಗದೆ. ನೀ ನಿನ್ನ ಕ್ವೋಣೆಗೆ ಓಗಿ ಪವಾಡಿಸ್ಕೊ. ನಾವು ನಮ್ಮ ಕ್ವೋಣೆ ಒಳ್ಗೆ ಪವಾಡಿಸ್ಕತೀವಿ.

ಸಿದ್ದಪ್ಪಾಜಿ ನಮಸ್ಕರಿಸಿ ಹೋಗುತ್ತಾನೆ. ಮಂಟೇಸ್ವಾಮಿ ರಂಗದ ಮೇಲೆ ಮಲಗುತ್ತಾನೆ.

ನೀಲಗಾರರು: ನಿದ್ದೂರೆ ಮಾಡವನೆ । ಸಿವಯೋಗಿ
ನಿದ್ದೂರೆ ಮಾಡವನೆ ॥

ಕತ್ತಲಿನೊಳಗಡೆ
ಚಿಕ್ಕ ಚಂದಿರ ಹೊಳಪ
ಪಕ್ಕನೆ ಹೊಕ್ಕವನೆ । ಸಿವಯೋಗಿ ।
ನಿದ್ದೂರೆ ಮಾಡವನೆ ॥

ಕತ್ತಲೆ ಲೋಕದ ಕಟ್ಟು ಬಿಡಿಸಿಕೊಂಡು
ಹಗಲು ತಾನಾಗವನೆ । ಸಿವಯೋಗಿ ।
ನಿದ್ದೂರೆ ಮಾಡವನೆ ॥
ಹಗಲಿನ ಮೈಯೊಳಗೆ
ನಡು ನೀಲಿಜ್ಯೋತಿಯ
ಎದೆಯೊಳಗೆ ಹೊಕ್ಕವನೆ । ಸಿವಯೋಗಿ ।
ನಿದ್ದೂರೆ ಮಾಡವನೆ । ಯೋಗಿ ।
ನಿದ್ದೂರೆ ಮಾಡವನೆ ॥

ನೀಲಗಾರ ೧: ಈ ಪ್ರಕಾರವಾಗಿ ನಮ್ಮ ಗುರುಸ್ವಾಮಿಯೋರು ಕತ್ತಲು ನಿದ್ದೆಯೊಳಗೆ ಎಚ್ಚರ ಅನ್ನತಕ್ಕ ಬೆಳಕಿನ ಪಾದುಕೆಗಳನ್ನ ದರಿಸ್ಕಂಡು ಲೋಕ ಲೋಕಗಳನ್ನ ತಿರುಗಾಡ್ಕಂಡು ಬತ್ತಿದ್ದಾಗ.

ಏಕತಾನವಾದ ಅರೆಯ ಶಬ್ದ ಸ್ವಲ್ಪ ಹೊತ್ತು ಕೇಳಿಸುತ್ತದೆ. ಆಮೇಲೆ ಒಂದೇ ಸಮನೆ ನಿಧಾನಕ್ಕೆ ಡಕ್ಕೆಯ ಶಬ್ದ. ರಂಗದ ಹಿಂಭಾಗದಲ್ಲಿ ಕೆಂಪು ಬೆಳಕು. ಒಬ್ಬ ಗಂಡಸು. ಒಬ್ಬ ಹೆಂಗಸು ಪ್ರವೇಶ. ಗಂಡಸು ಹಿಮ್ಮುಖವಾಗಿ ನಡೆಯುತ್ತ ಬರುತ್ತಿದ್ದಾನೆ. ಪಂಚೆಯನ್ನು ಮೈ ಮೇಲೆ ಹೊದ್ದು ಚಿಕ್ಕ ಪ್ರಾಯದ ಹೆಂಗಸೊಬ್ಬಳು ಕುಂತು-ಎಲೆ-ಅಡಿಕೆ ಜಗಿಯುತ್ತಿದ್ದಾಳೆ. ಇನ್ನೊಂದು ಕಡೆ ಮುದುಕಿ ಅಸಹ್ಯವಾಗುವಂತೆ ವೈಯ್ಯಾರ ಮಾಡುತ್ತ. ತಲೆಯ ಮೇಲೆ ಚಪ್ಪಲಿಯನ್ನಿಟ್ಟುಕೊಂಡು ಬರುತ್ತಿದ್ದಾಳೆ. ಮಂಟೇಸ್ವಾಮಿ ಅರೆ ಮತ್ತು ತಮಟೆಗಳ ಸದ್ದಿನಿಂದ ಬೆಚ್ಚಿ ತಟ್ಟನೆ ಮೇಲೆದ್ದು ಈ ವಿಚಿತ್ರ ದೃಶ್ಯವನ್ನು ನೋಡುತ್ತಾನೆ.

ಮಂಟೇಸ್ವಾಮಿ: ಅಪ್ಪಾ ಸಿದ್ದಪ್ಪಾಜಿ, ನಿನ್ನ ನಿದ್ರಾಲೋಕದಿಂದ ಎದ್ದು, ನನ್ನ ನಿದ್ರಾಲೋಕದೊಳಗೆ ಬಿರೀನ್ ಬಾ.

ಸಿದ್ದಪ್ಪಾಜಿ ಓಡೋಡಿ ಬರುತ್ತಾನೆ

ಸಿದ್ದಪ್ಪಾಜಿ: ಗುರುವೆ, ಗುರುಪಾದವೆ, ಕನಸಿಲ್ಲದ ನನ್ನ ನಿದ್ದೆಯಿಂದ ಕನಸು ಕಾಣ್ತಾ ಇರತಕ್ಕಂತ ನಿಮ್ಮ ನಿದ್ದೆಯೊಳೀಕೆ ನನ್ನ ಯಾಕೆ ಕರಿಸ್ಕಂಡ್ರಿ?

ಮಂಟೇಸ್ವಾಮಿ: ಅಗೋ ಅಲ್ಲೊಬ್ಬ ಇಚಿತ್ರವಾದ ಪುರುಸ ಬತ್ತಾ ಅವ್ನೆ, ಅವನು ಯಾರು, ಎತ್ತ? ಬಿರೀನೆ ಕೇಳ್ಕಂಬಾ.

ಸಿದ್ದಪ್ಪಾಜಿ: ಅಪ್ಪಾ. ಇಚಿತ್ರವಾಗಿ ಕಾಣ್ತಾ ಇರತಕ್ಕ ಇಚಿತ್ರ ಮನ್ಸಾ. ನೀನು ಯಾವ ದೇಸದಿಂದ ಬಂದೆ? ಯಾವ ದೇಸಕ್ಕೊಂಟಿದೀಯ? ನಮ್ಮ ಗುರುಗೋಳ

ಕನುಸ್‌ನೋಳೀಕ ಬಂದು ಅಲ್ಲಿಂದ ನನ್ನ ಕನುಸ್‌ನೋಳೀಕ್ ಯಾಕ್ ಬಂದಿದೀಯ?

ಕಲಿ: ಅಪ್ಪಾ, ನಾನು ಕಲಿಪುರುಸ. ದರ್ಮರಾಯ ಸ್ವರ್ಗ ಲೋಕ ಬಿಟ್ಟು ನರಕಲೋಕಕ್ ಓದಮ್ಯಾಲೆ ನಾನು ತೆಂಕದಿಕ್ಕಿನಿಂದ ಬಡಗ ದಿಕ್ಕಿಗೆ ಯಾತ್ರ ಒಂಟಿದೀನಿ. ನಾನು ಬಡಗ ದಿಕ್ಕಿನ ತುದಿ ತಲುಪ್‌ದಾಗ ಅಂಡಾಂಡ ಪಿಂಡಾಂಡ ಬುವನ ಬ್ರಮ್ಮಾಂಡವೆಲ್ಲ ತಲೆಕೆಳಗಾಯ್ತದೆ. ಮುವತ್ಮೂರು ಕೋಟಿ ದೇವತೆಗಳು ರಕ್ಸಾಸರಾಗಿ ರಕ್ಸಾಸರೇ ದೇವಾನುದೇವತೆಗಳಾಯ್ತಾರೆ. ಕಾಲಜ್ಞಾನದಲ್ಲಿ ಹೇಳ್ದಂಗೆ ಉಳಿಮುಟ್ಟದ ಲಿಂಗ ಕಟ್ಕಂಡು ಕರ್ತೃ ಬಸವಣ್ಣೋರ್ ಉಟ್‌ಬರೋಗಂಟ ಲೋಕಾನು ಲೋಕವೆಲ್ಲ ಬೇಕಾಬಿಟ್ಟಿ ಆಗಲೀಂತ ಕಾಲಪುರುಸ ನನ್ ಕಳಿಸೌನೆ. ನನಗೊತ್ತಾಯ್ತು. ಜಾಗ ಬುಡು.

ಮಂಟೇಸ್ವಾಮಿ: ಅಪ್ಪಾ ಸಿದ್ದಪ್ಪಾಜಿ, ನಿನ್ ಬಾಯಿ ಉಗುಳ್ ತಗ್ದು ಅವ್ನ ಮ್ಯಾಲೆ ಚೆಲ್ಲು.

ಸಿದ್ದಪ್ಪಾಜಿ ಹಾಗೆ ಮಾಡುತ್ತಾನೆ. ಕಲಿ ನಿಶ್ಚಲನಾಗಿ ನಿಲ್ಲುತ್ತಾನೆ.

ಸಿದ್ದಪ್ಪಾಜಿ: ಗುರುವೆ, ನಾನು ಉಗುಳು ಆಕಿದ ತಕ್ಸಾನ ಅವ್ನೆಲ್ಲ ಕಲ್ಲಾಗಿ ನಿಂತ್ಕಂಬುಟ್ರು.

ಮಂಟೇಸ್ವಾಮಿ: ಈ ಕಲಿಪುರುಸನ್ನ ಈವತ್ನಿಂದ ಮೂರು ತಿಂಗಳಗಂಟ ಮಾತ್ರ ನಾವು ಕಲ್ ಮಾಡಿ ನಿಲ್ಸಿದೀವಿ. ಈವತ್ತಿಗ್ ಮೂರ್ ತಿಂಗಳೀಗ್ ಸರ್ಯಾಗಿ ಅವುನಿಗ್ ತಿರ್ಗಿ ಜೀವ ಬಂದು: ಬಡಗ ದಿಕ್ಕಿನ್ ಕಡೀಕೆ ಅವ್ನು ಒಲ್ಟಾ ಅಂದ್ರೆ ಕೆಟ್ಟ ಕಲಿ ಉಟ್ಕಂತದೆ. ಆ ಕೆಟ್ಟ ಕಲಿಯನ್ನ ನಾವು ಕಣ್ಣಾರೆ ನೋಡಕಾಗಕ್ಕಿಲ್ಲ. ಕಲಿ ಸುರು ಆದ್ಮೇಲೆ ದೇವತೆಗಳು, ರಾಕ್ಸಸ್ರು, ನರಮನುಸ್ರು, ಪಸು ಪಕ್ಸಿ ಪ್ರಾಣಿಗಳು ಪಡಬಾರದಯಾತನೆ ಪಡುತ್ತಾರೆ. ಆವಾಗ ಇನ್ನೊಂದ್ಕಿತ ಈ ಬ್ರಮ್ಮಾಂಡವೆಲ್ಲ ಆಯತಪ್ಪಿ ಗಡಗಡ ನಡುಗಕ್ ಸುರು ಆಯ್ತದೆ. ನಾವಾದ್ರೂ ಈ ನರ ಸರೀರದೊಳಗೆ ಆವಾಗ ಜೀವರಾಸಿಗೆ ಉಪ್ಕಾರ ಮಾಡಕಾಗಕಿಲ್ಲ. ನಾವು ಪಾತಾಳ ಬಾವಿ ಒಕ್ಕಂಡು. ಬೂಮಿ ಒಳೀಕ್ ಓಗಿ, ಅದು ಆಯ ತಪ್‌ದಂಗೆ ಇಡುದ್ ನಿಲ್ಲೀಸ್‌ಬೇಕು. ಜೀವರಾಸಿಯನ್ನ ಕಾಪಾಡ್‌ಬೇಕು. ಆದ್ರಿಂದ ನಾವು ಇನ್ ಮೂರು ತಿಂಗ್ಳೊಳ್ಗೆ –

ನೀಲಗಾರರು: ಪಾತಾಳವನ್ನು ಸೇರಬೇಕು

ಬೂಮಿ ಒಕ್ಕಳ ಇಡಿಯಬೇಕು ।
ಎಡಕೆ ಬಲಕೆ ಬೀಳದಂಗೆ
ಆಯ ಇಡಿದು ನಿಲ್ಲಿಸಬೇಕು ।
ಲೋಕವನ್ನು ಉಳಿಸಬೇಕು
ಜೀವರಾಸಿಯ ಕಾಯಬೇಕು ॥

ಮಂಟೇಸ್ವಾಮಿ: ನೀನು ಈ ತಕ್ಸಾನದೊಳ್ಗೆ ನಮಗೊಂದು ಪಾತಾಳ ಬಾವಿ ತಗಿಸ್‌ಕೊಡಪ್ಪ ಸಿಸುಮಗನೆ.

ಸಿದ್ದಪ್ಪಾಜಿ: ಯಾವುದ್ರಿಂದ ತೆಗುಸ್ಲಿ ಗುರುಪಾದವೆ? ನಮ್ಮ ತಾವ ಆರೆಗುದ್ದಲಿ ಇಲ್ಲ, ಪಿಕಾಸಿ ಸನಕೆ ಇಲ್ಲ.

ಮಂಟೇಸ್ವಾಮಿ: ನಮ್ ಬಾವಿ ತೆಗುಸಕ್ ಮೊದ್ಲು ದಳವಾಯಿ ಆದ ನೀನೇ ಅದುನ್ನ ಸಂಪಾದ್ನೆ ಮಾಡ್ಕಂಬರ್ಬೇಕಪ್ಪ.

ಸಿದ್ದಪ್ಪಾಜಿ: ಯಾ ಊರ್ನಲ್ಲಿ, ಯಾ ದೇಸ್ದಲ್ಲಿ ಸಂಪಾದ್ನೆ ಮಾಡ್ಕಂಬರ್ಲಿ ಗುರುಪಾದವೆ?

ಮಂಟೇಸ್ವಾಮಿ: ಆ ಊರನ್ನ, ಆ ದೇಸವನ್ನ ನಿನಗೆ ಬ್ಯಾಗದಲ್ಲಿ ತೋರುಸ್ತೀವಿ. ನೀನು ಕಣ್ಣು ಮುಚ್ಚಪ್ಪ. ಯೋಗದಿಟ್ಟಿಯನ್ನ ಮಡಗಿನೋಡು. ಏನು ಕಂಡಾದು ಕಂದ?

ಸಿದ್ದಪ್ಪಾಜಿ: ನಿಗಿನಿಗಿ ನಿಗಿನಿಗಿ ಕೆಂಡ. ಅತ್ಕಡೆ ಇತ್ಕಡೆ ಕಂದೋಗಿ ಕರಗ್ತಾ ಇರ ಕಾಡು.

ಮಂಟೇಸ್ವಾಮಿ: ಅದು ಬೂಲೋಕದಗಲ ಕುಲುಮೆ ಕಣಪ್ಪ. ಇನ್ನೇನು ಕಾಣ್ತಾದಪ್ಪ.

ಸಿದ್ದಪ್ಪಾಜಿ: ಏಳು ಬೀದಿಗಳು. ಆ ಬೀದಿ ತುಂಬ ಉಳ ಉಪ್ಪೆಗಳಂಗೆ ನೆಲ ಅಗೀತಾ ಇರೊ ನರಜೀವಿಗಳು. ಅವರ ಮಕ ಮೈಯ್ಯಿ ಎಲ್ಲಾ ಒಂದು ಕೈ ರೂಪ್‌ದಾಗೈತೆ.

ಮಂಟೇಸ್ವಾಮಿ: ಅಪ್ಪಾ ಮಗ, ಅದೇ ನೀನು ಓಗ್ ಬೇಕಾಗಿರ ಊರು, ಅಲಗೂರು. ಆ ಜನಗುಳು ಅಲಗೂರಿನ ಬೂಮಿ ಅಗಲದ ಕುಲ್ಮೆ ಒಳಗೆ ಜೀತ ಮಾಡ್ಕಂಡಿರ ಆಳ್‌ಗುಳು. ಇನ್ನೇನ್ ಕಂಡದೊ ಕಂದ?

ಸಿದ್ದಪ್ಪಾಜಿ: ಏಳ್ ಜನ ರಾಜರು ಏಳ್‌ತಾ ಇರೊ ಜ್ವಾಲೆಗಳ ಮಧ್ಯೆ ಏಳು ಫಳಫಳಾ ಕಳಸ್‌ಗಳು.

ಮಂಟೇಸ್ವಾಮಿ: ಅವರು ನಿನ್ನ ಜಾತಿಯೋರು, ನಿನ್ನ ಕುಲದೋರು. ಪಾಂಚಾಳ ರಾಜ್‌ರು.

ಸಿದ್ದಪ್ಪಾಜಿ: ಅದೆಂತೆಂತದೋ ಆಯುದ್‌ಗಳು, ಮದ್ದಿನ್ ಗುಂಡು, ಫಿರಂಗಿ ಗುಂಡು.

ಮಂಟೇಸ್ವಾಮಿ: ಇವುನ್ನೆಲ್ಲ ಮಾಡ್ಸಿ ಆ ಪಾಂಚಾಳ ರಾಜ್ರು ದೇಸದೇಸ್‌ಗುಳ ರಾಜರ್‌ಗೆ ಅವುನ್ನ ಮಾರಿ ಬೇಕಾದಷ್ಟು ಸಂಪಾದ್ನೆ ಮಾಡ್ಕಂಡೌರಪ್ಪ.

ಸಿದ್ದಪ್ಪಾಜಿ: ಬಿಚ್ಚಿದ್ ಮಂಡೆ ಬಿಟ್ಕಂಡು. ಒಂದು ಕಣ್ಣೊಳೀಕ್ ಕೆಂಡ. ಇನ್ನೊಂದು ಕಣ್ಣೊಳ್ಗೆ ನದಿ. ಮೈಯೆಲ್ಲ ರಕ್ತ.

ಮಂಟೇಸ್ವಾಮಿ: ಅಪ್ಪಾ. ಅವ್ರೇ ನೆಲದೇವತೆ. ಜಲದೇವತೆ. ವಾಯುದೇವತೆ. ಅಗ್ನಿ ದೇವತೆ. ಆಕಾಸ ದೇವತೆಗಳು. ಪಾಂಚಾಳ ರಾಜರ ಕುಲ್ಮೆ ಕೊಡದ್ ಬಿಸಿ ತಾಳಕ್ಕಾಗ್ದೆ ಅವರ ಆಯುದ್‌ಗುಳ್ನ ಎದ್ರುಸಕಾಗ್ದೆ ಕಾಡೂ ಮೇಡು ಸೇರ್ಕಂಡು. ಕ್ವಾಪ ಮಾಡ್ಕಂಡು ಸೋಕ ಮಾಡ್ತಾ ಅವ್ರೆ. ಅಪ್ಪಾ ಸಿದ್ದಪ್ಪಾಜಿ, ಇನ್ನು ಕಣ್ ಬಿಡಪ್ಪ. ನೀನು ಈ ಕೂಡಲೆ ಆ ಅಲಗೂರ್‌ಗೋಗಿ–

ನೀಲಗಾರರು: ಪಾಂಚಾಳಗೇರಿಗೆ ಓಗಬೇಕು
ಕಬ್ಬಿನ ಬಿಕ್ಸೆ ತರಲಿಬೇಕು
ಮೂರಮಾಸೆ ಮುಗಿಯೋದ್ರೊಳ್ಗೆ
ನಾವ್ ಪಾತಾಳ ಸೇರಲಿಬೇಕು

ಸಿದ್ದಪ್ಪಾಜಿ: ಗುರುವೆ ಗುರುಪಾದವೆ. ಅನ್ನೇಡು ವರ್ಸ ಏಳುಪಟ್ಟೆ ಬರಗನನ್ನ, ಏಳೆಡೆ ಉರಗನನ್ನ ಎಂಗೆ ಪಳಗಿಸ್ ಬೇಕೂಂತ ಕಲಿಸ್‌ಕೊಟ್ಟೆ. ಆ ಪಸುಕ್ರಿಮಿಗಳಿಗಿಂತ ಕೀಳಾಗಿರತಕ್ಕಂತ ಈ ನರರಾಕ್ಸಸರ್ನ ಎಂಗೆ ಪಳಗಿಸ್‌ಬೇಕೂಂತ ಕಲುಸ್‌ಕೊಟ್ಟಿಲ್ಲ.

ಮಂಟೇಸ್ವಾಮಿ: ಅಪ್ಪಾ ಮಗ, ಕಲ್ತದನ್ನ ಇಡಕೊಂಡು ಕಲೀದೆ ಇದ್ದುದನ್ನ ಗೆಲ್ಲುವಂತ ಇದ್ಯವನ್ನು ನಾವು ಈಗ ಕಲಿಸ್ದೇ ಕಲುಸ್ತಾ ಇದೀವಿ. ಎದ್ರುಬ್ಯಾಡ ಓಗು ಮಗನೆ. ನಾವು ನಿನ್ನೆದೆ ಒಳ್ಗೆ ಕುಂತ್ಕಂಡಿರ್‍ತೀವಿ. ನಿನ್ನ ದಾರಿ ಒಳ್ಗೆ ಮುತ್ತೆತ್ತಿರಾಯ ನಿನ್ಗೆ ಜೋಡಿ ಆಗಿ ಕೇಡುಗಾಲದಲ್ಲಿ ಬಂದು ಕಾಪಾಡ್ತಾನೆ. ನಿನ್ನ ಪಿರಾಣಕ್ಕೆ ಸಂಚಕಾರ ಬಂದಾಗ, ಈಗ ನೀನು ಕಂಡಲ್ಲ ಮಗ ಆ ದೇವತೆ ನೆಲದೇವತೆ, ಆಕಾಸ ದೇವತೆ, ಜಲ ದೇವತೆ, ಅಗ್ನಿ ದೇವತೆ, ವಾಯು ದೇವತೆ, ಈ ಪವಾಡ ದೇವತೆಗಳು ಪಾಂಚಾಳರ ಕಾಟದಿಂದ ಮಾರೀಯರಾಗಿ ಅವ್ರನ್ನ ಮುಗಿಸ್‌ಬೇಕೂಂತ ಕಾಯ್ಕಂಡೌರಲ್ಲ. ಆ ಪಂಚ ದೇವತೆಗಳು ನಿನ್ನ ನೆರವಿಗೆ ಬತ್ತಾರೆ. ಈ ಕಲಿಪುರುಸನಿಗೆ ಜೀವ ಬರಕ್ ಮೊದ್ಲು ನಾವು ದರೆಯೊಳಗೆ ಓಗ್ದೆ ಇದ್ರೆ ನಮಗೆ ಸಾಂತಿ ಇಲ್ಲ. ನಿಮಗೆ ನೆಲೆ ಇಲ್ಲ. ನರ ಲೋಕಕ್ ದರೆ ಮ್ಯಾಲೆ ಉಳಿಗಾಲವಿಲ್ಲ.

ನೀಲಗಾರರು: ಕನಸಿನೊಳಗೆ ಒರಟುನಿಂತ ಸಿದ್ದಪ್ಪಾಜಿ
ನಮಿಸಿ ಗುರುವಿಗೆ ಒರಟುನಿಂತ ಸಿದ್ದಪ್ಪಾಜಿ ॥

ಹೆಗಲಿಗೆ ಕಂಡಾಯ ಹಾಕಿಕೊಂಡ । ಸಿದ್ದಪ್ಪಾಜಿ ।
ಬಗಲಿಗೆ ಜೋಳಿಗೆ ತೂಗಿಕೊಂಡ । ಸಿದ್ದಪ್ಪಾಜಿ ।
ಒಗೆ ಸಪ್ಪು ಬಂಗಿ ಸಪ್ಪು
ಚಿಲುಮೆ ಒಳಗೆ ತುಂಬಿಕೊಂಡು
ಗುರುವೆ ನೀನೆ ಗತಿ ಎಂದು
ನಮಿಸಿ ಗುರುವಿಗೆ ಒರಟು ನಿಂತ । ಸಿದ್ದಪ್ಪಾಜಿ ।

ಸಿದ್ದಪ್ಪಾಜಿ ತನ್ನ ಬಿರುದುಗಳನ್ನು ಧರಿಸಿಕೊಂಡು ರಂಗದ ಸುತ್ತ ಓಡಾಡುತ್ತಾನೆ.

ನೀಲಗಾರರು: ಸಿದ್ದಯ್ಯಸ್ವಾಮಿ ಬನ್ನಿ ।
ಕಂಡಾಯದೊಡೆಯ
ಗುರುಲಿಂಗಯ್ಯ ನೀವೆ ಬನ್ನಿ ॥

ನೀಲಗಾರ ೧: ನಮ್ಮ ಗುರುವಾದ ಸಿದ್ದಪ್ಪಾಜಿಯವ್ರು ಏಳುಕೇರಿಗಳ ಅಲಗೂರಿಗೆ ವೇಗದಲ್ಲಿ ಬತ್ತಾ ಅವ್ರೆ. ಆ ಊರ್ನಲ್ಲಿ –

ನೀಲಗಾರರು: ಏಳುಮಂದಿ ದೊರೆಗೋಳು
ರಾಜ್ಯಬಾರ ಮಾಡುತವರೆ ।
ಚಿನ್ನೋಜಿ, ಬೆಳ್ಳೋಜಿ
ರನ್ನೋಜಿ, ಮುತ್ತೋಜಿ
ಅವಳೋಜಿ, ಪಚ್ಚೋಜಿ
ವಜ್ರೋಜಿ ದೊರೆಗಳು ॥

ನೀಲಗಾರ ೧: ಚಿನ್ನೋಜಿ ಮನೆಗೆ ಚಿನ್ನದ ಕಳಸ, ವಜ್ರೋಜಿ ಮನೆಗೆ ವಜ್ರದ ಕಳಸ, ರನ್ನೋಜಿ ಮನೆಗೆ ರನ್ನದ ಕಳಸ, ಬೆಳ್ಳೋಜಿ ಮನೆಗೆ ಬೆಳ್ಳಿ ಕಳಸ, ಮುತ್ತೋಜಿ ಮನೆಗೆ ಮುತ್ತಿನ ಕಳಸ, ಹವಳೋಜಿ ಮನೆಗೆ ಹವಳದ ಕಳಸ, ಪಚ್ಚೋಜಿ ಮನೆಗೆ ಪಚ್ಚೆಯ ಕಳಸ. ಈ ಏಳು ಕಳಸಗಳ ನೆಳ್ಳಲ್ಲಿ ಏಳು ಕೋಟಿ ಮಕ್ಕಳು ಉಳುಗಳಂಗೆ ಗೂಡು ಕಟ್ಕಂಡು ಮೈಯೆಲ್ಲ ಕೈಯಾಗಿ ಜೀತ ಮಾಡ್ತಾ, ಜೀವ ತೇಯ್ತಾ ಇರದನ್ನ ನೋಡ್ಕಂಡು ಅಲಗೂರಿನ ಏಳು ಬೀದಿಗಳೊಳಗೆ ಹಾದು ಬತ್ತಾ ಅವ್ರೆ ಗನನೀಲಿ ಸಿದ್ದಪ್ಪಾಜಿಯವ್ರು. ಕೆಳೀಕ್ ನೋಡ್ತಾರೆ ಬೂಮಿಯೆಲ್ಲ ಕುಲ್ಮೆ ಆಗದೆ. ಮ್ಯಾಲ್ ನೋಡ್ತಾರೆ ಸೂರ್ಯಚಂದ್ರು ಸೀದೋಗೌರೆ. ಸುತ್ತೂ ನೋಡ್ತಾರೆ ವಾಯುರಾಜಂಗೆ ಉಸರು ಕಟ್ಟೈತೆ. ಸಿದ್ದಪ್ಪಾಜಿಯವ್ರು ಬಿಕ್ಸಾ ಬೇಡ್ಕಂಡು ಬತ್ತಾ ಅವ್ರೆ.

ನೀಲಗಾರರು: ಸಿದ್ದಯ್ಯ ಸ್ವಾಮಿ ಬನ್ನಿ....

ಭಿಕ್ಷಾಟನೆ ಅಭಿನಯಿಸುತ್ತ ಸಿದ್ದಪ್ಪಾಜಿ ಪ್ರವೇಶ

ನೀಲಗಾರರು: ದಾನ ನೀಡಿದೋರ ಮನೆಗೆ
ಮಾನ ಹೊನ್ನು ದೊರಕಲಮ್ಮ
ಬಿಕ್ಸೆ ನೀಡಿದೋರ ಮನೆಗೆ
ಲಕ್ಷ ಸುಕವು ದೊರಕಲಮ್ಮ
ಅನ್ನ ನೀಡಿದೋರ ಮನೆಗೆ
ಪುಣ್ಯಕೋಟಿ ದೊರಕಲಮ್ಮ ॥

ನೀಲಗಾರ ೧: ಏಣ್ಣಾ, ನಮ್ ಗುರ್‌ಗೋಳು ಈ ಅಲಗೂರು ಒಂದು ಊರೂ, ಈ ಗೂಡ್‌ಗಳು ಮನೆಗೋಳು ಅಂತ ತಿಳ್ಕಂಡು ಬಿಕ್ಸಾ ಕೇಳ್ತಾ ಅವ್ರೆ. ಇಲ್ಲಿ ಅವರ್ಗೆ ಯಾರ್ ಕೊಟ್ಟಾರು ಬಿಕ್ಸೇಯ?

ನೀಲಗಾರ ೨: ಊಕನ, ಇರು ಅವರ್ಗ್ಹೋಗಿ ಏಳ್ ಬತ್ತೀನಿ.

ಪ್ರವೇಶಿಸಿ ಸಿದ್ದಪ್ಪಾಜಿಗೆ ನಮಸ್ಕರಿಸುತ್ತಾನೆ.

ಸಿದ್ದಪ್ಪಾಜಿ: ಏನಪ್ಪಾ ನೀಲಗಾರ?
ನೀಲಗಾರ ೨: ಗುರು ಸ್ವಾಮಿಗೋಳೆ, ಈ ಬೀದಿ, ಬೀದಿ ಅಲ್ಲ. ಈ ಗೂಡುಗಳು ಮನೆ ಅಲ್ಲ. ಇಲ್ಲಿರೋರು ಜನ ಅಲ್ಲ. ನಿಮ್ಗಿಲ್ಲಿ ಯಾವ್ ಬಿಕ್ಸೇನೂ ಸಿಕ್ಕಕಿಲ್ಲ. ಬಿಕ್ಸೆ ಕೊಡಕೆ ಅವರ್‌ತಾವ ಏನೂ ಇಲ್ಲ.
ಸಿದ್ದಪ್ಪಾಜಿ: ಅಂಗಿದ್ರೆ ಎಲ್ಲಿ ಸಿಕ್ಕಾದಪ್ಪ ಬಿಕ್ಸೆ?

ರಂಗದ ಹಿಂಭಾಗದಲ್ಲಿ ಬೆಳಕು. ಮೂರು ಜನ ಪಾಂಚಾಳರು ಕೂಲಿ ಬಟವಾಡೆ ಹಂಚುತ್ತಾ ಕೂತಿದ್ದಾರೆ. ಎರಡೂಕಡೆ ಬಿಚ್ಚುಗತ್ತಿ ಪಾರದೋರು.

ನೀಲಗಾರ ೨: ಅಗೋ ಅದೇ ಪಾಂಚಾಳರಾಜರ ದರ್ಬಾರು ಅಲ್ಲಿ ನಿಮ್ಗೆ ಅದೃಷ್ಟ ಇದ್ರೆ ಬಿಕ್ಸೆ ಸಿಕ್‌ಬೌದು.
ಸಿದ್ದಪ್ಪಾಜಿ: ಅಲ್ಲಿಗೇ ಒಯ್ತೀನಪ್ಪ.
ನೀಲಗಾರರು: ಸಿದ್ದಯ್ಯ ಸ್ವಾಮಿ ಬನ್ನಿ
ಪಾವಾಡ ಗೆದ್ದಯ್ಯ ನೀವೇ ಬನ್ನಿ ॥

ನೀಲಗಾರರು ಕೂಲಿಗಳಾಗಿ ಸಾಲಾಗಿ ನಿಂತು ಬಟವಾಡೆ ಇಸಿಕೊಳ್ಳುತ್ತಾರೆ.

ಸಿದ್ದಪ್ಪಾಜಿ: ಕ್ವಾರಣ್ಯ ಧರ್ಮ ಗುರುವೇ.

ಯಾರೂ ಗಮನಿಸುವುದಿಲ್ಲ.

ಸಿದ್ದಪ್ಪಾಜಿ: ಬಿಕ್ಸಾ....

ಯಾರೂ ಗಮನಿಸುವುದಿಲ್ಲ.

ಸಿದ್ದಪ್ಪಾಜಿ: ದಾನ.....

ಚಿನ್ನೋಜಿ ಮೆಲ್ಲಗೆ ತಲೆ ಎತ್ತಿ. ಮುತ್ತೋಜಿ. ರತ್ನೋಜಿಗೆ ತೋರಿಸುತ್ತಾನೆ.

ಚಿನ್ನೋಜಿ: ಯಾವಾನ್ಲಾ ಈ ಕಾಡ್‌ಪಾಪನ್ನ ಒಳೀಕ್ ಬಿಟ್ಕಂಡವ್ನು? ಆ ಬ್ರಮ್ಮ-ಇಷ್ಣು-ಮಏಸ್ವರಾ ಅನ್ನತಕ್ಕ ನಮ್ಮ ಕಾವಲು ಗಾರ್ರು ಏನ ದನಾ ಕಾಯ್ತುವ್ರೇನಲಾ? ಲೇ ಕಾಡ್ಮನ್ಸಾ, ನಮ್ ಯೂನಿಫಾರಂ ಹಾಕ್ದಲೆ ಎಂಗಲಾ ಬಂದೆ ನಮ್ ರಾಜ್ಯದೊಳೀಕೆ?

ಕೂಲಿಗಳು ಮತ್ತೆ ನೀಲಗಾರರಾಗುತ್ತಾರೆ.

ಸಿದ್ದಪ್ಪಾಜಿ: ಕ್ವಾರಣ್ಯ ಭಿಕ್ಸಾ....
ಪಾರದವ ೧: ಬುದ್ದೀ, ಇವನ ಏಸಾನೂ ನಮ್ಗೆ ಅರ್ತ ಆಗಕಿಲ್ಲ, ಇವನ ಬಾಸೆನೂ ನಮ್ಗೆ ಗೊತ್ತಾಗಕಿಲ್ಲ.
ಚಿನ್ನೋಜಿ: ಏನಂದೆ?
ಸಿದ್ದಪ್ಪಾಜಿ: ಕ್ವಾರಣ್ಯ ಭಿಕ್ಸಾ.
ಮುತ್ತೋಜಿ: ಈ ಪದಾನೇ ನಾನು ಕೇಳಿಲ್ವಲ್ಲಪ್ಪ. ಇರು, ಇವ್ನು ಕನ್ನಡದೊಳಗ್ ಮಾತಾಡ್ತಾ ಇಲ್ಲ. ಬ್ಯಾರೆ ಬಾಸೆ ಒಳ್ಗೆ ಕೇಳ್ ನೋಡ್ತೀನಿ. ಕ್ವಾರಣ್ಯ ಬೋಲೇತೊ ಕ್ಯಾಜೀ?
ಸಿದ್ದಪ್ಪಾಜಿ: ದಾನ....
ರನ್ನೋಜಿ: ಎಲಾ ಇವ್ನ, ಇದೂ ಕೇಳಿಲ್ವಲ್ಲಪ್ಪ, ದಾನ ಅನ್ನಡ ಎನ್ನಡ?
ಸಿದ್ದಪ್ಪಾಜಿ: ಧರ್ಮ....
ಚಿನ್ನೋಜಿ: ಎಲಾ ಇವ್ನ ನಾಲ್ಗೆ ಸೇದಾ, ನಮುಗ್ ಗೊತ್ತಾಗುದ್ದನ್ನೇ ಅಂತಾವ್ನಲ್ಲಪ್ಪ. ಧರ್ಮ ಅಂಟೆ ಏಮ್ರಾ?
ಸಿದ್ದಪ್ಪಾಜಿ: ಬಿಕ್ಸೆ...
ಚಿನ್ನೋಜಿ: ಅಂಗೀರ್‌ನೋಡು. ಯಾರ್ಗೂ ಗೊತ್ತಾಗ್ದೇ ಇರೋ ಬಾಸೇಲಿ ಇವನ್ನ ಮಾತಾಡಸ್‌ಬೇಕು. ಗುಜು ಗುಜು ಗುಜು ಪಿಚ್ಚು.
ರನ್ನೋಜಿ: ಗುಡು ಗುಡು ಗುಡು ಪಾಚ್ಚು.
ಚಿನ್ನೋಜಿ: ಆಂ, ಇರು. ನಮ್ಮ ಇಸ್ವ ಬಾಸೆ ಒಳಗ್ ಮಾತಾಡ್ತೀನಿ.

ಹಣದ ಚೀಲವನ್ನೆತ್ತಿ ಗಲಗಲ ಅಲ್ಲಾಡಿಸುತ್ತಾನೆ

ಸಿದ್ದಪ್ಪಾಜಿ: ಅಪ್ಪಾ, ಪಾಂಚಾಳರಾ, ನನ್ನ ಮಾತು ಕೇಳಿ.

ಚಿನ್ನೋಜಿ: ಅಂ ಅಂ ಅಂ, ಈಗ ನೋಡು ಕನ್ನಡದೊಳ್ಗೆ ಮಾತಾಡ್ತಾವ್ನೆ. ಏನಪ್ಪ ಪಾರದೋರ, ಜೀತದೋರ, ಇವಾಗ್ ಇವ್ನ ಮಾತ್ ಅರ್ತ ಆಗ್ತದೆ ಅಲ್ವೇನಪ್ಪ.

ಮುತ್ತೋಜಿ: ಊಽಽ ಅನ್ನಿ.

ಎಲ್ಲರೂ ಏಕಕಾಲದಲ್ಲಿ 'ಊSS' ಅನ್ನುವರು.

ಚಿನ್ನೋಜಿ: ಏನಲೇ ಪರದೇಸಿ! ನಮ್ ರಾಜ್ಯದೊಳ್ಗೆ ಕೂಲಿನಾಲಿ ಮಾಡೋರ್ ಬಿಟ್ರೆ ಬ್ಯಾರೆ ಬೋಳಿಮಕ್ಳಿಗೆ ಬರಕೂ ಜಾಗ ಇಲ್ಲ, ಇರಕೂ ಜಾಗ ಇಲ್ಲ. ನಾವ್ ನಿಗದಿ ಮಾಡಿರ ಯೂನಿಪಾರಂ ಬಿಟ್ರೆ ಬ್ಯಾರೆ ಬಟ್ಟೆ ಆಕಾಕೆ ಅರಿ-ಅರ-ಬ್ರಮ್ಮಾದಿಗುಳ್ಗೂ ಉಕುಂ ಇಲ್ಲ.

ಮುತ್ತೋಜಿ: ಬೊಗ್ಳು ನೀನೆಂಗ್ ಬಂದೆ?

ರನ್ನೋಜಿ: ಬೊಗ್ಳು ನೀನ್ಯಾಕ್ ಬಂದೆ?

ಸಿದ್ದಪ್ಪಾಜಿ: ಅಪ್ಪಾ ಪಾಂಚಾಳ ರಾಜ್‌ಗುಳಾ, ನಾನು ರಾಜಬೊಪ್ಪಣ ಪುರದಲ್ಲಿ ಮೂರ್ತವಾಗಿರತಕ್ಕಂತ ಗುರುಮೂರ್ತಿ ಮಂಟೇಸ್ವಾಮಿಯವರ ಸಿಸು ಮಗ. ಮೊನ್ನೆ ರಾತ್ರಿ ಯೋಗದಿಟ್ಟಿ ಒಳ್ಗೆ ನಮ್ ಗುರುಗುಳ್ಗೆ ಏನು ಗೊತ್ತಾಯ್ತಪ್ಪಾಂದ್ರೆ, ಇನ್ನು ಮೂರ್ ತಿಂಗ್ಳಿಗ್ ಸರ್ರ್ಯಾಗಿ ಕಲಿ ಉಟ್ತದೆ. ಲೋಕ ನಾಸ ಆಗ್ತದೆ. ಅದುಕ್ ಮೊದ್ಲು ನಮ್ ಗುರುಗುಳ್‌ಗೋಸ್ಕರ ನಾವು ಪಾತಾಳ್ ಬಾವಿ ತಗುಸ್‌ಬೇಕು. ಅದುಕ್ಕಾಗಿ ಕಬ್ಣ ಕೇಳಕ್ಕೆ ನಿಮ್‌ತಾವ್ ಬಂದಿದೀವಪ್ಪ.

ಚಿನ್ನೋಜಿ: ಕಬ್ಣ ಬೇಕಾರೆ ಇಲ್ ಬರ್ಬೇಡ. ಆಚೆ ನಮ್ಮ ಶೋರೂಮ್ ಗೋಗು, ದುಡ್ಡಿಲ್ ಮಡ್ಗು.

ಸಿದ್ದಪ್ಪಾಜಿ: ನಮ್‌ತಾವು ಎತ್‌ಮಡ್ಗಕ್ಕೆ ದುಡ್ಡಿಲ್ಲ ಕಣ್ರಪ್ಪ.

ಮುತ್ತೋಜಿ: ಅಂಗಿದ್ರೆ ನಮ್‌ತಾವ್ ಕಬ್ಣ ಸಿಗಾಕಿಲ್ಲ ಕಣಪ್ಪ.

ಸಿದ್ದಪ್ಪಾಜಿ: ಅಪ್ಪಾ ಪಾಂಚಾಳರಾ, ನಾನು ನಿಮ್‌ತಾಕೆ ಬಿಕ್ಸೆ ಕೇಳಕ್ಕೆ ಬಂದಿದೀನಿ ಕಣಪ್ಪ.

ರನ್ನೋಜಿ: ಓಹೋ, ಅಂಗಿದ್ರೆ ಪುಕ್ಸಟ್ಟೆ ಕೇಳಾಕ್ ಬಂದಿದೀಯಾ?

ಚಿನ್ನೋಜಿ: ಲೇ, ಕಳ್ಳೇಕಾಯಿಯೂ ಪುಕ್ಸಟೆ ಸಿಕ್ದೆ ಇರೊ ಜಾಗದೊಳ್ಗೆ ಕಬ್ಣ ಪುಕ್ಸಟ್ಟೆ ಕೇಳಕ್ ಬಂದೀಯೇನಲೆ ತಿರ್‌ಬೋಕಿ?

ಮುತ್ತೋಜಿ: ಇವತ್ತು ಕಬ್ಣ ಅಂದ್ರೆ ಕರಿ ಚಿನ್ನ ಕಣೋ ದರ್‌ವೇಸಿ.

ಮೂವರು ರಾಜರೂ ಹಣದ ಚೀಲವನ್ನು ಗಲಗಲ ಅಲ್ಲಾಡಿಸುತ್ತ ತಮ್ಮ ವಿಶ್ವಭಾಷೆಯಲ್ಲಿ ಮಾತಾಡಿಕೊಳ್ಳುತ್ತಾರೆ.

ಸಿದ್ದಪ್ಪಾಜಿ: ಅಪ್ಪ ಪಾಂಚಾಳರೇ. ನೀವು ಬಿಕ್ಸಾ ಕೊಡಕಿಲ್ಲಾಂದ್ರ ಕಲಿ ಉಟ್ಟಿದ್ ಮ್ಯಾಗೆ, ನರಪ್ರಾಣಿಗುಳ್‌ಗೆಲ್ಲಾ ಉಳಕಾಲ ಇಲ್ಲ ಕನ್ರಪ್ಪ.

ಚಿನ್ನೋಜಿ: ಎಲಾ ಇವ್ನ. ಅವನ್ಯಾರೋ ಅವ್ನು ನಮ್ಮುನ್ನೂ ಮೀರಿದ್ ಕಲಿ. ಆ ನಿಮ್ ಕಲೀನೂ ನಮ್ ಕುಲ್ಮೆ ಹತ್ರ ಕೂಲಿ ಮಾಡ್ತಾ ಇರ್ಬೇಕು ನೋಡ್ಕ ಬಾರೋ.

ಮುತ್ತೋಜಿ: ತೊಡ್‌ಬಾರದ್ ಬಟ್ಟೆ ತೊಟ್ಕಂಡು ನೀನು ನಮ್ಮ ರಾಜ್ಯದ್ ಕಾನೂನು ಮುರ್ದಿದೀಯ. ಪುಕ್ಸಟ್ಟೆ ಕಬ್ಣ ಕೇಳಿ ನಮ್ ದೇವ್ರುರ್ಗೆ ಅವಮಾನ ಮಾಡಿದೀಯ. ಏ ಪಾರದೋರಾ ಇಡ್ಕಳ್ರೋ ಈ ನನ್ ಮಗನ್ನ.

ಪಾರದವರು ಹಾಗೇ ಮಾಡುತ್ತಾರೆ.

ಚಿನ್ನೋಜಿ: ಈ ನನ್ ಮಗನ್ ಜತೀಗೆ ವಸಿ ಆಟ ಆಡವ. ಏ ತಿರ್‌ಬೋಕಿ, ನೀನ್ ಕೇಳ್ದಷ್ಟು ಕಬ್ಣ ಕೊಡ್ತೀವಿ. ಆದ್ರೆ ನೀನು ನಾವ್ ಕೊಟ್ಟಿದ್ ಪರೀಕ್ಸೆ ಗೆದ್‌ಗಬೇಕು.

ಸಿದ್ದಪ್ಪಾಜಿ: ಯಾವುದಪ್ಪಾ ಆ ಪರೀಕ್ಸೆ?

ರನ್ನೋಜಿ: ನಾವು ಈರೋಪಿನ ಈರ್‌ರಾಜನ್ಗೆ ಒಂದು ಕಬ್ಣದ್ ಕುದ್ರೆ ಮಾಡಿದೀವಿ. ಅದರ್ ಮ್ಯೆ ತುಂಬಾ ಕತ್ತಿ-ಚೂರಿ, ಒಟ್ಟೇ ತುಂಬ ಮದ್ದು-ಗುಂಡು. ಆ ಕುದ್ರೆ ಅತ್ಕಂಡು ನೀನು ನಮ್ಮ ಆಲ್‌ನಂತ ಅಲ್ಲೂಗ್ರ್ನ ಏಳ್‌ಕಿತ ತಿರುಗ್ಬಂದ್ರೆ ನೀನು ಕೇಳಿದ್ಕಿಂತಾ ಮೂರ್ ಪಟ್ಟು ಕಬ್ಣ ಕೊಡ್ತೀವಿ. ತಯಾರ್ ತಾನೆ?

ಸಿದ್ದಪ್ಪಾಜಿ: ಅಪ್ಪಾ, ಆ ಕುದ್ರೆ ಮ್ಯಾಲೆ ನೊಣ ಕುಂತ್ರೆ, ನೊಣ ಕತ್ರುಸೋಯ್ತದೆ. ಉಳ ಕುಂತ್ರೆ ಉಳ ಕತ್ರುಸೋಯ್ತದೆ.

ಚಿನ್ನೋಜಿ: ಕಬ್ಣ ಬೇಕಾ, ಇದ್ ಮಾಡು. ಇಲ್ಲಾ ನಿನ್ನ ನಮ್ ಕೊತ್ವಾಲನ್ ಕೈಲಿ ಕತ್ತುರ್ಸಿ ಚೆಲ್ಲಿಸ್ತೀವಿ. ಏ ಕೊತ್ವಾಲ... ಓಗಲಾ, ಆ ಕಬ್ಣುದ್ ಕುದ್ರೆ ತಕ ಬಾ.

ಕೊತ್ವಾಲನ ನಿರ್ಗಮನ. ಉಳಿದವರು ನಿಶ್ಚಲ.

ಡಂಗೂರದವನ ಪ್ರವೇಶ.

ಡಂಗೂರದವ: ಬನ್ರಪ್ಪೋ ಎಲ್ಲಾ ಬನ್ನಿ
ಊರ ಚೌಕಕೆ ಎಲ್ಲಾ ಬನ್ನಿ
ಈವತ್ತ್ಯಾವನೋ ಪರದೇಸಿ
ಪಾವಾಡವನ್ನ ಮೆರೀತಾನಂತೆ

ಕಬ್ಣದ್ ಕುದ್ರೆ ಪತ್ಕಂಡು
ಊರ ತಿರುಗು ಬತ್ತಾನಂತೆ ॥

ನೀಲಗಾರ ೧: ಬಂತು, ಅತ್ತಾಗ್ ನೋಡು. ಕುದ್ರೆ ಬಂದೇ ಬುಡ್ತು.

ಕೊತ್ವಾಲನ ಪ್ರವೇಶ

ಚಿನ್ನೋಜಿ: ಹೂಂ....!

ಕೊತ್ವಾಲ ರಂಗದ ಪಾರ್ಶ್ವಕ್ಕೆ ಸಿದ್ದಪ್ಪಾಜಿಯನ್ನು ಎಳೆದುಕೊಂಡು ಹೋಗುತ್ತಾನೆ.

ನೀಲಗಾರ ೧: ಅಗೋ ಅಗೋ ಆ ಕುದ್ರೆ ಅತ್ತುಕ್ ಓಯ್ತಾ ಅವ್ರೆ.
ನೀಲಗಾರ ೨: (ನೀಲಾಗರ ೧ ವಿನ ಮೇಲೆ ಹತ್ತಿ) ಅಯ್ಯೋ ಕುಂತ್ಕಂತಾ ಅವ್ರಲ್ಲಪ್ಪೋ.
ನೀಲಗಾರ ೩: ಇನ್ನೊಂದ್ ನಿಮುಸ್ದೊಳ್ಗೆ ಅವುರ್ ಕತೆ ಮುಗೀತು.
ನೀಲಗಾರ ೪: ಏಯ್, ಅಗೋ ಆ ಕಬ್ಣದ್ ಕುದ್ರೆ ಕೀಲ್‌ಕುದ್ರೆ ಆಯ್ತು.

ಸಿದ್ದಪ್ಪಾಜಿ ಕೀಲುಕುದುರೆ ಕುಣಿತದಲ್ಲಿ ಪ್ರವೇಶ

ನೀಲಗಾರರು: ಪಾಂಚಾಳರ ಕಬ್ಣದ್ ಕುದ್ರೆ
ಜೀವುದ್ ಕುದ್ರೆ ಆಗಿ ಹೋಯ್ತು
ಕೆಳಗೆ ಬೂಮಿ ಬಿಡುತಾದೆ
ಮೇಲಾಕಾಸ ಹೊಗುತಾದೆ
ಪಾತಾಳ್ಕೆ ಇಳುಗುತಾದೆ
ನಕ್ಸತ್ರ ಮುಟ್ಟುತಾದೆ ॥

ಕೀಲುಕುದುರೆ ಕುಣಿತ ಮುಂದುವರಿಯುತ್ತದೆ.

ನೀಲಗಾರ ೧: ಒಂದೇ ಒಂದು ಗಳಿಗೆ ಒಳ್ಗೆ ಆ ಕಬ್ಣದ್ ಕುದ್ರೆ ಜೀವುದ್ ಕುದ್ರೆ ಆಗಿ, ದೇವದಾನವ ಲೋಕ, ನರಲೋಕ, ಕಿನ್ನರ ಲೋಕ, ನಾಗಲೋಕ, ಅತಳವಿತಳ ಪಾತಾಳ ರಸಾತಲ ತಳಾತಳ ಎಲ್ಲಾ ಸುತ್ಕಂಡು ಹಲಗೂರಿನ ಮ್ಯಾಲೆ ಇಳುಗು ತಾದೆ ಮಾಯದ್ ಕುದ್ರೆ.
ಸಿದ್ದಪ್ಪಾಜಿ: ಅಪ್ಪಾ ಪಾಂಚಾಳರಾಜ್ರು. ಈ ಪವಾಡವನ್ನ ನಾವ್ ಗೆದ್ಗಂಡೋ. ಈಗಲಾದ್ರೂ ನಮ್ ಬಿಕ್ಸೆ ಕೊಟ್ಟೀರೋ ಇಲ್ವೋ?
ಚಿನ್ನೋಜಿ: ಮಾಟ್‌ಗಾರ!
ರನ್ನೋಜಿ: ಮಂತ್ರಗಾರ!
ಮುತ್ತೋಜಿ: ಯಕ್ಸಿನೀಗಾರ!

ಬಹಳ ಬಿರುಸಾಗಿ ತಮ್ಮ ವಿಶ್ವಭಾಷೆಯಲ್ಲಿ ಮಾತಾಡಿಕೊಳ್ಳುತ್ತಾರೆ.

ಚಿನ್ನೋಜಿ: ಏಯ್ ಪಾರದೊರ. ಈ ನನ್ಮಗನ್ ಕೈಯಿಕಾಲು ಕಟ್ರಲಾ.

ಕೂಲಿಯವರೆಲ್ಲಾ ಸಿದ್ದಪಾಜಿ ಕಡೆ ನುಗ್ಗುತ್ತಾರೆ.

ಸಿದ್ದಪ್ಪಾಜಿ: ಅಪ್ಪಾ, ನಿಮ್ ಕಬ್ಣದ್ ಕುದ್ರೆ ಕರುಗುದ್ರೂ ನಿಮ್ ಮನ್ಸು ಅನ್ನದು ಕರಗ್ನಿಲ್ಲ.

ಚಿನ್ನೋಜಿ: ಏ ಮಾಟ್‌ಗಾರ, ನೀನ್ ಕೇಳಿದ್ ಅತ್ರೋಷ್ಟ್ ಕಬ್ಣ ಕೊಡ್ತೀವಿ. ನೀನ್ ನಮ್ಗೆ ಇನ್ನೊಂದ್ ಪವಾಡ ನಡುಸ್‌ಕೊಟ್ರೆ ಮಾತ್ರ.

ನೀಲಗಾರರು: ನಮ್ಮ ಕಬ್ಬುಣನೆಲ್ಲಾ ಚಿನ್ನ ಮಾಡೋ
ನಮ್ಮ ಬೆಟ್ಟನೆಲ್ಲಾ ಚಿನ್ನ ಮಾಡೋ
ನಮ್ಮ ಸಮುದ್ರನೆಲ್ಲಾ ಚಿನ್ನ ಮಾಡೋ
ನಮ್ಮ ಕೂಲಿಗುಳ್ನೆಲ್ಲಾ ಚಿನ್ನ ಮಾಡೊ ॥

ಚಿನ್ನೋಜಿ: ಅಷ್ಟೇ ಅಲ್ಲ, ನೀನು ಇನ್ಮೇಲೆ ಆ ನಿನ್ನ ಗುರು, ಪಾಪಿ ಪರದೇಸಿ ತಾಕೆ ಓಗಂಗಿಲ್ಲ. ನಮ್ ಸ್ಯಾವೆ ಮಾಡ್ಕಂಡು ಇಲ್ಲೇ ಬಿದ್ದಿರ್‌ಬೇಕು. ಇಷ್ಟ್ ಮಾಡುದ್ರೆ.

ನೀಲಗಾರರು: ನೀನು ಕೇಳಿದ ಹೊನ್ನು ಕೊಡುತೀವಿ
ನೀನು ಕೇಳಿದ ಅನ್ನ ಕೊಡುತೀವಿ
ನೀನು ಕೇಳಿದ ಎಣ್ಣು ಕೊಡುತೀವಿ
ನೀನು ಕೇಳಿದ ಸುಕ ಕೊಡುತೀವಿ ॥

ಸಿದ್ದಪ್ಪಾಜಿ: ಅಪ್ಪಾ ಪಾಂಚಾಳ್ರಾ, ಈಟೆಲ್ಲಾ ಸಂಪತ್ತಿದ್ರೂ ನಿಮ್ಗೆ ದುಡ್ಡಿನ ದಾವ್ರಾ ತೀರಿಲ್ಲ. ನಿಮ್ ದುರಾಸೆ ಒಳ್ಗಿಂದ ಬೆಟ್ಟ, ಗುಡ್ಡ, ನದಿ, ಸಮುದ್ರ, ಪಂಚಭೂತಗೋಳು ಎಲ್ಲಾವೂ ಚಿತ್ರಹಿಂಸೆಯಿಂದ ಎಂಗ್ ಒದ್ದಾಡ್ತಾ ಅವೆ, ಗೋಳಾಡ್ತಾ ಅವೆ ಕೇಳಿಸ್ಕಳಿ.

ಅನೇಕ ಧ್ವನಿಗಳ ವಿಕಾರವಾದ ಕೂಗು ಒಟ್ಟಿಗೇ ಕೇಳಿ ಬರುತ್ತದೆ.

ಮುತ್ತೋಜಿ: (ಜೋರಾಗಿ ನಕ್ಕು) ಉಚ್ ನನ್ಮಗ್ನೇ, ಅದು ಕೂಗಲ್ಲ ಕಣೋ, ಸಂಗೀತ, ಅದನ್ ಕೇಳ್ಕಂಡೇ ನಾವು ದಿನಾ ನಿದ್ದೆ ಓಗದು.

ರಸ್ನೋಜಿ: ಏ. ನಮ್ ಮಾತ್ ಕೇಳ್ತೀಯಾ? ಇಲ್ಲ. ನಿನ್ನ ತೋಪಿನ ಬಾಯಿಗೆ ಕಟ್ಟಾನಾ?

ಚಿನ್ನೋಜಿ: ಏಯ್, ಆ ಯಮನ್ ಕರ್ಸಿ ಇವುನ್ಗ ನೇಣಾಕುಸ್ರುಲಾ.

ಸಿದ್ದಪ್ಪಾಜಿ: ಅಪ್ಪಾ ಪಾಂಚಾಳರಾ, ನಿಮ್ಮ ನೂರಾರು ಇಂಸೆಗಳುನ್ನ ಈ ಬೂಮಿ ತಡ್ಕಂಡದೆ. ನೀವು ಕೊಟ್ಟ ಚಿತ್ರ ಇಂಸೆಗುಳನ್ನ ಬೂಮಿಗೆ ದೊಡ್ಡೋರಾದ ಮಂಟೇದಯ್ಯನೋರ ಸಿಸ್ಯನಾದ ನಾನು ನುಂಗ್‌ಕಂಡದೀನಿ. ಇನ್ನು ನಿಮ್ಗೆ ಬುದ್ದಿ ಬರಾಕಿಲ್ಲ. ಕಾಲಜ್ಞಾನದಲ್ಲಿ ಏಳಿರೋವಂಗೆ ನೀವು ನಾಸವಾಗಲೇಬೇಕು.

ಸಿದ್ದಪ್ಪಾಜಿ ಢಮರುಗ ಬಾರಿಸುತ್ತಾ.

ಅಮ್ಮಾ ಜಲದೇವತೆಗಳಾ. ನೆಲದೇವತೆಗಳಾ. ವಾಯುದೇವತೆ. ಅಗ್ನಿ-ಆಕಾಸ ದೇವತೆಗುಳಾ, ಮಾರೀರಾಗಿ ಕಾಡು-ಮೇಡು ಒಕ್ಕಂಡು ಗೋಳಾಡ್ತಾ ಇರೋರಾ, ಬನ್ನಿ...ಬನ್ನಿ....ಬನ್ನಿ..... ಈ ನರ ರಕ್ಕಾಸರನ್ನ ಬಕ್ಸನೆ ಮಾಡಿ.

ನೀಲಗಾರರು: ಉತ್ನಳ್ಳಿ ಉರುಕಾತೆ ನೀನು ಬಾರೆ
ಬೆಟ್ಟದ ಚಾಮುಂಡಿ ನೀನು ಬಾರೆ ॥
ಕೊತ್ತತ್ತಿ ಜಾಳಕಮ್ಮ
ಕೊಡಂಬಳ್ಳಿ ಬಿಸುಲ್‌ಮಾರಿ ।
ಕಬ್ಬಾಳದ್ ಕರೀದುರ್ಗಿ
ಹೆಬ್ಬಾಳದ್ ಇರೀ ಮಾರಿ ।
ಸಾಸೂರ್ ಒನ್ನಾದೇವಿ
ಮೂಗೂರ್ ತಿಬ್ಬಾದೇವಿ
ಜೊತೆಯಾಗಿ ನೀವು ಬರ್ರೆ ॥

ವಿಕಾರ ರೂಪದ ಮಾರಿಯರು ಕೂಗುತ್ತಾ, ಕುಣಿಯುತ್ತಾ ಪ್ರವೇಶ. ರಾಜರು ಓಡಿ ಹೋಗಲೆತ್ನಿಸುತ್ತಾರೆ. ಕೂಲಿಯವರು ಅವರನ್ನು ಅಡ್ಡಗಟ್ಟಿ ಹಿಡಿಯುತ್ತಾರೆ. ಅವರು ಮಾರಿಯರಿಗೆ ಹಣದ ಚೀಲ ಕೊಡಲು ಹೋಗುತ್ತಾರೆ. ಮಾರಿಯರು ಅವರನ್ನು ಹೊತ್ತುಕೊಂಡು ನಿಷ್ಕ್ರಮಣ.

ನೀಲಗಾರರು: ಸಿದ್ದಯ್ಯ ಸ್ವಾಮಿ ಬನ್ನಿ ।
ಪಾವಾಡ ಗೆದ್ದಯ್ಯ ನೀವೆ ಬನ್ನಿ ॥

ನೀಲಗಾರ ೧: ಏಳುಜನ ಪಾಂಚಾಳರನ್ನ ಮಾರೀ ಮಸಣೇರ ಪಾಲುಮಾಡಿ ನಮ್ಮ

ಸಿದ್ದಪ್ಪಾಜಿಯೋರು ಆ ಮಾರಿಮಸಣೀರ ಕೈಯೊಳಗೆ ಬೇಕಾದಷ್ಟು ಕಬ್ಣ ಹೊರಸ್ಕಂಬಂದ್ರು ಗುರು ಮಂಟೇದಯ್ಯನೋರಿಗಾಗಿ.

ಸಿದ್ದಪ್ಪಾಜಿ ನಿಷ್ಕ್ರಮಣ.

ನೀಲಗಾರರು: ಸಿಸ್ಯರೆಲ್ಲಾ ಸೇರಿಕಂಡು
ಪಾತಾಳಬಾವಿ ತೆಗಿಸುತ್ತಾರೆ
ಚಿನ್ನದ ಮಂಚ ಕೆತ್ತಿಸುತ್ತಾರೆ
ಬೆಳ್ಳಿಕಾಲು ಮಾಡಿಸುತಾರೆ ॥

ನೀಲಗಾರರು ಬಾವಿಯಾಕಾರದಲ್ಲಿ ನಿಲ್ಲುತ್ತಾರೆ. ಮಂಟೇಸ್ವಾಮಿ. ಸಿದ್ದಪ್ಪಾಜಿ ಇತರ ಶಿಷ್ಯರು ಪ್ರವೇಶ.

ಮಂಟೇಸ್ವಾಮಿ: ಅಪ್ಪಾ ಸಿಸು ಮಕ್ಕಳಾ. ನಾವಿನ್ನ ಪಾತಾಳಬಾವಿ ಒಕ್ಕು ಕಲಿ ಉಟ್ದಾಗ ಬೂಮ್ ತಾಯಿ ದಿಕ್ಕಾಪಾಲಾಗ್ದಂತೆ ಇಡುದ್ ನಿಲ್ಲುಸ್ತೀವಿ. ನೀವಿನ್ನ ನಿಮ್ ನಿಮ್ ದಾರಿ ನೋಡ್ಕಳಿ. ನೀವ್ ಎಲ್ಲಿದ್ರೂ ಬೂಮಿಮ್ಯಾಗಳ ಜನ ಆಯ ತಪ್ದಂಗ್ ನೋಡ್ಕಳಿ. ಆ ಕಲಿ ಬಂದಾಗ.

ನೀಲಗಾರರು: ಏಳು ಒಂಟೆಯ ಮೇಲೆ
ವೇದ ಪುರಾಣ ಏರಿಕಂಡು
ದೇವಮಾನುವರ್ನೆಲ್ಲಾ ಸೆರೆ ಇಡ್ಯಕ್
ಕಲಿ ಪುರೂಸ ಬತ್ತಾನೆ

ಮಂಟೇಸ್ವಾಮಿ: ಆವಾಗ. ನೀವು ಅವನ ವೇದ ಪುರಾಣಗಳ್ನ ಸುಟ್ಟು ಬೂದಿ ಮಾಡಿ ಅಣೇಗೆ ಅಚ್ಕಳ್ರಪ್ಪಾ. ಉಳಿಮುಟ್ಟಿದ್‌ಲಿಂಗ ಇಡ್ಕಂಡ್ ಐಕ್ಯವಾಗ್ರಪ್ಪ.

ಮಂಟೇಸ್ವಾಮಿ 'ಬಾವಿ' ಹೋಗುತ್ತಾನೆ.

ನೀಲಗಾರರು: ಆಗಲೀಗ ನಮ್ಮ ಸ್ವಾಮಿಯೋರು
ಎಲ್ಲ ಅಪ್ಪಗೆ ಕೊಟ್ಟು ಬಿಟ್ರು
ಆಕಾಸ ಒದಿಕೆ ಮಾಡಿಕಂಡ್ರು
ಬೂಮಿ ತೊಟ್ಲು ಮಾಡಿಕಂಡ್ರು
ಚಂದ್ರು ಸೂರ್ಯಾದಿಗಳ
ತಾನ ದೀವಿಗೆ ಮಾಡಿಕಂಡ್ರು
ನರರ ಹಂಗು ನಮಗೆ ಬೇಡ
ನಮ್ಮ ಹಂಗು ನರರಿಗಿರಲಿ ॥

ಎಲ್ಲ ನಟರ ಪ್ರವೇಶ

ನಟರು: ಮಂಗಳಾರತಿ ಎತ್ತೀರೋ
ಮಂಟೇದಲಿಂಗಯ್ಯ
ನೀನೇ ಗತಿಯೆಂದು
ನೀನೇ ಮತಿಯೆಂದು
ಹೂವ ಚೆಲ್ಲುತ ಬನ್ನೀರೊ
ಸಿದ್ದಪ್ಪಾಜಿಯವುರ್ಗೆ ।
ದವನ ಚೆಲ್ಲುತ ಬನ್ನೀರೊ
ರಾಚಪ್ಪಾಜಿಯವುರ್ಗೆ ।
ಕಮಲ ಚೆಲ್ಲುತ ಬನ್ನೀರೊ
ದೊಡ್ಡಮ್ಮಾಜಿಯವುರ್ಗೆ ।

ಮಂಗಳಾರತಿಯನಂತರ ನೀಲಗಾರರನ್ನುಳಿದು ಎಲ್ಲ ನಟರ ನಿಷ್ಕ್ರಮಣ. ಬಾವಿಯಾಗಿದ್ದ ನೀಲಗಾರರು ಪ್ರೇಕ್ಷಕರ ಮುಂದೆ ಬಂದು

ನೀಲಗಾರ ೧: ಆದಿ ಕಲ್ಯಾಣಕ್ಕೆ ಶರಣು
ಮಂಟೇದಲಿಂಗೈಯ್ಯ ನಿಮ್ಮ
ಪಾದಕ್ಕೆ ಶರಣು ॥
ಇಂಗೆ ನಮ್ಮಪ್ಪಾಜಿಯೋರು, ನಮ್ಮ ಎದೆಬಾವಿವಳೀಕಿಳ್ದು ನಮ್ಮ ನಾಲ್ಗೆ ಮ್ಯಾಲಿಂದ ಮ್ಯಾಗೆ ಚಿಮ್ಮುತಾ ಅವ್ರೆ. ದರೆಯನ್ನು ಗೆದ್ದ ದೊಡ್ಡೋರು ನಮಗೇನಪ್ಪಾ ಕೊಟ್ರು.....

ನೀಲಗಾರ ೨: ಈ ಮೂರು ನಾಮದ ತಂಬೂರಿ.

ನೀಲಗಾರ ೩: ಈ ಕೊಳ್ಳ ರುದ್ರಾಕ್ಷಿ.

ನೀಲಗಾರ ೪: ಈ ಚಿಟಿಕೆ, ಡಗ್ಗರ, ಡಮರು.

ನೀಲಗಾರ ೧: ಈ ಬಡತನದ ಬಿಕ್ಸೆ.

ನೀಲಗಾರ ೨: ಇರೀಕ್ರಾ-ಕಿರೀಕ್ರಾ, ಅಮ್‌ದೀರ-ಅಪ್‌ದೀರ, ರಾತ್ರೆಯೆಲ್ಲಾ ನಾವು ಕತೇ ಮಾಡಿದೀವಿ. ಈಗ ಒತ್ತು ಉಟ್ತಾ ಐತೆ. ನಾವಿನ್ನ ಜೀತಕ್ಕೋಗ್‌ಬೇಕು. ನೀವು ನಮಗೆ ದಾನ ಕೊಡಿ.

ನಾಲ್ವರೂ: ದಾನ ಕೊಡಿ.
ದಾನ....
ದಾನ....

ನೀವೂ ದಾನ ಕೊಡಿ.

ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್‌ನ ಇತರೆ ಪ್ರಕಟಣೆಗಳು

ಚೀನಾದ ವಿದ್ಯಾರ್ಥಿ ಚಳುವಳಿ – ವಿಲಿಯಂ ಹಿಂಟನ್
ಬೆಲೆ ರೂ. 1.25

ಗಣಪತಿ – ದೇವಿ ಪ್ರಸಾದ್ ಚಟ್ಟೋಪಾಧ್ಯಯ
ಬೆಲೆ ರೂ. 1.50

ಕೋಮುವಾದಿ ಚರಿತ್ರೆ ಮತ್ತು ರಾಮನ ಅಯೋಧ್ಯೆ – ಆರ್. ಎಸ್. ಶರ್ಮ
ಬೆಲೆ ರೂ. 2.50

ಆರ್ಯರು – ಡಿ. ಡಿ. ಕೊಸಾಂಬಿ
ಬೆಲೆ ರೂ. 2.00

ಕ್ರಾಂತಿಯ ಸಿರಿ ಮೊಳಕೆಯಲ್ಲಿ *(ಮಾವೋ ಬಾಲ್ಯ ಪರಿಚಯ)* – ಎಡ್ಗರ್ ಸ್ನೋ
ಬೆಲೆ ರೂ. 7.00

ಗಾಂಧಿ ಮತ್ತು (ಅ)ಹಿಂಸೆ – ಸುನಿತಿ ಕುಮಾರ್ ಘೋಷ್
ಬೆಲೆ ರೂ. 4.00

GhATTa ಸರ್ಪ – ಸುರೇಶ್ ಕುಮಾರ್
ಬೆಲೆ ರೂ. 5.00

ಇದೇ ರಾಮಾಯಣ – ಬಂಜಗೆರೆ ಜಯಪ್ರಕಾಶ್
ಬೆಲೆ ರೂ. 12.00

ದೋಪ್ದಿ (ದ್ರೌಪದಿ) ಹಾಗೂ ಇತರ ಕಥೆಗಳು – ಮಹಾಶ್ವೇತಾದೇವಿ
ಬೆಲೆ ರೂ. 15.00

ವೇದಗಳಲ್ಲಿ ಏನಿದೆ? – ಕೊಡವಟಿಗಂಟಿ ಕುಟುಂಬರಾವ್
ಬೆಲೆ ರೂ. 6.00



ಮಂಟೇಸ್ವಾಮಿ ಮೋಡಿಯಲ್ಲಿ

ಮೈಸೂರು ಜಿಲ್ಲೆ, ಕೊಳ್ಳೆಗಾಲ, ಚಾಮರಾಜನಗರ, ನಂಜನಗೂಡು ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಭಾವಿ ದೇವರುಗಳಲ್ಲಿ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಪ್ರಮುಖರು. ದಲಿತ ವರ್ಗದಿಂದ ಹುಟ್ಟಿಬಂದ ಈ 'ಪವಾಡ' ಪುರುಷರು ತಮ್ಮ ಸಾಧನೆಗಳಿಂದ ದೈವತ್ವಕ್ಕೇರಿದವರು.....

.....ಮಂಟೇಸ್ವಾಮಿಯಂಥ ಮಹಾ ಸಾಧಕನನ್ನು, ಬಂಡಾಯಗಾರನನ್ನು ರಂಗದಮೇಲೆ ಮೂಡಿಸುವುದು ಸುಲಭದ ಕೆಲಸವೇನಲ್ಲ. ಆ ಕೆಲಸವನ್ನು ಆದಷ್ಟು ಅಚ್ಚುಕಟ್ಟಾಗಿ ಸುರೇಶ್ ಸಾಧಿಸಿದ್ದಾರೆ.

– ಸುದ್ದಿ ಸಂಗಾತಿ

ಅವ್ಯಾಹತವಾಗಿ ಬಿಗಿ ಹಿಡಿತದಲ್ಲಿಡುವಂತಹ ಕಥಾವಸ್ತು, ಉತ್ತಮ ನಿರೂಪಣೆ ಮತ್ತು ನಿರ್ದೇಶನದ ಕೌಶಲ್ಯವನ್ನು ಸಮ್ಮಿಳಿತಗೊಳಿಸಿ ಪ್ರೇಕ್ಷಕರ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವಂತೆ ಮಾಡಿದ ಪ್ರಯೋಗ.

– ಕನ್ನಡ ಪ್ರಭ

ಶಿವಪ್ರಕಾಶ್ ಅವರು ಮಂಟೇಸ್ವಾಮಿಯ ಭವ್ಯ ವ್ಯಕ್ತಿತ್ವವನ್ನು ನಮ್ಮ ಕಣ್ಣಮುಂದೆ ಕಡೆದು ನಿಲ್ಲಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.... ನಾಟಕ ಮುಗಿದಮೇಲೂ ಮಂಟೇಸ್ವಾಮಿ ಪ್ರೇಕ್ಷಕರ ಮನಸ್ಸನ್ನು ಗಾಢವಾಗಿ ಕಾಡಲಾರಂಭಿಸುತ್ತಾನೆ.... ಮಂಟೇಸ್ವಾಮಿಯ ಪಾತ್ರದಲ್ಲಂತೂ ಧನಂಜಯ ಅದ್ಭುತವಾಗಿ ಅಭಿನಯಿಸಿದ್ದಾರೆ.

– ವಾರ ಪತ್ರಿಕೆ

..... The play rose above banal interpretations of folk legends and myths by meticulously avoiding simplistic readings of folk symbolism.

..... The two passions "ego" and "sex" take the form of a tiger and a multitude of snakes respectively. Overcoming these passions involves subduing them and not killing them.

– ***Deccan Herald***

..... The structure of the performance combined vigorous rhythms of folk dance and narrative prose with soothing melodies of folk songs. .....The overall attempt seemed to have been to use folk techniques in a functional rather than a decorative manner.

– ***The Hindu***